ಚೋಮನದುಡಿ ಕಾದಂಬರಿ ಕುರಿತ ವಿಮರ್ಶೆಗಳ ಅಧ್ಯಯನ

ಕನ್ನಡ ಎಂ. ಫಿಲ್ . ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ,
ಇವರಿಗೆ ಸಲ್ಲಿಸಲು ಸಿದ್ಧಪಡಿಸಿರುವ ಸಂಶೋಧನ ನಿಬಂಧ

ನಿಬಂಧಕಾರರು
ಎಸ್. ಡಿ. ದಿನೇಶ್ ಕುಮಾರ್

ಮಾರ್ಗದರ್ಶಕರು
ಡಾ. ಮಹಾಬಲ್ ಭಟ್

ಡಾ. ಹಾಮಾನಾ ಸಂಶೋಧನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ, ದಕ್ಷಿಣ ಕನ್ನಡ

ಕನ್ನಡ ವಿಶ್ವವಿದ್ಯಾನಿಲಯ
ಹಂಪಿ, ಹೊಸಪೇಟೆ, ಬಳ್ಳಾರಿ

ಚೋಮನದುಡಿ ಕಾದಂಬರಿ ಕುರಿತ ವಿಮರ್ಶೆಗಳ ಅಧ್ಯಯನ

ಕನ್ನಡ ಎಂ. ಫಿಲ್ . ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ,
ಇವರಿಗೆ ಸಲ್ಲಿಸಲು ಸಿದ್ಧಪಡಿಸಿರುವ ಸಂಶೋಧನ ನಿಬಂಧ

ನಿಬಂಧಕಾರರು
ಎಸ್. ಡಿ. ದಿನೇಶ್ ಕುಮಾರ್

ಮಾರ್ಗದರ್ಶಕರು
ಡಾ. ಮಹಾಬಲ್ ಭಟ್

ಡಾ. ಹಾಮಾನಾ ಸಂಶೋಧನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ, ದಕ್ಷಿಣ ಕನ್ನಡ

ಕನ್ನಡ ವಿಶ್ವವಿದ್ಯಾನಿಲಯ
ಹಂಪಿ, ಹೊಸಪೇಟೆ, ಬಳ್ಳಾರಿ

ನಿಬಂಧಕಾರರ ಘೋಷಣಾ ಪತ್ರ

'ಚೋಮನದುಡಿ ಕಾದಂಬರಿ ಕುರಿತ ವಿಮರ್ಶೆಗಳ ಒಂದು ಅಧ್ಯಯನ' ಎಂಬ ವಿಷಯದ ಬಗ್ಗೆ ನಾನು ಕನ್ನಡವಿಶ್ವವಿದ್ಯಾಲಯ, ಹಂಪಿ ಇವರಿಗೆ ನಾನು ಎಂ.ಫಿಲ್.ಪದವಿಗಾಗಿ ಈ ನಿಬಂಧವನ್ನು ಡಾ.ಮಹಾಬಲ್‌ಭಟ್, ಮುಖ್ಯಸ್ಥರು, ಸಂಸ್ಕೃತ ವಿಭಾಗ, ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ ಇವರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿ, ರಚಿಸಿದ್ದೇನೆ. ಈ ನಿಬಂಧವನ್ನು ಇಡಿಯಾಗಿ ಅಥವಾ ಬಿಡಿಯಾಗಿ ಯಾವುದೇ ಪದವಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:

ನಿಬಂಧಕಾರರು

ಮಾರ್ಗದರ್ಶಕರ ಪ್ರಮಾಣ ಪತ್ರ

ಎಸ್.ಡಿ.ದಿನೇಶ್‌ಕುಮಾರ್‌ರವರು ನನ್ನ ಮಾರ್ಗದರ್ಶನದಲ್ಲಿ 'ಚೋಮನದುಡಿ ಕಾದಂಬರಿ ಕುರಿತ ವಿಮರ್ಶೆಗಳ ಒಂದು ಅಧ್ಯಯನ' ಎಂಬ ವಿಷಯವನ್ನು ಕನ್ನಡ ವಿಶ್ವ ವಿದ್ಯಾಲಯ, ಹಂಪಿ ಇವರಿಗೆ ಎಂ.ಫಿಲ್.ಪದವಿಗಾಗಿ ಈ ನಿಬಂಧವನ್ನು ರಚಿಸಿದ್ದಾರೆ. ಇದನ್ನು ಇಡಿಯಾಗಿ ಅಥವಾ ಬಿಡಿಯಾಗಿ ಯಾವುದೇ ಪದವಿಗೆ ಬಳಸಿಕೊಂಡಿಲ್ಲವೆಂದು ಈ ಪ್ರಮಾಣ ಪತ್ರವನ್ನು ನೀಡುತ್ತೇನೆ.

Mahabala Bhatta

ದಿನಾಂಕ: 3.10.2008.

ಮಾರ್ಗದರ್ಶಕರು

ಪರಿವಿಡಿ:

ಚೋಮನ ದುಡಿ ಕಾದಂಬರಿ ಕುರಿತ ವಿಮರ್ಶೆಗಳ ಅಧ್ಯಯನ

ಅಧ್ಯಾಯ–1
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಅಧ್ಯಾಯ–2
ಶಿವರಾಮ ಕಾರಂತರ ಜೀವನ ಮತ್ತು ಸಾಹಿತ್ಯ.

ಅಧ್ಯಾಯ–3
ಕಾದಂಬರಿ ಮತ್ತು ವಿಮರ್ಶೆಯ ಅರ್ಥ ಮತ್ತು ಬೆ ಳವಣಿಗೆಯ ಸಂಕ್ಷಿಪ್ತ ಪರಿಚಯ.

ಅಧ್ಯಾಯ–4
ಕಾರಂತರ ಕಾದಂಬರಿಗಳ ವೈಶಿಷ್ಟ್ಯಗಳು

ಅಧ್ಯಾಯ–5
ಚೋಮನ ದುಡಿ ಕುರಿತ ವಿಮರ್ಶೆಗಳ ಅಧ್ಯಯನ
ಅ.ಚೋಮನದುಡಿ ಕಾದಂಬರಿಯಲ್ಲಿ ಆಧುನಿಕ ಪ್ರಕ್ರಿಯೆ
–ಟಿ.ಪಿ.ಅಶೋಕ–

ಆ.ಚೋಮನದುಡಿ ಕಾದಂಬರಿಯಲ್ಲಿ ಮಹಿಳೆ
(ಗ್ರಾಮೀಣ ಮಹಿಳೆ ಮತ್ತು ವೃದ್ದೆಯರು) –ಡಿ.ವಿಜಯ

ಇ. ಕಾರಂತರು ಕಾಣಿಸುವ ಮಹಿಳಾ ಲೋಕ
–ಡಾ। ಬಿ.ಎನ್.ಸುಮಿತ್ರಾ ಬಾಯಿ

ಈ. ಚೋಮನ ದುಡಿ ಕಾದಂಬರಿಯಲ್ಲಿ ಗಂಡು–ಹೆಣ್ಣು
–ಟಿ.ಪಿ.ಅಶೋಕ

ಉ.ಚೋಮನದುಡಿ ಕುರಿತ ವಿಮರ್ಶಕರ ಬರಹಗಳು
1) ಎಸ್.ಅನಂತನಾರಾಯಣರ ಬರಹಗಳು
2) ಜಿ.ರಾಜಶೇಖರ್ ರವರ ಬರಹಗಳು
3) ಡಿ.ಆರ್.ನಾಗರಾಜ್ ರವರ ಬರಹಗಳು

ಅಧ್ಯಾಯ–6
ಉಪಸಂಹಾರ
ಅನುಬಂಧ

ಅಧ್ಯಾಯ–1

:ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಸಹೃದಯಿಗಳ ಮನಸ್ಸನ್ನು ತನ್ನೊಳಗೆ ಆಕರ್ಷಿಸುತ್ತಾ ಲೀನಗೊಳಿಸುತ್ತಾ ಅವರ ಮನಸ್ಸಿಗೆ ಹಿತವನ್ನು ತನ್ಮಯತೆಯನ್ನು ಹಾಗೂ ಆನಂದಾನುಭವವನ್ನು ಉಂಟು ಮಾಡುವ ಸಾಹಿತ್ಯವೂ ಚಿರಂತನವಾದುದು. ಸಾಹಿತ್ಯವು ಯಾವುದೇ ಒಂದು ಘಟ್ಟದಲ್ಲಿಯೂ ಸಹ ತಟಸ್ಥವಾಗಿ ನಿಂತು ಕೇವಲ ಹಳೆಯ ಮೌಲ್ಯಗಳನ್ನು ಮಾತ್ರ ಗುರುತಿಸುವ ಕಾರ್ಯವಲ್ಲದೆ ಅದು ಸೂಕ್ಷ್ಮವಾದ ಹಾಗೂ ಸಮಗ್ರವಾದ ನೋಟವನ್ನು ಬೀರುತ್ತ ಆದರ್ಶ ಮೌಲ್ಯ ಗುರಿಗಳತ್ತ ಸಾಗಿ ಪರಿಹಾರವನ್ನು ಸೂಚಿಸುವ ನಿಟ್ಟಿನಲ್ಲಿ ತನ್ನ ಛಾಪನ್ನು ಆಶ್ಚರ್ಯ ಕುತೂಹಲದಾಯಕವಾಗಿಸಿದೆ. ಹಾಗಾಗಿ ಈ ಸಾಹಿತ್ಯ ಚೈತನ್ಯದಾಯಕ ವಾದುದಾಗಿದೆ. ಸಾಹಿತ್ಯ ಜಡವಾಗಿಸುವುದು ಸಾಧ್ಯವಿಲ್ಲ. ಅದು ನಿರಂತರ ಬದಲಾವಣೆಯೊಂದಿಗೆ ಹೊಸ ರೂಪವನ್ನು ಪಡೆಯುತ್ತಲೇ ಇರುತ್ತದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾದಂಬರಿ ಪ್ರಕಾರವೂ ಕೂಡ ಒಂದು. ಕಾದಂಬರಿ ಪ್ರಕಾರವೂ ಓದುಗರಿಂದ, ದೃಶ್ಯಮಾಧ್ಯಮಗಳಿಂದ ವಿವಿಧ ಮಟ್ಟದಲ್ಲಿ ಹೃದಯ ಸಂವೇದನೆಯನ್ನು ಹೊಂದಬಹುದಾದ ಒಂದು ಸಾಹಿತ್ಯ ಪ್ರಕಾರವಾಗಿದೆ. ಓದುಗರ ಮನಸ್ಸನ್ನು ಬೇಗ ಸೆಳೆಯುವ ಒಂದು ಪ್ರಕಾರವಾಗಿದೆ. ಕೆಲವು ಉತ್ತಮ ಕಾದಂಬರಿಗಳು ಸಿನಿಮಾ ಕೂಡಾ ಆಗಿವೆ. ಹಾಗೆಯೇ ಚೋಮನದುಡಿ ಕಾದಂಬರಿಯೂ ಸಹಾ ಸಿನಿಮಾ ಆಗಿದೆ.

ಒಂದು ಕಾದಂಬರಿಯನ್ನು ಕುರಿತು ವಿವಿಧ ಲೇಖಕರು ತಮ್ಮದೇ ಆದ ವಿಮರ್ಶಾ ಮಾತುಗಳಲ್ಲಿ ಲೇಖನಗಳನ್ನು, ಪ್ರಬಂಧಗಳನ್ನು ಬರೆದಿರುತ್ತಾರೆ. ಇಂತಹ ಹಲವು ಲೇಖರು ಬರೆದ ಲೇಖನಗಳನ್ನು ತೆಗೆದುಕೊಂಡು ಅಧ್ಯಯನ ನಡೆಸಿದಾಗ ತಾತ್ವಿಕ ವಿಚಾರದ ಜೊತೆಗೆ ಬೌದ್ಧಿಕ ವಿಚಾರವೂ ಬೆಳೆಯುತ್ತದೆ.

ಈ ರೀತಿಯ ಅಧ್ಯಯನ ಒಂದು ಕೃತಿಯನ್ನು ಒಳನೋಟದಿಂದ, ಬಾಹ್ಯ ನೋಟದಿಂದ ಒರೆ ಹಚ್ಚಿದ ಹಾಗೆ ಆಗುವುದು. ಹಾಗೆಯೇ ವಿವಿಧ ಲೇಖಕರಲ್ಲಿ ಇರುವ ಭಿನ್ನತೆಯನ್ನು ಹಾಗೂ ಅಭಿರುಚಿಯನ್ನು ಮತ್ತು ಸೂಕ್ಷ್ಮ ವ್ಯತ್ಯಾಸವನ್ನು ಕಾಣುವ ಹೊಸ ವಿಚಾರಗಳನ್ನು ಅನ್ವೇಷಿಸಲು ಹೊರಟಿರುವ ಪ್ರಯತ್ನವಾಗಿದೆ.

ಈ ಅಧ್ಯಯನದ ಲೇಖನಗಳಲ್ಲಿ ಇರುವ ಭಿನ್ನ ಅಂಶಗಳನ್ನು ಗುರುತಿಸಿ ಅವುಗಳನ್ನು ಇಂದಿನ ಸಮಾಜಕ್ಕೆ ಹೊಂದಿಕೆಯಾಗುವಂತೆ ತನ್ನದೇ ಆದ ಆಲೋಚನೆಯಲ್ಲಿ ವಿಚಾರ ಮಾಡುವ ಹಾಗೂ ವಿಶ್ಲೇಷಿಸುವ ಕಾರ್ಯಕ್ಕೆ ತೊಡಗಿದ್ದೇನೆ. ಹಾಗೆಯೇ ಧೋರಣೆ, ಆಶಯ ಮುಂತಾದ ವಿಚಾರಗಳನ್ನು ಒಳಗೊಂಡಿದೆ.

ಈ ಅಧ್ಯಯನದ ಮಹತ್ವ ಕುರಿತು ಒಂದೆರಡು ವಿಚಾರಗಳನ್ನು ಹೇಳಬಹುದು- ಈ ಅಧ್ಯಯನವೂ ಜ್ಞಾನ ಸಂಪಾದನೆಯ ಮಾರ್ಗವಿದ್ದಂತೆ, ಇದರಿಂದ ಅಧ್ಯಯನ ಮಾಡುವವರ ಮತ್ತು ಓದುವವರ ಜ್ಞಾನ ದಿಗಂತ ವಿಸ್ತಾರವಾಗುತ್ತದೆ. ಲೇಖನಗಳಲ್ಲಿ ಇರುವ ಸಾಮ್ಯ, ವೈಷಮ್ಯವನ್ನು ಗುರುತಿಸಿದಂತಾಗುತ್ತದೆ. ಇದು ಪರೋಕ್ಷವಾಗಿ ಮೂಲ ಕೃತಿಗಳ ಮೌಲ್ಯ ನಿರ್ಣಯ ಮಾಡಿದಂತಾಗುತ್ತದೆ. ಇಂತಹ ಅಂಶಗಳು ಈ ಅಧ್ಯಯನದಿಂದ ತಿಳಿಯಬಹುದು.

ಈ ಅಧ್ಯಯನವೂ ನಾಲ್ಕು ವಿಮರ್ಶಾ ಲೇಖನಗಳನ್ನು ಒಳಗೊಂಡಿದೆ. ಮುಖ್ಯವಾಗಿ ಟಿ.ಪಿ.ಅಶೋಕ್‌ರವರ 'ಚೋಮನದುಡಿ ಕಾದಂಬರಿಯಲ್ಲಿ ಆಧುನಿಕ ಪ್ರಕ್ರಿಯೆ' ಮತ್ತು 'ಚೋಮನದುಡಿ ಕಾದಂಬರಿಯಲ್ಲಿ ಗಂಡು ಹೆಣ್ಣಿನ ಪರಿಕಲ್ಪನೆ' ಹಾಗೇ ಡಿ.ವಿಜಯರವರ 'ಚೋಮನದುಡಿ ಕಾದಂಬರಿಯಲ್ಲಿ ಮಹಿಳೆ' ಇದರ ಜೊತೆಯಲ್ಲಿ 'ಡಿ.ಆರ್.ನಾಗರಾಜ್ ಮತ್ತು ಜಿ.ರಾಜಶೇಖರ್‌ರವರ' ಚೋಮನದುಡಿ ಕುರಿತ ನಿಲುವುಗಳನ್ನು ಒಳಗೊಂಡಿದೆ.

ಈ ಮೇಲಿನ ವಿಮರ್ಶಕರ ನಿಲುವುಗಳ ಜೊತೆಗೆ ತನ್ನ ನಿಲುವುಗಳನ್ನು, ವಿಚಾರಗಳನ್ನು, ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಈ ಅಧ್ಯಯನದಲ್ಲಿ ಸೇರಿಸಲಾಗಿದೆ.

'ಚೋಮನದುಡಿ'ಕಾದಂಬರಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದ್ದೆನು. ಆ ಕಾರಣದಿಂದ ಚೋಮನದುಡಿ ಕಾದಂಬರಿ ಕುರಿತು ಬಂದಿರುವಂಥ ವಿಮರ್ಶೆಗಳನ್ನು ಆಯ್ಕೆ ಮಾಡಿಕೊಂಡು ಆ ವಿಮರ್ಶೆಯಲ್ಲಿ ವಿಮರ್ಶಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ರೀತಿಯನ್ನು ಗಮನದಲ್ಲಿ ಇಟ್ಟುಕೊಂಡು ನಾನು ಈ ಅಧ್ಯಯನವನ್ನು ನಡೆಸಿದ್ದೇನೆ.

ಅಧ್ಯಾಯ–2

ಶಿವರಾಮಕಾರಂತರ ಜೀವನ ಮತ್ತು ಸಾಧನೆ

ನವೋದಯ ಸಾಹಿತ್ಯದ ದಿಗ್ಗಜರಲ್ಲಿ ಡಾ:ಶಿವರಾಮಕಾರಂತರು ಎದ್ದು ಕಾಣುವಂತಹವರು. ಆ ಕಾಲದ ಒಟ್ಟು ಭಾರತೀಯ ಸಾಹಿತ್ಯದಲ್ಲಿಯೇ ಕಾರಂತರಂತಹ ದೈತ್ಯ ಪ್ರತಿಭೆಯುಳ್ಳವರು ಮತ್ತು ವೈವಿಧ್ಯಪೂರ್ಣ ಸಾಧನೆ ಮಾಡಿದವರು ತೀರಾ ಅಪೂರ್ವವೆನಿಸುತ್ತಾರೆ. ಸಾಹಿತ್ಯ, ಶಿಲ್ಪ, ಚಿತ್ರಕತೆ, ಯಕ್ಷಗಾನ, ನೃತ್ಯ, ವಿಜ್ಞಾನ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಸರ ವಿಜ್ಞಾನ, ರಾಜಕೀಯ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಒಂದು ಜೀವಮಾನದಲ್ಲಿ ದುಡಿದ ಅಲ್ಲಿಗಲ್ಲಿಗೆ ಮೈಲಿಗಲ್ಲುಗಳನ್ನು ನಿರ್ಮಿಸಿದ ವ್ಯಕ್ತಿಗಳನ್ನು ಹುಡುಕ ಹೊರಟರೆ ನಮಗೆ ಪ್ರಥಮವಾಗಿ ದೊರೆಯುವವರೇ ಕಾರಂತರು. ದ್ವಿತೀಯರಾಗಿ ಆ ತರಹದವರನ್ನು ಕಂಡುಕೊಳ್ಳುವುದೇ ಅಸಾಧ್ಯವೆನ್ನುವಂಥಹ ಸ್ಥಿತಿಯಲ್ಲಿ ನಾವು ನಿಂತು ಬಿಡುವ ಸಾಧ್ಯತೆಯಿದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ದುಡಿದ ಮಹನೀಯರಿದ್ದಾರೆ. ಅವರೆಂದರೆ ಕುವೆಂಪು, ಬೇಂದ್ರೆ, ಮಾಸ್ತಿ, ಡಿ.ವಿ.ಜಿ. ಹೀಗೆ ಹಲವು ಹೆಸರುಗಳನ್ನು ರಾಜಕೀಯ, ಯಕ್ಷಗಾನ, ನೃತ್ಯ– ಇದೆಲ್ಲ ಕಾರಂತರಲ್ಲಿ ಮಾತ್ರವೇ ದೊರೆಯುತ್ತಿದೆ, ಅದೇ ವಿಶೇಷ.

ಕೇವಲ ಬರವಣಿಗೆಗೆ ಅವರ ಆಸಕ್ತಿಗಳು ಸೀಮಿತವಾಗಿರಲಿಲ್ಲ ಎಂಬುದು ಕೂಡ ಬಹಳ ಮುಖ್ಯವಾದ ವಿಚಾರ.ಚಿಕ್ಕಮಕ್ಕಳಿಗಾಗಿ ಶಾಲೆಯನ್ನು ನಡೆಸುತ್ತಿದ್ದರು, ಮಕ್ಕಳಿಗಾಗಿ ಕಟ್ಟಿಗೆಯ ಆಟಿಗೆಗಳನ್ನು ತಯಾರು ಮಾಡುವ ತರಬೇತಿ ಶಿಬಿರವನ್ನು ನಡೆಸಿದರು, ಯಕ್ಷಗಾನದ ಹೊಸ ರೂಪವನ್ನು ತಯಾರಿಸಿ ತಾವೇ ಅದಕ್ಕೆ ತರಬೇತಿ ಕೊಟ್ಟರು, ಹಾಡಿದರು, ಕುಣಿದರು, ಸ್ವಾತಂತ್ರ್ಯ ಚಳುವಳಿಗೂ ಧುಮುಕಿದರು, ರಾಜಕೀಯದಲ್ಲೂ ಕೈಯಾಡಿಸಿದರೂ, ಸಮಾಜಸುಧಾರಣೆಯ ಯೋಜನೆಗಳನ್ನು ನಡೆಸಿದರು.

1902 ಅಕ್ಟೋಬರ್‌ನಲ್ಲಿ ಹುಟ್ಟಿದ ಕೋಟ ಶಿವರಾಮ ಕಾರಂತರು ದಕ್ಷಿಣ ಕನ್ನಡದ ಪುತ್ತೂರಿನಲ್ಲೇ ಹಲವು ದಶಕಗಳನ್ನು ಕಳೆದರು. ಕಾಲೇಜಿಗೆ ಹೋಗದಿದ್ದರೂ ಅವರು ಸಂಪಾದಿಸಿರುವ ಜ್ಞಾನ ಬೆರಗುಗೊಳಿಸುವಂತಹುದು. ಸಾಹಿತ್ಯ–ನಾಟಕಗಳಲ್ಲದೇ ಯಕ್ಷಗಾನ, ಬಯಲಾಟ, ಚಿತ್ರಕಲೆ, ನಾಟ್ಯಕಲೆ, ಸಂಗೀತ,

ಶಿಲ್ಪಕಲೆ ಎಲ್ಲವನ್ನೂ ಅಭ್ಯಾಸ ಮಾಡಿದರು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಯೋಗಗಳನ್ನು ನಡೆಸಿದರು. ಪುಸ್ತಕಗಳ ಪ್ರಕಟಣೆ ನಡೆಸಿದರು. ಶಿವರಾಮಕಾರಂತರಿಗೆ 1978ರಲ್ಲಿ ಜ್ಞಾನ ಪೀಠ ಪ್ರಶಸ್ತಿ ಬಂದಿತು, 1997ರಲ್ಲಿ ನಿಧನರಾದರು.

ಕಾರಂತರು ಮುಖ್ಯವಾಗಿ ಕಾದಂಬರಿಕಾರರಾಗಿ ಓದುಗರಿಗೆ ಪರಿಚಿತರು. ಸುಮಾರು ನಲವತ್ತೈದು ಕಾದಂಬರಿಗಳನ್ನು ಬರೆದಿದ್ದಾರೆ. ಮರಳಿ ಮಣ್ಣಿಗೆ, ಬೆಟ್ಟದ ಜೀವ, ಚೋಮನ ದುಡಿ, ಅಳಿದ ಮೇಲೆ, ಆಳ-ನಿರಾಳ, ಔದಾರ್ಯದ ಉರುಳಲ್ಲಿ, ಕುಡಿಯರ ಕೂಸು, ಜಾರುವ ದಾರಿಯಲ್ಲಿ, ದೇವದೂತರು, ಮೂಕಜ್ಜಿಯ ಕನಸುಗಳು, ಸರಸಮ್ಮನ ಸಮಾಧಿ ಇವರ ಜನಪ್ರಿಯ ಕಾದಂಬರಿಗಳಲ್ಲಿ ಕೆಲವು. ಈಚಿನ ವರ್ಷಗಳಲ್ಲಿ "ಇಳೆಯೆಂಬ" ಮೊದಲಾದ ಕಾದಂಬರಿಗಳನ್ನು ಬರೆದಿದ್ದಾರೆ. ಗರ್ಭಗುಡಿ ಮೊದಲಾದ ನಾಟಕಗಳನ್ನೂ, ಕಿಸಾಗೋತಮಿ, ಸೋಮಿಯ ಸೌಭಾಗ್ಯ ಮೊದಲಾದ ಗೀತನಾಟಕಗಳನ್ನು ರಚಿಸಿದ್ದಾರೆ. 'ಹಾವು' ಮುಂತಾದ ಸಣ್ಣಕಥೆಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಆತ್ಮವೃತ್ತ, ಮಕ್ಕಳಿಗಾಗಿ ವಿಶ್ವಕೋಶ 'ಬಾಲಪ್ರಪಂಚ'ವನ್ನು ಸಿದ್ಧಗೊಳಿಸಿದರು. ಮಕ್ಕಳಿಗಾಗಿಯೇ ಹಲವು ಕೃತಿಗಳನ್ನು ಬರೆದಿದ್ದಾರೆ. ವಿಜ್ಞಾನ ಪ್ರಪಂಚದ ನಾಲ್ಕು ಸಂಪುಟಗಳಲ್ಲದೇ 'ಅಪೂರ್ವ ಪಶ್ಚಿಮ' 'ಅಬೂವಿನಿಂದ ಬರಾಮ'ಕ್ಕೆ ಪ್ರವಾಸ ಸಾಹಿತ್ಯ' 'ಕಲೆಯ ದರ್ಶನ' ಭಾರತೀಯ ಚಿತ್ರಕಲೆ' ಯಕ್ಷಗಾನ, ಬಯಲಾಟ ಮುಂತಾದವು ಕಲೆಯ ಜಗತ್ತಿನ ದರ್ಶನ ಮಾಡಿಸುತ್ತವೆ. ವಿಚಾರ ಸಾಹಿತ್ಯ ನಿರ್ಮಾಣ, ಘಾನ, ಹಳ್ಳಿಯ ಹತ್ತು ಸಮಸ್ತರು ಮುಂತಾದ ಇತರ ಒಳ್ಳೆಯ ಕೃತಿಗಳೂ ಹಲವಾರಿವೆ. ಸ್ವತಃನಟರು, ನಾಟ್ಯ ಕಲಾವಿದರು, ನಾಟಕಗಳನ್ನು ಆಡಿಸಿದ್ದರು, ಯಕ್ಷಗಾನ ತಂಡಗಳಿಗೆ ಶಿಕ್ಷಣ ಕೊಟ್ಟಿದ್ದರು. ಚಲನ ಚಿತ್ರ ಪ್ರಪಂಚಕ್ಕೂ ಪ್ರವೇಶಿಸಿದ್ದರು. ಜಾನಪದ ನೃತ್ಯಕಲೆಗೆ ಮೀಸಲಾದ ಸ್ವೀಡಿಶ್ ಅಕಾಡೆಮಿಯ ಬಹುಮಾನ ಪದಕ ಪಡೆದಿದ್ದರು. ಮೈಸೂರಿನಲ್ಲಿ ನಡೆದ ಮೂವತ್ತೇಳನೆಯ ಸಾಹಿತ್ಯ ಸಮ್ಮೇಳನಾಧ್ಯಕ್ಷರು ಆಗಿದ್ದರು.

ಗಟ್ಟಿಯಾದ ಅನುಭವದಲ್ಲಿ ಪ್ರಾಮಾಣಿಕವಾದ, ಆವೇಶರಹಿತವಾದ, ನಿರಾಡಂಬರವಾದ ಮೌಲ್ಯಗಳ ಅನ್ವೇಷಣೆ ಸಾರ್ಥಕ ಸಾಹಿತ್ಯವನ್ನು

ಸೃಷ್ಟಿಸಬಹುದೆಂಬುದಕ್ಕೆ ಅವರ ಕಾದಂಬರಿಗಳು ಜೀವಂತ ಸಾಕ್ಷಿ. ಭಾರತೀಯ ಜ್ಞಾನ ಪೀಠ ಪ್ರಶಸ್ತಿಯನ್ನು ಪಡೆದ ಕನ್ನಡ ಕಾದಂಬರಿಕಾರರಲ್ಲಿ ಕಾರಂತರು ಒಬ್ಬರು.

ಶಿವರಾಮ ಕಾರಂತರು ವಾಙ್ಮಯರು, ಎಂದರೆ ಕಾರಂತರು ತಮ್ಮ ಬಾಳಿನ ಎಪ್ಪತ್ತೈದು ವರ್ಷಗಳ ಕಾಲಾವಧಿಯಲ್ಲಿ ಬರಹ ರೂಪಕ್ಕಿಳಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ 155ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಒಂದು ಕೃತಿ ಸಮುಚ್ಚಯ ಮತ್ತು ಆ ಎಪ್ಪತ್ತೈದು ವರ್ಷಗಳ ಕಾಲವೂ ಈ ನಾಡಿನ ಉದ್ದಗಲಕ್ಕೆ ಸಂಚರಿಸಿ, ಕೇಳುಗ ಜನವರ್ಗದೆದುರು ಅವರು ಆಡಿದ ಮಾತುಗಳು ಹಾಗೂ ಆ ಮೂಲಕ ನಮ್ಮ ಜನರ ಮನಸ್ಸನ್ನು ಮುಟ್ಟಿದ್ದುದರ,ತಟ್ಟಿದ್ದುದರ ದಾಖಲಿಸಲಾಗದ ಪರಿಣಾಮ.

ಕಾರಂತರು ಕನ್ನಡ ನಾಡಿನಲ್ಲಿ ನೋಡದ ಊರಿಲ್ಲ, ಕಾಣದೇ ಉಳಿದ ಜಾಗವಿಲ್ಲ. ಬೇಂದ್ರೆಯವರ ಹಾಗೆ ವಾಗ್ವಿಲಾಸದ ಆಕರ್ಷಣೆಯಿದ್ದಂತಹ ಕಾರಂತರ ಮಾತುಗಾರಿಕೆಗೆ ನಮ್ಮ ಜನ, ಅವರ ಮಾತುಗಳನ್ನು "ಮೌಖಿಕ ಸಾಹಿತ್ಯ" ವನ್ನಾಗಿ ಮನ್ನಿಸಿದ್ದಾರೆ,ಕೇಳಿಸಿಕೊಂಡಿದ್ದಾರೆ.ಬರಹದಲ್ಲಿ ಹೇಳಿದ್ದನ್ನೇ ಕಾರಂತರ ಮಾತಿನಲ್ಲಿ ಹಾಗೂ ಕೆಲವು ಸಲ ಯಕ್ಷಗಾನದ .ವಿಷಯದಲ್ಲಿ ಅಭಿವ್ಯಕ್ತಿ ಮಾಡುತ್ತಲೇ ಬಂದರು. ಬರಹ-ಮಾತು ಕಾರಂತರ ವಾಙ್ಮಯದ ಎರಡೂ ಅಭಿನ್ನ ಮುಖಗಳೆಂದೇ ಸ್ವೀಕರಿಸುವುದು ಸಾಧುವಾಗಿದೆ.

'ವಿಜ್ಞಾನ ಪ್ರಪಂಚ' 'ಬಾಲ ಪ್ರಪಂಚ'ಗಳನ್ನು ಕಾರಂತರು ರಚಿಸಿದ್ದು, ಕನ್ನಡ ಜ್ಞಾನಕೋಶಕ್ಕೆ ಆಧುನಿಕ ಸಾಮಗ್ರಿ ಸೇರಬೇಕೆಂಬ ಶೈಕ್ಷಣಿಕ ಹಂಬಲದಿಂದ, ಇವೆರಡೂ ಸಂಪುಟಗಾತ್ರದ ಗ್ರಂಥಗಳಲ್ಲಿಯ ವಿಷಯ ನಮೂದುಗಳು ಇಂಗ್ಲೀಷ್ ಭಾಷಾಂತರಗಳೇ ವಿಶ್ವದ ಅರಿವು, ವಿಶ್ವದ ಚರಿತ್ರೆ ಕನ್ನಡ ಜನಾಂಗಕ್ಕೆ ಆದಾಗಲೇ ಅವರ ವಿಚಾರವಲಯ ಬದಲಾಗುವುದು ಮತ್ತು ಬೆಳೆಯುವುದು. ಸ್ವಾತಂತ್ರ್ಯ, ಸಮಾನತೆ, ವಿಶ್ವಬಂಧುತ್ವದ ಗುಣಗಳು ಅಭಿವೃದ್ಧಿಗೊಳ್ಳುವುದೇ-ವಿಜ್ಞಾನದ ತಿಳಿವಿನಿಂದ.

ಚೋಮನದುಡಿ, ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ, ಅಳಿದ ಮೇಲೆ, ಇಳೆಯೆಂಬ ಒಂದರ ತಂತ್ರ ಮತ್ತೊಂದರಂತೆ ಇಲ್ಲ. ಅವರ ಶೈಲಿಗೆ ಅಲಂಕಾರ, ಹೊಳಪು, ನಯ ಇಲ್ಲ. ಆದರೆ ಭಾಷೆ ಸೋಲುತ್ತದೆ. ಕಾದಂಬರಿ ಗೆಲ್ಲುತ್ತದೆ ಎಂಬ ಮಾತು ಅರ್ಥಹೀನವಾದುದರಿಂದ ಅವರ ಭಾಷೆ ಅವರ ಸ್ಥಳೀಯ ಅಗತ್ಯಗಳನ್ನೆಲ್ಲಾ ಪೂರೈಸುತ್ತದೆ ಎಂಬುದು ಸ್ಪಷ್ಟ. ಅದು ನೇರವಾದ, ಸ್ಪಷ್ಟವಾದ ಭಾಷೆ.

ಅಧ್ಯಾಯ-3

ಕಾದಂಬರಿ ಮತ್ತು ವಿಮರ್ಶೆ ಸಂಕ್ಷಿಪ್ತ ಪರಿಚಯ

<u>ಕಾದಂಬರಿ:</u> ಸಾಹಿತ್ಯ ಪ್ರಕಾರಗಳಲ್ಲಿ ವಿಶಾಲ ವ್ಯಾಪ್ತಿಯನ್ನು ಒಳಗೊಂಡಿರುವ ಕಾದಂಬರಿ ಪ್ರಕಾರ ಇತ್ತೀಚನದು. ಎಲ್ಲಾ ದೇಶಗಳಲ್ಲಿ ಮಾನವನ ಬಗೆಗೆ ಅವನ ಭಾವಕ್ರಿಯೆಗಳ ಬೃಹತ್ ಪ್ರದರ್ಶನದ ಬಗೆಗೆ ತಳೆಯುವ ಆಸಕ್ತಿ ಕಾದಂಬರಿಯ ಅಸ್ತಿತ್ವಕ್ಕೆ ಮೂಲ ಕಾರಣವಾಗಿದೆ. ಮೆರಿಯನ್ ಕ್ರಾಫರ್ಡ್ ಹೇಳುವಂತೆ ಕಾದಂಬರಿ 'ಕರತಲ ರಂಗಭೂಮಿ'ಶ್ರೇಷ್ಠ ವಿಮರ್ಶಕನಾದ ಹಡ್ಸನನು ಕಾದಂಬರಿ ರಚನೆಯಲ್ಲಿ ಮುಖ್ಯವಾಗಿ ಸಂವಿಧಾನ, ಪಾತ್ರ ನಿರ್ಮಾಣ, ಕ್ರಿಯೆಯ ಕಾಲ ಮತ್ತು ಸ್ಥಳ, ಶೈಲಿ ಮತ್ತು ಜೀವನದರ್ಶನಗಳು ಸೇರಿಕೊಳ್ಳುವ ಅಂಶಗಳೆಂದು ಸೂಚಿಸಿದ್ದಾನೆ. ಘಟನೆಗಳು ಮತ್ತು ಕ್ರಿಯೆಗಳೊಡನೆ ಕಾದಂಬರಿ ವ್ಯವಹರಿಸುತ್ತದೆ. ಇದನ್ನೇ ನಾವು ಸಂವಿಧಾನ ಎಂದು ಕರೆಯುವುದು.

ಸಾಹಿತ್ಯ ಜೀವನದ ವಿವರಣೆ ಎಂಬ ಮೂಲಭೂತ ಕಲ್ಪನೆಯಿಂದ ಕಾದಂಬರಿ ಮೂಡಿಬಂದಿರಬೇಕು. ಯಾವುದೇ ಕಾದಂಬರಿ ಶ್ರೇಷ್ಠವೆನಿಸಿಕೊಳ್ಳಬೇಕಾದರೆ ಅದು ಬದುಕನ್ನು ತೀವ್ರವಾದ ದೃಷ್ಟಿಯಿಂದ ಚಿತ್ರಿಸಿರಬೇಕು. ಮಾನವಕುಲದ ಹೋರಾಟ ಮತ್ತು ಅದೃಷ್ಟಗಳ ಮೇಲೆ ನಿರಂತರವಾಗಿ ಪ್ರಭಾವ ಬೀರುವ ಸಂಗತಿಗಳನ್ನು ತಳಹದಿಯನ್ನಾಗಿ ಮಾಡಿಕೊಂಡಾಗ ಕಾದಂಬರಿ ಶ್ರೇಷ್ಠವಾಗುತ್ತದೆ.ಅದರ ಮತ್ತೊಂದು ಕರ್ತವ್ಯವೆಂದರೆ ವಿರಾಮ ಕಾಲದಲ್ಲಿ ಮನರಂಜನೆಯನ್ನು ವಾಸ್ತವಿಕ ವ್ಯವಹಾರಗಳ ಶ್ರಮದಿಂದ ಬಿಡುಗಡೆಯನ್ನು ಒದಗಿಸುವಂತಿರಬೇಕು.

ಕಾದಂಬರಿಯು ಘಟನೆಗಳು ಮತ್ತು ಕ್ರಿಯೆಗಳೊಡನೇ ವ್ಯವಹರಿಸುತ್ತದೆ. ಇದನ್ನೇ ನಾವು ಸಂವಿಧಾನ ಎಂದು ಕರೆಯುವುದು. ಹಡ್ಸನನು ಇಂಗ್ಲೀಷ್ ಸಾಹಿತ್ಯದ ಪ್ರಮುಖ ಕಾದಂಬರಿಕಾರರಾದ ಡಿಕ್ಸನ್, ಥ್ಯಾಕರೆ, ಜಾರ್ಜ್ ಇಲಿಯಟ್ ಮುಂತಾದವರ ಕಾದಂಬರಿಗಳನ್ನು ಉದಾಹರಿಸಿ ಇವುಗಳಲ್ಲಿ ಜೀವನದ ಸಮಸ್ಯೆಗಳು ಹೇಗೆ ಒಡಮೂಡಿವೆ ಎಂಬುದನ್ನು ತೋರಿಸಿದ್ದಾನೆ. 'ಸಾಹಿತ್ಯ ಜೀವನದ ವಿವರಣೆ'ಎಂಬ ಮೂಲಭೂತ ಕಲ್ಪನೆಯಿಂದ ಕಾದಂಬರಿ ಮೂಡಿಬಂದಿರಬೇಕು. ಯಾವುದೇ ಕಾದಂಬರಿ ಶ್ರೇಷ್ಠವೆನಿಸಿಕೊಳ್ಳಬೇಕಾದರೆ ಅದು ಬದುಕನ್ನು ತೀವ್ರವಾದ ದೃಷ್ಟಿಯಿಂದ ಚಿತ್ರಿಸಿರಬೇಕು.

ಮಾನವ ಕುಲದ ಹೋರಾಟ ಮತ್ತು ಅದೃಷ್ಟಗಳ ಮೇಲೆ ನಿರಂತರವಾಗಿ ಪ್ರಭಾವ ಬೀರುವ ಸಂಗತಿಗಳನ್ನು ತಳಹದಿಯನ್ನಾಗಿ ಮಾಡಿಕೊಂಡಾಗ ಕಾದಂಬರಿ ಶ್ರೇಷ್ಠವಾಗುತ್ತದೆ. ಅದರ ಮತ್ತೊಂದು ಕರ್ತವ್ಯವೆಂದರೆ ವಿರಾಮ ಕಾಲದಲ್ಲಿ ಮನರಂಜನೆಯನ್ನು ವಾಸ್ತವಿಕ ವ್ಯವಹಾರಗಳನ್ನು ಶ್ರಮದಿಂದ ಬಿಡುಗಡೆಯನ್ನು ಒದಗಿಸುವಂತಿರಬೇಕು.

ಕಾದಂಬರಿ ವಸ್ತುವಿನ ಮಹತ್ತಿನಿಂದಲೇ ಶ್ರೇಷ್ಠವೆನಿಸಿಕೊಳ್ಳುವುದಿಲ್ಲ. ಅದರ ತಂತ್ರದ ಸೊಗಸು ಅಸಾಧಾರಣ ಪಾತ್ರ ನಿರ್ಮಾಣ ಮತ್ತು ಸಮೃದ್ಧ ಹಾಸ್ಯಗಳು ಕಾದಂಬರಿಯ ಸೊಗಸಿಗೆ ಕಾರಣವಾಗುತ್ತವೆ. ಈ ಎಲ್ಲಾ ವಿಷಯಗಳನ್ನು ಸೊಗಸಾಗಿ ಪ್ರಕಟಿಸಬೇಕಾದರೆ 'ನಿರೂಪಣಾ ಪ್ರಭುತ್ವ' ಅವಶ್ಯಕ.

ಕಾದಂಬರಿ ಯಾವಾಗಲೂ ಕಥೆಯ ಹೊರತು ಸತ್ಯ ಸಂಗತಿಯಲ್ಲ ಎಂದು ತಿಳಿದು ಕೆಲವರು ಅದರ ಪ್ರಾಮಾಣಿಕತೆಯ ಬಗ್ಗೆ ಗಮನ ಹರಿಸುವುದಿಲ್ಲ. ಅಂದರೆ ಕಾದಂಬರಿಕಾರರಿಗೆ ಪ್ರಾಮಾಣಿಕತೆ ಇಲ್ಲದಿದ್ದ ಪಕ್ಷದಲ್ಲಿ ಆ ಕಾದಂಬರಿಯನ್ನು ತಕ್ಕ ಮಟ್ಟಿಗೆ ಉತ್ತಮವಾಗಿದೆಯೆಂದು ಹೇಳಲಾಗುವುದಿಲ್ಲ. ಅವರು ಅಪರಿಚಿತವಾದುದನ್ನು ಬಿಟ್ಟು ಪರಿಚಿತವಾದುದನ್ನು ಬರೆಯಬೇಕು 'ಜೇನ್ ಆಸ್ಟಿನ್' ಎಂಬ ಕಾದಂಬರಿಕಾರ್ತಿ ಈ ವಿಷಯವನ್ನು ಕುರಿತು ಹೇಳುತ್ತಾ 'ನಿಮಗೆ ಗೊತ್ತಿಲ್ಲದಿರುವ ವಿಷಯದ ಆಚೆ ಹೋಗುವುದು ಅಪಾಯಕಾರಿ ಎಂದು ಸೂಚಿಸುತ್ತಾಳೆ. ಕೆಲವರು ತಮಗೆ ಸಿದ್ಧಿಸದಿದ್ದ ಅನುಭವವನ್ನು ಬೇರೆಯವರಿಂದ ತಿಳಿದುಕೊಂಡು ಅನ್ಯ ಗ್ರಂಥಗಳನ್ನು ಅಧ್ಯಯನ ಮಾಡಿ ವಿವರಿಸುತ್ತಾರೆ. ಇನ್ನೂ ಕೆಲವರು ಅಪರಿಚಿತವಾದ ವಸ್ತುವನ್ನು ವಿವರಿಸುವಾಗಲೂ ಸತ್ಯಕ್ಕೆ ಹತ್ತಿರವಾಗುವಂತೆ ವಿವರಿಸಿ ಓದುಗರನ್ನು ಚಕಿತಗೊಳಿಸುತ್ತಾರೆ.

ಕಾದಂಬರಿಯಲ್ಲಿ ವಸ್ತು ಸ್ವಾರಸ್ಯವಾಗಿರುವಂತೆ ಅದರ ನಿರೂಪಣಾ ಕ್ರಮವು ಸ್ವಾರಸ್ಯವಾಗಿರಬೇಕು. ಕೆಲವರಿಗೆ ಅಗಾಧವಾದ ಬುದ್ಧಿ-ಶಕ್ತಿ ಇದ್ದರು. ಕಥನ ಕೌಶಲದ ಅಭಾವದಿಂದ ಕಾದಂಬರಿಯನ್ನು ರಸಮಯವಾಗಿ ಮಾಡುವುದರಲ್ಲಿ ವಿಫಲರಾಗುತ್ತಾರೆ. ಸಂವಿಧಾನವನ್ನು ಕುರಿತು ಹೇಳುವಾಗ ಶಿಥಿಲ ಸಂವಿಧಾನ ಮತ್ತು ಸಾವಯವ ಸಂವಿಧಾನ ಎಂದು ೨ ವರ್ಗಗಳಾಗಿ ವಿಂಗಡಿಸಬಹುದು.

ಮೊದಲನೆಯದರಲ್ಲಿ ಕಥೆ ಅನೇಕ ಬಿಡಿ ಬಿಡಿಯಾದ ಘಟನೆಗಳಿಂದ ರಚಿತವಾಗಿರುತ್ತದೆ, ಅವುಗಳಲ್ಲಿ ತರ್ಕಬದ್ಧವಾದ ಹೊಂದಾಣಿಕೆ ಇರುವುದಿಲ್ಲ, ಆದರೆ ಸಾವಯುವ ಸಂವಿಧಾನ ಕಾದಂಬರಿಯಲ್ಲಿ ಕಥೆ ಹಾಗೂ ಘಟನೆಗಳು ಹೊಂದಿಕೊಂಡಿರುತ್ತವೆ. ಕಾದಂಬರಿಕಾರ ತನ್ನ ಕಾದಂಬರಿಯ ಪಾತ್ರ ನಿರ್ಮಾಣದ ಕಡೆಗೆ ಗಮನ ಕೊಡಬೇಕಾದ್ದು ಪ್ರಾಥಮಿಕ ಅವಶ್ಯಕ. ಅವನು ಸೃಷ್ಟಿಸುವ ಗಂಡು ಹೆಣ್ಣುಗಳು ಓದುಗರ ಕಲ್ಪನೆಗೆ ಸತ್ಯವಾಗಿ ತೋರುವಂತಿರಬೇಕು. ಪ್ರತಿಯೊಬ್ಬ ಕಾದಂಬರಿಕಾರ ಪಾತ್ರಗಳು ಜೀವಂತ ವ್ಯಕ್ತಿಗಳಂತೆ ಅನುಭವಕ್ಕೆ ಹತ್ತಿರವಾಗುವಂತೆ ಚಿತ್ರಿಸಬೇಕು. ಗ್ರಂಥವನ್ನು ಓದಿಟ್ಟ ನಂತರವೂ ಅವು ನಮ್ಮ ನೆನಪಿನಲ್ಲಿ ಉಳಿಯುವಂತಿರಬೇಕು. ಕಾದಂಬರಿಕಾರನಾದ ಥ್ಯಾಕರೆ ನಾನು ನನ್ನ ಪತ್ರಗಳನ್ನು ನಿಯಂತ್ರಿಸುವುದಿಲ್ಲ, ಅವು ನನ್ನನ್ನು ಇಷ್ಟ ಬಂದ ಹಾಗೆ ಒಯ್ಯುತ್ತವೆ ಎಂದು ಹೇಳಿರುವುದನ್ನು ನೋಡಿದರೆ ಕಾದಂಬರಿಕಾರ ತನ್ನ ಗ್ರಂಥ ರಚನೆಗೆ ಮೊದಲೇ ಕಲ್ಪಿಸಿಕೊಂಡಂತೆ ಪಾತ್ರಗಳು ಮೂಡಿಬರುತ್ತವೆ ಎಂದು ಹೇಳಲಾಗುವುದಿಲ್ಲ. ಕಾದಂಬರಿಕಾರನ ಶಿಕ್ಷಣಾತ್ಮಕ ವಿಧಾನ ಮತ್ತು ನಾಟಕೀಯ ವಿಧಾನಗಳಿಂದ ಪಾತ್ರ ನಿರ್ಮಾಣ ಮಾಡಿರುತ್ತಾನೆ. ತನ್ನ ಪಾತ್ರಗಳನ್ನು ಕಾದಂಬರಿಕಾರ ವಿವರಿಸಿ ವ್ಯಾಖ್ಯಾನಿಸುವುದು ಒಂದು ವಿಧಾನ. ಇನ್ನೊಂದು ವಿಧಾನದಲ್ಲಿ ಕಾದಂಬರಿಕಾರ ಪ್ರತ್ಯೇಕವಾಗಿ ನಿಂತು ಪಾತ್ರಗಳು ತಮ್ಮನ್ನು ತಾವು ಪ್ರಕಟಗೊಳಿಸಿಕೊಳ್ಳಲು ಅವಕಾಶ ಮಾಡಿಕೊಳ್ಳುತ್ತಾನೆ. ಇದೇ ಶ್ರೇಷ್ಠವಾದ ವಿಧಾನವೆಂದು ಹಡ್ಸನನ ಅಭಿಪ್ರಾಯ. ಉತ್ತಮವಾದ ಪಾತ್ರ ಚಿತ್ರಣದಿಂದ ಹುಟ್ಟುವ ಕುತೂಹಲ ಶಾಶ್ವತವಾದದ್ದು ಅದಕ್ಕಾಗಿಯೇ ಅತ್ಯುನ್ನತ ಸ್ಥಾನ ಗಳಿಸಿರುವ ಕಾದಂಬರಿಗಳು ಪಾತ್ರ ಪ್ರಧಾನ ಕಾದಂಬರಿಗಳಾಗಿವೆ.

ಚೆನ್ನಾಗಿ ನಿರ್ವಹಣೆಗೊಂಡ ಸಂಭಾಷಣೆ (ಶೈಲಿ) ಅತ್ಯಂತ ಆನಂದದಾಯಕ ಅಂಶಗಳಲ್ಲೊಂದು. ಒಳ್ಳೆಯ ಸಂಭಾಷಣೆ ಗ್ರಂಥವನ್ನು ಉಜ್ವಲಗೊಳಿಸುತ್ತದೆ ಮತ್ತು ಲೇಖಕರ ಪರಿಣತಿಗೆ ಕನ್ನಡಿ ಹಿಡಿಯುತ್ತದೆ. ಆಯಾ ಸನ್ನಿವೇಶಕ್ಕೆ ತಕ್ಕಂತೆ ಆಯಾ ಪಾತ್ರಗಳಿಗೆ ತಕ್ಕಂತೆ ಸಂಭಾಷಣೆಯನ್ನು ಹೆಣೆದಿರಬೇಕಾದದ್ದು ಅವಶ್ಯಕ.

೧೮೬೬ರಲ್ಲಿ ಗುಲ್ವಾಡಿ ವೆಂಕಟರಾಯರು ಬರೆದ "ಇಂದಿರಾ ಬಾಯಿ" ಎಂಬುದು ಕನ್ನಡದ ಸ್ವತಂತ್ರ ಪ್ರಥಮ ಕಾದಂಬರಿ ಎಂದು ಹೇಳಲಾಗುತ್ತದೆ. ೧೮೯೫ರಲ್ಲಿ ಪ್ರಕಟವಾದ 'ಕೇಸರಿ ವಿಳಾಸ' ಎಂಬುದು ಕಾದಂಬರಿಯ ಲಕ್ಷಣವನ್ನು ಹೊಂದಿದ ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿ ಎಂದು ಗೋವಿಂದ ಪೈ ಅಭಿಪ್ರಾಯಿಸಿದ್ದಾರೆ. ಈ ಕೃತಿಯ ಕರ್ತೃ ವೆಂಕಟ ಸುಬ್ಬರಾವ್, ಗಳಗನಾಥರ 'ಪದ್ಮನಯನೆ' ಇವರ ಪ್ರಥಮ ಕಾಲ್ಪನಿಕ ಕಾದಂಬರಿ. ವೆಂಕಟಕೃಷ್ಣಯ್ಯನವರ 'ಚೋರಗ್ರಹಣ ತಂತ್ರ' ಕನ್ನಡದ ಮೊಟ್ಟಮೊದಲ ಪತ್ತೇದಾರಿ ಕಾದಂಬರಿ ನಂತರದಲ್ಲಿ ಕನ್ನಡದಲ್ಲಿ ಕಾದಂಬರಿ ಪ್ರಕಾರ ಸಮೃದ್ಧಿಯಾಗಿ ಬೆಳೆಯಿತು.

ವಿಮರ್ಶೆಯ ಸಂಕ್ಷಿಪ್ತ ಪರಿಚಯ:-

ಮೊದಲು ಸಾಹಿತ್ಯ ಸೃಷ್ಟಿ ಅನಂತರ ಸಾಹಿತ್ಯ ವಿಮರ್ಶೆ ಹೀಗೆ ಇವು ಒಂದನ್ನೊಂದು ಅನುಸರಿಸಿಕೊಂಡು ಬರುತ್ತಿರುತ್ತವೆ. ವಿಮರ್ಶೆ ಎಂದರೆ ಕವಿಪ್ರತಿಭೆಯಿಂದ ಹೊರಹೊಮ್ಮಿದ ಸುಂದರ ಭಾವಮಯ ಕಾವ್ಯಕ್ಷೇತ್ರಗಳಲ್ಲಿ ಸೂಕ್ಷ್ಮಮತಿಯಾದ ಸಹೃದಯನು ಕೈಗೊಳ್ಳುವ ವಿಹಾರಯಾತ್ರೆ ಎಂದು ಟಿ.ಎಸ್.ಇಲಿಯಟ್ ಕಾಲದಿಂದ ಕಾಲಕ್ಕೆ ಪ್ರತಿ ನೂರು ವರ್ಷಕ್ಕೆ ಒಂದು ಸಲವೂ ಏನೋ ಒಬ್ಬ ವಿಮರ್ಶಕ ಹುಟ್ಟಿ ಹಿಂದಿನ ಸಾಹಿತ್ಯವನ್ನು ಪರಿಶೀಲಿಸಿ ಕವಿಗಳನ್ನು ಕೃತಿಗಳನ್ನು ಒಂದು ಹೊಸ ಕ್ರಮದಲ್ಲಿ ನೆಲೆಗೊಳಿಸುವುದು ಅಗತ್ಯ ಎಂದು ಹೇಳಿದ್ದಾನೆ.

ವಿಮರ್ಶೆ ಬುದ್ಧಿ ಪ್ರಧಾನವಾದದ್ದು. ಕವಿಯ ಸೃಷ್ಟಿ ಶಕ್ತಿ ಹೆಚ್ಚೋ ವಿಮರ್ಶಕರ ವಿಮರ್ಶಕರ ವಿಮರ್ಶನ ಶಕ್ತಿ ಹೆಚ್ಚೋ ಎಂಬುದರ ಬಗ್ಗೆ ಚರ್ಚೆ ನಡೆದಿದೆ. ಕುವೆಂಪುರವರು ವಿಮರ್ಶಕರನ್ನು ಕುರಿತು 'ನಾನೇರುವೆತ್ತರಕೆ ನೀನೇರಬಲ್ಲೆಯ, ನಾನಿಳಿಯುವಾಳಕ್ಕೆ ನೀನಿಳಿಯಬಲ್ಲೆಯ' ಎಂದು ಸವಾಲು ಹಾಕುತ್ತಾರೆ.ಕೃತಿ ನಿರ್ಮಾಣ ಶಕ್ತಿಯೇ ಬೇರೆ ವಿಮರ್ಶಕನ ಶಕ್ತಿಯೇ ಬೇರೆ.ಕೃತಿಯೊಂದರ ಸಾರಸರ್ವಸ್ವವನ್ನು ಅರಿಯಬಲ್ಲ ವಿಮರ್ಶಕನು ಮೂಲತಃ ಕವಿಯೇ ಆಗಿರುತ್ತಾನೆ, ಅವನು ಸೃಜನಶೀಲ ಶಕ್ತಿಯಿಂದ ವಂಚಿತನಾಗಿದ್ದರೂ ಸೃಷ್ಟಿಕಾರ ಪ್ರಕ್ರಿಯೆ ಮತ್ತು ಅದರ ಅನೇಕ ಸಂಭಾವ್ಯತೆಗಳ ಬಗೆಗೆ ಕೆಲವು ಸಂದರ್ಭಗಳಲ್ಲಿ ಕವಿಗಿಂತ ಮಿಗಿಲಾದ ಜ್ಞಾನವನ್ನು ಹೊಂದಿರುತ್ತಾನೆ.

ಒಂದು ಕವಿ ಕೃತಿಯನ್ನು ವಿಶೇಷವಾಗಿ ಒರೆಹಚ್ಚಿ ನೋಡುವುದು, ಅದರ ಗುಣ-ಅವಗುಣಗಳನ್ನು ಸಹೃದಯನಿಗೆ ನೀಡುವುದು ವಿಮರ್ಶಕನ ಕೆಲಸ. ವಿಮರ್ಶೆ, ವಿಮರ್ಶಕ ಎಂಬ ಪದಗಳಿಗೆ ಸಮಾನವಾಗಿ ಕನ್ನಡದಲ್ಲಿ ಬಳಸುತ್ತಿರುವ ಪದಗಳು. ಒಬ್ಬ ಕವಿ ತನ್ನ ಪ್ರತಿಭೆಯ ಬಲದಿಂದ ಒಂದು ಕೃತಿಯನ್ನು ರಚಿಸಿ ಆ ಮೂಲಕ ಸಾಹಿತ್ಯ ಪ್ರಪಂಚದಲ್ಲಿ ಗೌರವವನ್ನು ಮತ್ತು ಪ್ರೋತ್ಸಾಹವನ್ನು ನಿರೀಕ್ಷಿಸಿರುತ್ತಾನೆ.ಆದ್ದರಿಂದ ವಿಮರ್ಶಕ ಅಂಥಹ ಕೃತಿಯ ಸ್ಥಾನವನ್ನು ನಿರ್ಧರಿಸುವಾಗ ವಿಶೇಷ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ವಿಮರ್ಶೆ, ವಿಮರ್ಶಕ ಎಂಬ ಪದಗಳು ಇಂಗ್ಲೀಷ್‌ನ ಕ್ರಿಟಿಸಿಸ್ಮ್, ಕ್ರಿಟಿಕ್ ಎಂಬ ಪದದಿಂದ ಬಂದಿದೆ.

ವಿಮರ್ಶಕನಾದವನು ಮೊದಲು ಕವಿ ಕೃತಿಯನ್ನು ಓದಿ ಕರಗತ ಮಾಡಿಕೊಳ್ಳುತ್ತಾನೆ. ಆದರೆ ಬಾವುಕನಾದ ಸಹೃದಯನಂತೆ ಅವನ ಕ್ರಿಯೆ ಅಷ್ಟಕ್ಕೆ ನಿಂತುಹೋಗುವುದಿಲ್ಲ. ಆ ಸಾಹಿತ್ಯದ ಸೊಗಸನ್ನು ನಿಷ್ಪಕ್ಷಪಾತವಾದ ದೃಷ್ಟಿಯಲ್ಲಿ ವ್ಯಾಖ್ಯಾನಿಸತೊಡಗುತ್ತಾನೆ. ಅದರ ಗುಣ ದೋಷಗಳನ್ನು ಬೆರಳಿಟ್ಟು ತೋರಿಸುತ್ತಾನೆ. ಯಾವ ಯಾವ ಕಾರಣಗಳಿಂದ ಒಂದು ಕೃತಿ ಚೆನ್ನಾಗಿದೆ ಅಥವಾ ಯಾವ ಕಾರಣಗಳಿಂದ ಕೃತಿ ದೋಷಪೂರ್ಣವಾಗಿದೆ ಎಂದು ವಿಮರ್ಶಕನ ಬರಹಗಳನ್ನು ಓ ದಿದಾಗ ಗ್ರಹಿಸಬಹುದು.

'ಕ್ರಿಟಿಸಿಸ್ಮ್' ಎನ್ನುವ ಪದಕ್ಕೆ ಕನ್ನಡದಲ್ಲಿ ವಿಮರ್ಶೆ ಎಂಬ ಪದವನ್ನು ಬಳಸುತ್ತಿದ್ದೇವೆ. ವಿಮರ್ಶೆ ಎಂಬ ಪದವು ಮೃಶ್ ಎಂಬ ಧಾತುವಿನಿಂದ ಬಂದಿದೆ, 'ಮೃಶ್' ಎಂದರೆ ಉಜ್ಜು, ತೀಡು, ಒರೆಹಚ್ಚಿನೋಡು ಎಂಬ ಅರ್ಥದಲ್ಲಿ ಬಂದಿದೆ. ನಮ್ಮಲ್ಲಿ ಬಹಳ ಹಿಂದಿನಿಂದಲೂ ಬೆಳೆದು ಬಂದಿರುವ ಅಲಂಕಾರ ಶಾಸ್ತ್ರ ಕಾವ್ಯವನ್ನು ಕುರಿತು ನಡೆಸಿರುವ ವಿವೇಚನೆಯಾಗಿದೆ. ಆದ್ದರಿಂದ ಒಂದರ್ಥದಲ್ಲಿ ವಿಮರ್ಶೆಯ ಮೂಲವನ್ನು ಇಲ್ಲಿಯೇ ಕಾಣುತ್ತೇವೆ. ಆದರೆ, ವಿಮರ್ಶೆ ಎಂಬುದು ಒಂದು ಶಾಸ್ತ್ರೀಯವಾದ ಪ್ರಕಾರವಾದುದು.

ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯದ ಪರಿಚಯವಾದ ನಂತರ ಮೊದಲು ಸಂಸ್ಕೃತ ಕೃತಿಗಳ ಮತ್ತು ಪ್ರಾಚೀನ ಕನ್ನಡ ಕೃತಿಗಳ ವಿವೇಚನೆ ನಡೆಯಿತು. ಎಂ.ಎ.ರಾಮಾನುಜ ಅಯ್ಯಂಗಾರರ 'ಕವಿಚಕ್ರವರ್ತಿ ರನ್ನನ ಜೀವನ ಚರಿತ್ರೆ' ಎಂಬ ಗ್ರಂಥ ರನ್ನನ ವೈಯಕ್ತಿಕ ವಿಚಾರಗಳನ್ನು ಮತ್ತು ಅವನ ಗ್ರಂಥಗಳನ್ನು ವಿಮರ್ಶಿಸುವ ಪ್ರಯತ್ನ. ಕನ್ನಡ ವಿಮರ್ಶೆಯ ಉಗಮವನ್ನು ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಗುರುತಿಸಬಹುದು. ೧೯೨೫ರಲ್ಲಿ ಬಂದ ಬಿ.ಕೃಷ್ಣಪ್ಪನವ 'ರಾಮಚಂದ್ರ ಚರಿತ ಪುರಾಣ ವಿಮರ್ಶೆ' ಎಂಬ ಗ್ರಂಥ, ಐತಿಹಾಸಿಕ ದೃಷ್ಟಿಯಿಂದ ಮುಖ್ಯವಾದದು,೧೯೩೧ರಲ್ಲಿ ಪ್ರಕಟವಾದ ಜಿ.ಪಿ.ರಾಜರತ್ನಂರವರ 'ಶ್ರೀಕವಿಪಂಪ' ಪಂಪನನ್ನು ಕುರಿತಂತೆ ಕುರಿತಂತೆ ಸಾಕಷ್ಟು ವಿಷದವಾದ ವಿಮರ್ಶೆಯಾಗಿದೆ.

ಪಾಶ್ಚಾತ್ಯ ವಿಮರ್ಶಕರ ತತ್ವಗಳು ಮತ್ತು ಚಿಂತನೆಗಳನ್ನು ಕೆಲವರು ಕನ್ನಡಕ್ಕೆ ಅನುವಾದಿಸಿದ್ದಾರೆ, ಅವರುಗಳಲ್ಲಿ ಮುಖ್ಯರಾದವರೆಂದರೆ ಎನ್.ಬಾಲಸುಬ್ರಹ್ಮಣ್ಯ ಅವರ 'ಅರಿಸ್ಟಾಟಲ್‌ನ ಕಾವ್ಯಮೀಮಾಂಸೆ', ಸಿ.ಪಿ.ಕೆ.ಯವರ 'ಸಾಹಿತ್ಯ ಪ್ರವೇಶ' ಮುಂತಾದವು ಇದಕ್ಕೆ ಉದಾಹರಣೆಗಳು ಹಲವಾರು ಸಂಶೋಧನಾ ಪ್ರಬಂಧಗಳು ವಿಮರ್ಶೆಯ ಕ್ಷೇತ್ರಕ್ಕೆ ಮೌಲಿಕ ಕೊಡುಗೆಗಳಾಗಿವೆ. ಜಿ.ಎಸ್.ಎಸ್.ರವರ 'ಸೌಂದರ್ಯ ಸಮೀಕ್ಷೆ', ಪ್ರಭುಶಂಕರರ 'ಕನ್ನಡದಲ್ಲಿ ಭಾವಗೀತೆ' ಮುಂತಾದವುಗಳನ್ನು ನೋಡಬಹುದು.

ನವ್ಯ ಸಾಹಿತಿಗಳಾಗಿ ಗೋಪಾಲಕೃಷ್ಣಅಡಿಗ, ಯು.ಆರ್.ಅನಂತ ಮೂರ್ತಿ, ಹೆಚ್.ಎಂ.ಚನ್ನಯ್ಯ, ಜಿ.ಹೆಚ್.ನಾಯಕ, ಕಿ.ರಂ.ನಾಗರಾಜ್, ಡಿ.ಆರ್.ನಾಗರಾಜ್, ಕೀರ್ತಿನಾಥ ಕುರ್ತುಕೋಟಿ, ಜಿ.ಎಸ್.ಆಮೂರ ಮುಂತಾದವರು ವಿಮರ್ಶಾ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ, ಶಾಶ್ವತವಾಗಿ ಉಳಿಯುವಂತಹ ವಿಮರ್ಶೆಗಳನ್ನು ರಚಿಸಿದ್ದಾರೆ. ಈ ಮೇಲಿನಂತೆ ವಿಮರ್ಶೆ ಬೆಳೆದು ಬಂದ ಬಗೆಯನ್ನು ನೋಡಬಹುದು.

ಒಂದು ವಸ್ತುವನ್ನು ಒರೆಹಚ್ಚಿ ನೋಡುವುದೇ ವಿಮರ್ಶೆ ಎಂಬಂತೆ ನಾನು ಈ ಅಧ್ಯಯನದಲ್ಲಿ ಚೋಮನದುಡಿ ಕಾದಂಬರಿಯ ಕುರಿತು ರಚನೆಗೊಂಡಿರುವ ವಿಮರ್ಶೆಯನ್ನು ಅಧ್ಯಯನಕ್ಕೆ ಮಾಡುವುದಕ್ಕೆ ಉದ್ದೇಶಿಸಿದ್ದೇನೆ. ಆದ್ದರಿಂದ ಕಾದಂಬರಿಯ ಸಂಕ್ಷಿಪ್ತ ಪರಿಚಯ ಮತ್ತು ವಿಮರ್ಶೆಯ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿದ್ದೇನೆ ಹಾಗೆಯೇ ಕಾದಂಬರಿ ಮತ್ತು ವಿಮರ್ಶೆಯ ನಡುವಿನ ಸಂಬಂಧವನ್ನು ತಿಳಿದಂತೆ ಆಗುವುದು. ತಕ್ಷಣ ನೇರವಾಗಿ ವಿಷಯಕ್ಕೆ ಹೋಗುವುದಕ್ಕಿಂತ ಈ ಮೇಲಿನಂತೆ ಕಾದಾಂಬರಿಯ ಬಗ್ಗೆ, ವಿಮರ್ಶೆಯ ಬಗ್ಗೆ ತಿಳಿದು ನಂತರ ವಿಷಯಕ್ಕೆ ಪ್ರವೇಶ ಮಾಡುವುದು ಉತ್ತಮವೆನಿಸುವುದು.

ಅಧ್ಯಾಯ–4

ಕಾರಂತರ ಕಾದಂಬರಿಗಳ ವೈಶಿಷ್ಟ್ಯಗಳು:

ಈ ಅಧ್ಯಯನ ಭಾಗದಲ್ಲಿ ಕಾರಂತರ ಒಟ್ಟು ಕಾದಂಬರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾದಂಬರಿಗಳ ಮೂಲಕ ಏನು ಹೇಳುವುದಕ್ಕೆ ಹೊರಟಿದ್ದಾರೆ. ಹಾಗೆಯೇ ಕಾದಂಬರಿಯ ವೈಶಿಷ್ಟ್ಯವನ್ನು, ಆಶಯವನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

ಕಾರಂತರು ಒಟ್ಟು ೪೧೭ ಪುಸ್ತಕಗಳನ್ನು ಬರೆದಿದ್ದಾರೆ. ಆ ಪುಸ್ತಕಗಳು ಸಾಹಿತ್ಯ, ಸಂಗೀತ, ಚಿತ್ರಕಲೆ, ನೃತ್ಯ, ನಾಟಕ, ಜಾನಪದ, ಶಿಲ್ಪ, ವಿಜ್ಞಾನ, ಮನೋವಿಜ್ಞಾನ, ಸಮಾಜಶಾಸ್ತ್ರ, ಸಿನಿಮಾ, ಪರಿಸರವಿಜ್ಞಾನ, ರಾಜಕೀಯ ಇತ್ಯಾದಿಗಳೆಲ್ಲವನ್ನೂ ಒಳಗೊಂಡಿದೆ. ಸಾಹಿತ್ಯವನ್ನು ನೋಡಿದರೆ ಕಾವ್ಯ, ನಾಟಕ, ಸಣ್ಣಕಥೆ, ಹರಟೆ, ಪ್ರಬಂಧ, ಜೀವನಚರಿತ್ರೆ, ವಿಶ್ವಕೋಶ, ವಿಜ್ಞಾನ ಕೋಶ, ವೈಚಾರಿಕ ಸಾಹಿತ್ಯ, ಪ್ರವಾಸ ಸಾಹಿತ್ಯ, ಆತ್ಮ ಕಥೆ, ಚಿತ್ರಕಲೆ, ಶಿಲ್ಪಕಲೆ, ಯಕ್ಷಗಾನ, ಶಬ್ದಕೋಶ, ಮಕ್ಕಳ ಸಾಹಿತ್ಯ, ವಿಚಾರಸಾಹಿತ್ಯ, ಅನುವಾದ, ಸಂಪಾದನೆ ಮತ್ತು ಮುಖ್ಯವಾಗಿ ಕಾದಂಬರಿ ಹೀಗೆ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಸಹಾ ಲೇಖನಿ ಹರಿದಾಡಿಸಿದ್ದಾರೆ.

ಇಲ್ಲಿ ನಾನು ಕಾರಂತರ ಕಾದಂಬರಿಗಳ ವೈಶಿಷ್ಟ್ಯವನ್ನು ಮಾತ್ರ ತಿಳಿಸುತ್ತಿದ್ದೇನೆ. ಏಕೆಂದರೆ, ಈ ಮೇಲಿನ ಪ್ರಕಾರಗಳಿಗಿಂತ ಕಾರಂತರು ಕಾದಂಬರಿ ಪ್ರಕಾರದಲ್ಲಿ ಅತ್ಯುತ್ತಮ ಸಾಧನೆ ಸಾಧಿಸಿದ್ದಾರೆ ಹಾಗೂ ಓದುಗರನ್ನು ಸೆಳೆದಿದ್ದಾರೆ.ಕಾರಂತರು ಅಂದರೆ ಕಾದಂಬರಿ, ಕಾದಂಬರಿ ಅಂದರೆ ಕಾರಂತರು ಎಂದು ಹೇಳಿದರೇ ತಪ್ಪಾಗಲಾರದು ಎನಿಸುತ್ತದೆ.

ಕಾರಂತರ ಕಾದಂಬರಿಗಳನ್ನು ಅಧ್ಯಯನ ಮಾಡಿದಾಗ ನಮಗೆ ಎದ್ದು ಕಾಣುವ ಅಂಶವೆಂದರೆ ಆಧುನಿಕ ಪ್ರಕ್ರಿಯೆ. ಕಾರಂತರಿಗೂ ಆಧುನಿಕ ಪ್ರಕ್ರಿಯೆಗೂ ಹತ್ತಿರದ ಸಂಬಂಧ, ಹೇಗೆ ಅಂದರೆ ಬ್ರಿಟಿಷ್ ವಸಾಹತುಗಳು ಆರಂಭವಾಗಿದ್ದೇ ಮಂಗಳೂರಿನಲ್ಲಿ, ಕಾರಂತರು ಸಹಾ ಮಂಗಳೂರಿನ ಕಡೆಯವರೇ ಆದ್ದರಿಂದ ಪಾಶ್ಚಾತ್ಯ ಸಂಸ್ಕೃತಿಯ ಗಾಳಿ ಬೀಸಿದ್ದು ಕರಾವಳಿ ಪ್ರದೇಶಗಳಿಗೆ, ಅಲ್ಲದೇ ಮಿಷನರಿಗಳನ್ನು ಸ್ಥಾಪನೆ ಮಾಡಿ ಮತಾಂತರಕ್ಕೆ ಪ್ರಯತ್ನ ನಡೆಸುತ್ತಿದ್ದರು. ಅಂಥಹ ಸಂದರ್ಭದಲ್ಲಿ ಕಾರಂತರ ಕಾದಂಬರಿಗಳು ರಚನೆಗೊಂಡವು ಆ ಕಾರಣಕ್ಕಾಗಿ ಕಾರಂತರ

ಕಾದಂಬರಿಗಳಲ್ಲಿ ಇದರ ಪ್ರಭಾವ ಹೆಚ್ಚಿರುವುದನ್ನು ನೋಡಬಹುದು. ಉದಾಹರಣೆಗೆ ಚೋಮನದುಡಿ ಕಾದಂಬರಿಯಲ್ಲಿ ಚೋಮನ ಮಗ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುವನು ಹಾಗೆಯೇ ಚೋಮನಿಗೆ ಮತಾಂತರ ಹೊಂದುವ ಮನಸ್ಸು ಬರುವುದನ್ನು ನೋಡಬಹುದು. ಆದರೆ ಪಂಜುರ್ಲಿ ಭೂತದಿಂದ ಹಿಂದೆ ಸರಿಯುವನು. 'ಕಳಚಿದ ಕೊಂಡಿಗಳು' ಕಾದಂಬರಿಯಲ್ಲಿ ನೋಡಬಹುದು. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕೋಡಿ ಗ್ರಾಮದಲ್ಲಿ ರಾಮ ಐತಾಳರೂ, ಶೀನಮಯ್ಯರೂ ಸಂಪ್ರದಾಯದ ಜೀವನ ನಡೆಸುತ್ತಿರುವಾಗಲೇ ಅವರ ಸಮಕಾಲೀನರು ನಗರ ಪ್ರದೇಶಗಳಿಗೆ ಹೋಗಿ ಪರಂಪರಾಗತ ವೃತ್ತಿಯನ್ನು ತ್ಯಜಿಸಿ ಬದುಕುವ ಹೊಸ ಮಾರ್ಗಗಳನ್ನು ಕಂಡುಕೊಂಡಿರುವುದನ್ನು ನೋಡಬಹುದು. ಇದರ ಮೂಲಕ ಕಾರಂತರು ಆಧುನೀಕರಣ ತಂದಿರುವುದನ್ನು ನೋಡಬಹುದು. ಹಾಗೆಯೇ 'ಔದಾರ್ಯದ ಉರುಳಿನಲ್ಲಿ' ಕಾದಂಬರಿಯಲ್ಲಿ ಬರುವ ರಾಧಾಕೃಷ್ಣ, 'ಮುಗಿಯದ ಯುದ್ಧದಲ್ಲಿ' ಬರುವ ಅಚ್ಯುತರಾಯ, 'ಸಮೀಕ್ಷೆ'ಯ ಶ್ರೀನಿವಾಸ, 'ಉಕ್ಕಿದ ನೊರೆಯ ವಾಸುದೇವ' ಈ ಎಲ್ಲಾ ಪಾತ್ರಗಳ ಮೂಲಕ ಆಧುನಿಕ ಪ್ರಕ್ರಿಯೆಯೂ ಮೂಡಿರುವುದನ್ನು ಗಮನಿಸಬಹುದು.

ಈ ಮೇಲಿನ ಎಲ್ಲಾ ಕಾದಂಬರಿಗಳಲ್ಲಿ ಕಂಡು ಬಂದಿರುವ ಆಧುನಿಕ ಪ್ರಕ್ರಿಯೆಯನ್ನು ಗಮನಿಸಿದಾಗ ಕಾರಂತರ ಒಳಮನಸ್ಸಿನಲ್ಲಿ ಆಧುನಿಕ ಕ್ರಿಯೆ ನಡೆದಿರುವುದನ್ನು ನೋಡಬಹುದು, ಅಲ್ಲದೇ ಆಧುನೀಕರಣಕ್ಕೆ ಕಾರಂತರ ಮನಸ್ಸು ಒಲಿದಿರುವಂತೆ ಕಂಡುಬರುವುದು. ಆದರೆ ಚೋಮನದುಡಿಯ ಚೋಮನ ಪಾತ್ರವನ್ನು ಗಮನಿಸಿದಾಗ ಕಾರಂತರ ಪಂಜುರ್ಲಿ ಭೂತದ ಮೂಲಕ ಚೋಮನನ್ನು ಏಕೆ ತಡೆದಿದ್ದಾರೆ ಎಂಬುದು ಗಮನಾರ್ಹ ವಿಷಯ.

ಆಧುನಿಕತೆ ಎಂಬುದು ಮನುಷ್ಯನ ಬಾಹ್ಯಜೀವನಕ್ಕೆ ಮಾತ್ರ ಸಂಬಂಧಿಸಿದ ವಿಷಯವಲ್ಲ, ಆಂತರಿಕ ವಿಷಯಕ್ಕೂ ಸಂಬಂಧಿಸಿದೆ. ಕೇವಲ ಉಡುಪು, ನಡೆ-ನುಡಿಯಲ್ಲಿ ಮಾತ್ರ ಕಾಣಿಸದೇ ಆಚಾರ-ವಿಚಾರ, ಜೀವನ ದೃಷ್ಟಿಕೋನಗಳಲ್ಲಿ ನೋಡಬಹುದು. 'ಮೂಕಜ್ಜಿಯ ಕನಸುಗಳು' ಮತ್ತು 'ಮೈಮನಗಳ ಸುಳಿಯಲ್ಲಿ'

ಕಾದಂಬರಿಯಲ್ಲಿ ಬರುವ ಸುಬ್ರಾಯ, ಚಂದ್ರಿ ಮುಂತಾದ ಪಾತ್ರಗಳ ಮೂಲಕ ಆಂತರಿಕ ಆಧುನಿಕ ಪ್ರಕ್ರಿಯೆಯನ್ನು ಗಮನಿಸಬಹುದು.

ಕಾರಂತರ ಕಾದಂಬರಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಪರಿಸರ ಪ್ರಜ್ಞೆ. ನಮ್ಮ ಕನ್ನಡ ಸಾಹಿತ್ಯಲೋಕದಲ್ಲಿ ಅಂದರೆ ನವೋದಯ ಸಾಹಿತ್ಯದಲ್ಲಿ ಪರಿಸರದ ಚಿತ್ರಣದ ಮೂಲಕ ಸಾಮಾಜಿಕ ಸಮಸ್ಯೆಯನ್ನು ಹೇಳಿದವರೆಂದರೆ ಕುವೆಂಪು ಮತ್ತು ಕಾರಂತರು. ಸಾಮಾನ್ಯವಾಗಿ ಕುವೆಂಪು ಮತ್ತು ಕಾರಂತರ ಕಾದಂಬರಿಗಳಲ್ಲಿ, ಕಥೆಗಳಲ್ಲಿ, ನಾಟಕಗಳಲ್ಲಿ ಎದ್ದು ಕಾಣುವ ಅಂಶ ಪರಿಸರ ಪ್ರಜ್ಞೆ, ಪರಿಸರ ವರ್ಣನೆ ಇಲ್ಲದೆಯೇ ಮುಂದೆ ಹೋಗುವುದೇ ಇಲ್ಲ.

ಕಾರಂತರು ಪರಿಸರದ ಮಧ್ಯದಲ್ಲಿ ಹುಟ್ಟಿ ಬೆಳೆದವರು, ಕಾಡು, ಸಸ್ಯ, ಪ್ರಾಣಿಗಳು, ಪ್ರಕೃತಿ ಹೀಗೆ ಇವುಗಳ ಸಂಪೂರ್ಣ ಮಾಹಿತಿಯನ್ನು ಬಲ್ಲವರಾಗಿದ್ದರು ಎಂದೂ ಹೇಳಬಹುದು, ಹೀಗೆ ನೋಡುವುದಾದರೆ 'ಬೆಟ್ಟದ ಜೀವ'ಕಾದಂಬರಿಯಲ್ಲಿ "ಕಾಟಿದುಡ್ಡುಗಳ ಉಪದ್ರ" ಎಂಬ ಮಾತು ನೋಡಬಹುದು. ಕಾದಂಬರಿಯನ್ನು ಓದುವ ಸಂದರ್ಭದಲ್ಲಿ ಈ ಮಾತು ಕೇಳಿ ಕಾಟಿ, ದುಡ್ಡು ಹೇಗೆ ಇರಬಹುದು ಎಂಬ ಆಶ್ಚರ್ಯವಾಗಬಹುದು ಅಥವಾ ಚಿತ್ರಗಳಲ್ಲಿ ಪ್ರತ್ಯಕ್ಷವಾಗಿ ನೋಡಿದವರಿಗೆ ಅವುಗಳ ಚಿತ್ರವನ್ನು ಕಲ್ಪನೆಯ ಮೂಲಕ ನೆನೆಯಬಹುದು.

ಈ ಮೇಲಿನ ಒಂದು ಪದವನ್ನು ಹೇಳುವ ಅವಶ್ಯಕತೆ ಇತ್ತೇ? ಎಂದು ಕೇಳಬಹುದು. ಆದರೆ ಕಾರಂತರ ಸ್ಥಳೀಯ ಭೂಗೋಳವನ್ನು ಕಾದಂಬರಿಯಲ್ಲಿ ತಂದಿರುವುದರಿಂದ ಅವಶ್ಯ ಎಂದು ಹೇಳಬಹುದು.

ಚೋಮನದುಡಿಯಲ್ಲಿ ಅಷ್ಟು ಪರಿಸರ ವರ್ಣನೆ ಇಲ್ಲದಿದ್ದರೂ ಅಲ್ಪಸ್ವಲ್ಪವಾದರೂ ಸಹ ನೋಡಬಹುದು. ಅಂದರೆ ಚೋಮನ ಊರಿನವರು ಹಾಗೂ ಚೋಮನ ಕುಟುಂಬದವರು ಜೀತದ ಕೆಲಸ ಮಾಡಲು ದೂರದ ಊರಾದ ಕಳಸಕ್ಕೆ ಹೋಗುತ್ತಿದ್ದರು ಆ ಸಂದರ್ಭದಲ್ಲಿ ಗುಡ್ಡಬೆಟ್ಟಗಳನ್ನು ದಾಟಿ ಅರಣ್ಯದ ಮಧ್ಯದಲ್ಲಿ ಹೋಗಬೇಕಿತ್ತು, ಹಾಗೆಯೇ ಕಾಡಿನ ಮಧ್ಯದಲ್ಲಿ ಹರಿಯುತ್ತಿದ್ದ ನದಿಗಳು, ಜರಿಗಳನ್ನು ಕಾರಂತರು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಹಾಗೆಯೇ ಮಳೆಗಾಲದ ಚಿತ್ರಣ, ಕಾಫಿ ತೋಟದ ಚಿತ್ರಣವನ್ನು ಸಹ ನೋಡಬಹುದು.

'ಬೆಟ್ಟದಜೀವ' ಕಾದಂಬರಿಯಲ್ಲಿ ಬರುವ ಗೋಪಾಲಯ್ಯ ಶಿವರಾಮಯ್ಯ ಕಾಡಿನಲ್ಲಿ ಹೋಗುವಾಗ "ಈ ಹಪ್ಪಳ ಕರಿದ ವಾಸನೆಯುಂಟಲ್ಲ ಅದು ಕನ್ನಡಿ ಹಾವಿನದ್ದು"[?] ಎಂದು ಗೋಪಾಲಯ್ಯ ಹೇಳುವನು. ಇದರಿಂದ ನಾವು ಅವನನ್ನು ಪಕ್ಕಾ ಪ್ರಕೃತಿಪ್ರಿಯ ಎಂದು ಹೇಳಬಹುದು.

ಕಾರಂತರು ತಮ್ಮ ಕಾದಂಬರಿಗಳಲ್ಲಿ ಪರಿಸರ ಪ್ರಜ್ಞೆಗಳ ಜೊತೆಗೆ ಸಾಮಾಜಿಕ ಜೀವನವನ್ನು ಒಂದರೊಳಗೊಂದು ಬೆರೆತುಹೋದಂತೆ ಮಾಡಿರುವುದನ್ನು ನೋಡಬಹುದು.

ಕಾರಂತರು ಕಾದಂಬರಿಯನ್ನು ರಚನೆ ಮಾಡಿದ ವರ್ಷ ಸ್ವಾತಂತ್ರ ಪೂರ್ವದ್ದು. ಆ ಕಾಲದಲ್ಲಿ ಮಹಿಳೆಯರಿಗೆ ಸ್ಥಾನಮಾನ ಇಲ್ಲದ ಸಮಯ, ಅಂತಹ ಕಾಲದಲ್ಲಿ ಕಾದಂಬರಿಯನ್ನು ರಚನೆ ಮಾಡಿ ಅದರ ಮೂಲಕ ಸ್ತ್ರೀ ಪಾತ್ರಗಳನ್ನು ತರುವ ಕೆಲಸ ಮಾಡಿದ್ದಾರೆ. ಅಲ್ಲದೇ ಸ್ತ್ರೀಯರೇ ಮನೆಯನ್ನು ನಿಭಾಯಿಸುವುದನ್ನು ಕಾರಂತರ ಕಾದಂಬರಿಗಳಲ್ಲಿ ನೋಡಬಹುದು.

'ಮರಳಿಮಣ್ಣಿಗೆ' ಕಾದಂಬರಿಯನ್ನು ಸ್ತ್ರೀ ಪಾತ್ರಗಳು ಒಂದು ಗಟ್ಟಿತನವನ್ನು ಹೋಂದಿವೆ. ಐತಾಳರ ತಂಗಿ ಸರಸೋತಿ ಬೇಸಾಯದ ಬದುಕನ್ನು, ಅದರ ಕಷ್ಟ ಕಾರ್ಪಣ್ಯಗಳನ್ನು ಧೈರ್ಯದಿಂದ ಎದುರಿಸುತ್ತಾಳೆ. ಕಾರಂತರು ಈ ಕಾದಂಬರಿಯಲ್ಲಿ ಸರಸೋತಿ, ಪಾರೋತಿ, ನಾಗವೇಣಿ ಇನ್ನೂ ಅನೇಕ ಸ್ತ್ರೀ ಪಾತ್ರಗಳನ್ನು ತಂದಿದ್ದಾರೆ. ಹಾಗೆಯೇ 'ಇನ್ನೊಂದು ದಾರಿಯ' 'ಹೊನ್ನಜ್ಜಿ', ಚೋಮನದುಡಿಯ ಸಂಕಪ್ಪಯ್ಯನವರ ತಾಯಿ, ಬೆಳ್ಳಿ ಪಾತ್ರಗಳನ್ನು ಚಿತ್ರಿಸಿದ್ದಾರೆ. ಕಾರಂತರ ಕಾದಂಬರಿಗಳನ್ನು ಓದುತ್ತಿದ್ದರೆ ಕಾರಂತರು ಸ್ತ್ರೀವಾದಿ ಲೇಖಕರು ಎಂದು ಗೋಚರಿಸುವುದು ಅಷ್ಟು ಚೆನ್ನಾಗಿ ಸ್ತ್ರೀಪಾತ್ರಗಳನ್ನು ಚಿತ್ರಿಸಿದ್ದಾರೆ.

'ಒಡಹುಟ್ಟಿದವರು'ಕಾದಂಬರಿಯ ಮುನ್ನುಡಿಯಲ್ಲಿ ಕಾರಂತರು ಹೀಗೆ ಹೇಳಿದ್ದಾರೆ. "ಗಂಡು ಹೆಣ್ಣುಗಳ ಸ್ನೇಹದ ಬಾಳಿಗೆ, ಮದುವೆಗೆ, ಸಂಸ್ಕಾರಕ್ಕೆ ಎಷ್ಟೆಲ್ಲ ಮುಖಗಳು ಬಂದಾವೆಂದು ಹೇಳಲು ಬಂದೀತೇ? ಅದು ಅಧಿಕಾರಗಳ, ಶಾಸ್ತ್ರಗಳ ಬಲವಂತದಿಂದ ನಡೆಯುವಂತಹುದೂ ಅಲ್ಲ[?]"

'ನಂಬಿದವರ ನಾಕ ನರಕ'ದಲ್ಲಿ ಬರುವ ಸತ್ಯಭಾಮೆ, ಸರಸಮ್ಮನ ಸಮಾಧಿಯಲ್ಲಿ ಸುನಾಲಿನಿಯನ್ನು' ಮೈಮನಗಳ ಸೂಳಿಯಲ್ಲಿಯ ಮಂಜುಳೆಯನ್ನು, ಕರುಳಿನ ಕರೆಯ, ಕಂಪಿಯನ್ನು ಕಾರಂತರು ಕಾದಂಬರಿಯಲ್ಲಿ ಗಂಡು ಹೆಣ್ಣಿನ ಸಂಬಂಧದ ಮೂಲಕ ನೋಡಿದ್ದಾರೆ.

ಕಾರಂತರ ಕಾದಂಬರಿಯಲ್ಲಿ ಬರುವ ಮತ್ತೊಂದು ವಿಶಿಷ್ಟತೆ ಅಂದರೆ ಸನ್ಯಾಸಿಗಳ ಬಗ್ಗೆ ಚಿತ್ರಣ. ಕಾರಂತರು ಸನ್ಯಾಸಿಗಳನ್ನು ಮತ್ತು ಸನ್ಯಾಸದ ಬಗ್ಗೆ ಕಾದಂಬರಿಯ ಉದ್ದಕ್ಕೂ ಟೀಕಿಸುತ್ತಾ ಬಂದಿದ್ದಾರೆ. ಸನ್ಯಾಸಿಗಳ ಬಗ್ಗೆ 'ಸನ್ಯಾಸಿಗಳ ಬದುಕು' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಆದರೂ ಕಾರಂತರು ಸನ್ಯಾಸದ ಬಗ್ಗೆ ಜೀವನದರ್ಶನವೆಂಬಂತೆ ಪ್ರತಿಪಾದಿಸುವ ಮನೋಧರ್ಮ ಎಂಬಂತೆ ಕಾರಂತರಲ್ಲಿ ಕಾಣಿಸುವುದು.

ಉದಾಹರಣೆಗೆ ಮೈಮನಗಳ ಸುಳಿಯಲ್ಲಿ ಬರುವ ಮಠದ ಸನ್ಯಾಸಿ ಲಕ್ಷ್ಮಣತೀರ್ಥಸ್ವಾಮಿ ಎಂಬುವವನು 'ಸಮೀಕ್ಷೆ' ಕಾದಂಬರಿಯಲ್ಲಿ ಪ್ರಯಾಣ ಸಂದರ್ಭದಲ್ಲಿ ಪರಿಚಿತನಾಗುವ ಸಿಂಹಳದ ಸನ್ಯಾಸಿ, 'ಸನ್ಯಾಸಿಯ ಬದುಕು' ಕಾದಂಬರಿಯಲ್ಲಿ ಬರುವ 'ತಪಸ್ವೀ ಮಹಾರಾಜ್' ಇವರನ್ನು ಕಾರಂತರ ಕಾದಂಬರಿಗಳಲ್ಲಿ ನೋಡಬಹುದು.

ಈ ಮೇಲಿನ ಅಂಶಗಳನ್ನು ನೋಡಿದಾಗ ಕಾರಂತರಿಗೆ ಸನ್ಯಾಸಿಗಳ ಮೇಲೆ ಒಲವು ಇತ್ತೋ ಇಲ್ಲವೋ ಎಂಬುದನ್ನು ತಿಳಿಯುವುದು ಕಷ್ಟಸಾಧ್ಯವಾಗುವುದು.

ಕಾರಂತರ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸದಲ್ಲಿ ಸಾಹಿತ್ಯ ಸೃಷ್ಟಿಯ ವ್ಯಾಪಕತೆಯಲ್ಲಿ ಅವರ ಪತ್ರಿಕೋದ್ಯಮದ ಅನುಭವಗಳು ವಿಶಿಷ್ಟವಾದ ಪಾತ್ರವನ್ನು ವಹಿಸಿದೆ. ಇಂತಹ ಪ್ರಭಾವವು ಕೆಲವು ಸಂದರ್ಭಗಳಲ್ಲಿ ನೇರವಾಗಿದ್ದರೆ, ಹಲವೆಡೆಗಳಲ್ಲಿ ಇದಕ್ಕೆ ಹೊಂದಿಕೊಂಡಂತೆ ಇದೆ.

ಕಾದಂಬರಿ ಪ್ರಕಾರದ ಅಂತರಂಗದಲ್ಲಿಯೇ ಕಲೆ-ವಾಸ್ತವಗಳೆರಡರ ತಿಕ್ಕಾಟದ ಮುಖಾಂತರ ಅವುಗಳ ಸತ್ಯಾಂಶವನ್ನು ಶೋಧಿಸುವ ಪರಿಕರವಾಗಿ ಅದರ ಅನೇಕ

ನಿಜಾಂಶಗಳನ್ನು ಕಾರಂತರು ಗುರುತಿಸಿಕೊಂಡಿದ್ದರು."ಕಾರಂತರ ಕಾದಂಬರಿಗಳು ಅವರು ಸ್ವೀಕರಿಸಿರುವ ಜ್ಞಾನ ಮೀಮಾಂಸೆಯ ಮಿತಿಗೆ ಒಳಪಡುತ್ತವೆ[2]"

ಈ ಮಾತನ್ನು ನೋಡಿದಾಗ ಕಾರಂತರ ಜ್ಞಾನ ರಾಶಿಯು ಸೀಮಿತ ಮಿತಿಗೆ ಒಳಪಟ್ಟಿದ್ದಲ್ಲ. ಇಡೀ ಸಮಾಜವೇ ಅವರ ಕಾದಂಬರಿಗಳಲ್ಲಿ ಪ್ರತಿಬಿಂಬಿತವಾಗಿದ್ದವು. ಒಂದು ಪಾತ್ರವು ಮಾತನಾಡುತ್ತಿದೆ.ಅಂದರೆ, ಅಲ್ಲಿ ಕಾರಂತರ ಜ್ಞಾನವೂ ಇದೆ ಎಂದು ಅರ್ಥ ಮಾಡಿಕೊಳ್ಳಬೇಕು. ಅವರ ಕಾದಂಬರಿಗಳಲ್ಲಿ ವಾಸ್ತವಾದಿ ಅಂಶಗಳನ್ನು ನೋಡಬಹುದು.ಜೊತೆಗೆ ವಾಸ್ತವ ಅಂದರೆ ಅವರ ಜೀವನದ ಅನುಭವವೂ ಆಗಬಹುದು.ಕಾರಂತರ ಜೀವನದ ಅನುಭವ ಅಪಾರವಾದದ್ದು.ಇಂತಹ ಅನುಭವ ಸಾರಾಂಶವೇ ಕಾರಂತರ ಒಟ್ಟು ಕಾದಂಬರಿಯ ಸಾರಾಂಶವೆಂದರೆ ಸರಿಯಾಗಬಹುದು.

ಕಾರಂತರ ಸಾಹಿತ್ಯಕ ಬದುಕನ್ನು ಒಂದು ಕಡೆಯಿಂದ ನೋಡಿದರೆ ಅವರ ಕಾದಂಬರಿ ಭಾಗವೂ ಪತ್ತೇದಾರಿಯಿಂದ ಆರಂಭವಾಗಿ ಅಂಟಿದ ಅಪರಂಜಿಯವರೆಗೂ ಹರಡಿಕೊಂಡಿದೆ. ಇಷ್ಟೆಲ್ಲಾ ಕಾದಂಬರಿಗಳು ಸಹಾ ಕಾರಂತರ ಜೀವನದ ಅನುಭವ ಮುಖಾಮುಖಿಯೇ ಆಗಿದೆ.ಅಲ್ಲದೇ ರಾಜಕೀಯ, ಪ್ರಾದೇಶಿಕ, ಸಾಮಾಜಿಕ, ವೈಜ್ಞಾನಿಕ, ಪ್ರಾಕೃತಿಕ ಮುಂತಾದ ಕಾದಂಬರಿಗಳಲ್ಲಿ ವಿಷಯಗಳನ್ನು ಅಳವಡಿಸಿದ್ದಾರೆ. ಈ ಎಲ್ಲಾ ಕಾದಂಬರಿಗಳು ಮೇಲ್ನೋಟಕ್ಕೆ ಒಂದೇ ರೀತಿ ಕಂಡರೂ ಅವುಗಳ ಅಂತರಂಗದ ವಿಷಯಗಳು ಬೇರೆ ಬೇರೆ ಅಂಶಗಳನ್ನು , ಚರ್ಚೆಗಳನ್ನು ಒಳಗೊಂಡಿದೆ.

ಕಾರಂತರು ತಮ್ಮ ಕಾದಂಬರಿಗಳಲ್ಲಿ ನಡೆಸುವ ಮನುಷ್ಯ ಪ್ರವೃತ್ತಿಗಳ ಶೋಧ, ಭಿನ್ನ ಧೃವಗಳ ಆಕರ್ಷಣೆ-ವಿಕರ್ಷಣೆಗಳ ಸಂಕೇತಗಳ ಗ್ರಹಿಸುವಿಕೆ. ವ್ಯವಸ್ಥೆಯ ಸ್ವೀಕೃತಿ-ನಿರಾಕೃತಿಗಳ ಸಂದಿಗ್ಧಗಳ ಹುಡುಕಾಟಗಳೆಲ್ಲವೂ ಗಮನಾರ್ಹವೆನಿಸುತ್ತವೆ. ಈ ಅರ್ಥದಲ್ಲಿ ಕಾರಂತರ ಕಾದಂಬರಿಗಳನ್ನು ಒಂದು ಪೂರ್ಣ ಘಟಕವಾಗಿ ತೆಗೆದುಕೊಳ್ಳುವುದೇ ಸೂಕ್ತವೆನಿಸುತ್ತದೆ. ಹಾಗೆ ಕಂಡಾಗ ಮಾತ್ರ ಕಾರಂತರು ಒಟ್ಟಾರೆಯಾಗಿ ಹಿಡಿದಿಟ್ಟ ಬದುಕಿನ ಚಿತ್ರವು ಮೈ ಪಡೆಯುತ್ತದೆ.

ಇನ್ನೊಂದು ಮಗ್ಗುಲಿನಿಂದ ಭಿನ್ನ ಭಿನ್ನ ಪರಿಕಲ್ಪನೆಗಳ ವಿಶಿಷ್ಟ ಆಯಾಮಗಳ ಪರಿಚಯವೂ ಇಲ್ಲಿ ಸಿಗುತ್ತದೆ. ಉದಾಹರಣೆಗೆ ಹಸಿವಿನಂತಹ ಅನುಭವವನ್ನೂ ಕಾರಂತರು ವಿಶ್ಲೇಷಿಸಿದ ರೀತಿಯನ್ನು ಗಮನಿಸಬಹುದು. ಅದು ನೆಲದ ಹಂಬಲವಾಗಿ

ಸಂಬಂಧಗಳ ದಾಹವಾಗಿ, ಕಾಮದ ಸೆಳೆತವಾಗಿ, ಆಧ್ಯಾತ್ಮಿಕ ಚಿಂತನೆಯಾಘಿ, ಪ್ರಗತಿಪ್ರೇರಣೆಯಾಗಿ ಅರ್ಥಾಂತರಗಳನ್ನು ಪಡೆಯುತ್ತಲೇ ಹೋಗುತ್ತದೆ. ವಾಸ್ತವದ ಅಂಚಿನಲ್ಲಿ ನಡೆಯುವ ಈ ನಿಜದ ಅಗೆತಗಳು ಸೂಕ್ಷ್ಮಾತಿಸೂಕ್ಷ್ಮ ಪದರಗಳನ್ನು ತೋರಿಸುತ್ತವೆ.

ಕಾರಂತರ ಕಾದಂಬರಿಗಳನ್ನು ಒಂದರ ಮೇಲೆ ಒಂದು ಅಭ್ಯಾಸ ಮಾಡುವುದು ಕಷ್ಟವಾಗುವುದು. ಒಂದೊಂದು ಕಾದಂಬರಿಯ ತಂತ್ರ, ಆಶಯ, ವಿನ್ಯಾಸಗಳನು ಅರ್ಥೈಸುವುದು ಸುಲಭದ ಮಾತಲ್ಲ. ತೀರಾ ವಾಸ್ತವವಾದಿ ಕಾದಂಬರಿಗಳು ಮತ್ತು ವಾಸ್ತವ ಅವಾಸ್ತವಗಳನ್ನು ಸಮ್ಮಿಶ್ರಗೊಳಿಸಿಕೊಂಡ ಕಾದಂಬರಿಗಳೆನ್ನುವ ಎರಡು ಮುಖ್ಯ ಪ್ರವಾಹಗಳನ್ನು ಇಲ್ಲಿ ಕಾಣುತ್ತೇವೆ. ಕಾರಂತರು ತಮ್ಮ ಕಾದಂಬರಿಗಳಲ್ಲಿ ವ್ಯಂಗ್ಯ, ವಿನೋದ, ವಿಡಂಬನೆಗಳನ್ನು ಬೆರೆಸಿ ಓದುಗರನ್ನು ಕಾದಂಬರಿಯಲ್ಲಿ ಕೇಂದ್ರೀಕರಿಸುತ್ತಾರೆ.

ಕಾರಂತರು ತಮ್ಮ ಕಾದಂಬರಿಯ ಮೂಲಕ ಸಮಾಜದಲ್ಲಿ ನಡೆಯುವ ಅನ್ಯಾಯ, ಸಂಘರ್ಷಗಳಿಗೆ ಮಾರ್ಗವನ್ನು ಸೂಚಿಸುತ್ತಾರೆ. ಈ ಮಾರ್ಗವೇ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಬಹುದು.ಜನರಲ್ಲಿ ಸೌಹಾರ್ದ ಬಾವನೆಯನ್ನು ಮೂಡುವಂತೆ ಮಾಡಬಹುದು.ಕಾರಂತರ ಕಾದಂಬರಿಗಳು ಜನರಲ್ಲಿ ಶಾಂತಿ, ನೆಮ್ಮದಿ ಜೊತೆಗೆ ಆಕ್ರೋಶವನ್ನು ಬರಿಸಬಹುದು.

ಚೋಮನದುಡಿ ಕಾದಂಬರಿಯನ್ನು ಬರೆದಕಾಲಕ್ಕೆ ಆ ಕಾದಂಬರಿಗೆ ಅಷ್ಟು ಮನ್ನಣೆಯಾಗಲೀ,ಜನಪ್ರಿಯವಾಗಲೀ ಸಿಗಲಿಲ್ಲ ಅನಿಸುತ್ತದೆ. ಆದರೆ, ಸಾಹಿತ್ಯದ ಮತ್ತು ಸಮಾಜದಲ್ಲನ ಸಾಮಾಜಿಕ ವಾತಾವರಣವು ಬದಲಾದಂತೆ ಮತ್ತು ದಲಿತ ಸಾಹಿತ್ಯವನ್ನು ಆರಂಭ ಮಾಡಿದ ಸನ್ನಿವೇಶದಲ್ಲಿ ರಚನೆಗೊಂಡ ಚೋಮನದುಡಿಗೆ ಹೆಚ್ಚು ಜನಪ್ರಿಯತೆ ದೊರೆಯಲಾರಂಭಿಸಿತು. 'ಕುಡಿಯರ ಕೂಸು ಮತ್ತು ಚೋಮನದುಡಿಗಳಂತಹ ಕಾದಂಬರಿಗಳಲ್ಲಿ ಚಿತ್ರಿತಗೊಂಡಿರುವ ಬದುಕು ದಲಿತ ಜನಾಂಗದ ಜನಗಳ ಬದುಕು ಆದ್ದರಿಂದ ದಲಿತ ನಾಯಕರ ಮನ್ನಣೆಗೆ,ಚರ್ಚೆಗೆ ಒಳಗಾದವು.

ಚೋಮನದುಡಿ ಕಾದಂಬರಿಯಲ್ಲಿ ಬರುವ ಅಂಶಗಳೆಲ್ಲವೂ ಕಾರಂತರ ಸ್ವ ಅನುಭವಗಳೇ ಅಥವಾ ಬೇರೆಯವರ ಅನುಭವವನ್ನು ನೋಡಿ ರಚಿಸಿರಬಹುದೇ? ಎಂಬ ಪ್ರಶ್ನೆ ಮೂಡುವುದು ಸಹಜ. ಈ ಅಂಶವೇ ಕಾದಂಬರಿಯನ್ನು ವಿವಾದಾತ್ಮಕ ಕಾದಂಬರಿಯನ್ನಾಗಿ ಮಾಡಿರಬಹುದು. ಈ ಅಂಶವನ್ನು ಇಟ್ಟುಕೊಂಡೇ ಕಾದಂಬರಿಯನ್ನು ಗ್ರಹಿಸುವ, ವಿಶ್ಲೇಷಿಸುವ, ಅದರ ಜೊತೆಗೆ ವಿಮರ್ಶಕರ ಮಾತುಗಳನ್ನು ಸಹಾ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದ್ದೇನೆ.

ಕಾರಂತರ ಕಾದಂಬರಿಗಳಲ್ಲಿ ಮುಖ್ಯವಾಗಿ ಕಾಣುವ ಮತ್ತೊಂದು ಅಂಶವೆಂದರೆ ವಾಸ್ತವಾಂಶ.ಚೋಮನದುಡಿ ಕಾದಂಬರಿಯಲ್ಲಿಯೂ ಈ ಅಂಶ ಪ್ರಖರವಾಗಿ ಎದ್ದು ಕಾಣುತ್ತದೆ. ಚೋಮನನ್ನು ನೋಡಿದಾಗ ಎದ್ದು ಕಾಣುವ ವಾಸ್ತವಾಂಶವೆಂದರೇ ಬಡತನ,ಜೀವನದ ಆಸೆಗಳು.ಚೋಮ ಅವನ ಕುಟುಂಬದವರು ಹೇಗೆ ಕಟ್ಟುಪಾಡುಗಳಿಗೆ ಅಂತರ್ಗತವಾಗಿದ್ದರೋ ಹಾಗೆಯೇ ಮೇಲ್ವರ್ಗದವರೂ ಬಂಧಿತರು ಎಂಬುದನ್ನು ನೋಡಬಹುದು. ಪರಂಪರೆ ಮತ್ತು ಸಾಂಪ್ರದಾಯಗಳನ್ನು ಬೇರೆ ಬೇರೆ ಅರ್ಥಗಳಲ್ಲಿ ಗ್ರಹಿಸಬಹುದು.ಪರಂಪರೆಯನ್ನು ಸಂಸ್ಕೃತಿ ಎಂದೂ ಕರೆಯಬಹುದು.ಸಂಪ್ರದಾಯವೂ ಜನರ ಆಚರಣೆಗಳಿಗೆ ಸೀಮಿತವಾಗಬಹುದು. ಹೀಗೆ ಕಾರಂತರ ಒಟ್ಟು ಕಾದಂಬರಿಗಳನ್ನು ನೋಡುವಲ್ಲಿ ಕಾರಂತರು ಜೀವನದ ಪ್ರತಿಯೊಂದು ಘಟ್ಟಗಳನ್ನು, ಸಮಸ್ಯೆಗಳನ್ನು, ನೋವುಗಳನ್ನು, ಪ್ರೀತಿಯನ್ನು ಆಚಾರ, ವಿಚಾರಗಳನ್ನು ಒಳಗೊಂಡಿದೆ.

ಅಡಿ ಟಿಪ್ಪಣಿ:

೧. ಬೆಟ್ಟದ ಜೀವ, ಶಿವರಾಮಕಾರಂತರು, ಪುಟ-೨೦

೨. ಶಿವರಾಮಕಾರಂತರ ಸಾಂಸ್ಕೃತಿಕ ಅನುಸಂಧಾನ, ಸಂ.ಡಾ।ಗುರುಲಿಂಗ ಕಪಾಸೆ

೩. ಶಿವರಾಮಕಾರಂತ, ತಾಳ್ತಜೆ ವಸಂತಕುಮಾರ್, ೨೦೦೩

ಅಧ್ಯಾಯ–4

ವಿಮರ್ಶಾ ಲೇಖನಗಳ ಅಧ್ಯಯನ

ಅ) 'ಚೋಮನದುಡಿ' ಕಾದಂಬರಿಯಲ್ಲಿ ಆಧುನಿಕ ಪ್ರಕ್ರಿಯೆ –ಟಿ.ಪಿ.ಅಶೋಕ.

ನವೋದಯ ಕಾಲಘಟ್ಟದಲ್ಲಿ ಪ್ರಜ್ವಲಿಸಿದ ನಕ್ಷತ್ರವೆಂದರೆ ಶಿವರಾಮಕಾರಂತರು, ಅದರಲ್ಲೂ ಕಾದಂಬರಿ ಕ್ಷೇತ್ರದಲ್ಲಿ ಹೆಚ್ಚು ಸಾಧನೆಗೈದವರು. ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ತುಂಬಾ ವಿಶಾಲವಾದದ್ದು. ಶಿವರಾಮಕಾರಂತರ ಬರೆಯದೇ ಇರುವ ಕ್ಷೇತ್ರವೇ ಇಲ್ಲ ಎಂದು ಹೇಳಬಹುದು. ಇದರ ಅರ್ಥ, ಕಾರಂತರು ನಾಟಕ ಕ್ಷೇತ್ರ, ಕಾದಂಬರಿ ಕ್ಷೇತ್ರ, ವಿಜ್ಞಾನ ಕ್ಷೇತ್ರದಲ್ಲಿ ಹೀಗೇ ಇನ್ನೂ ಅನೇಕ ಕ್ಷೇತ್ರಗಳಲ್ಲಿ ತಮ್ಮ ಲೇಖನಿಯನ್ನು ಹರಿದಾಡಿಸಿದ್ದಾರೆ, ಹೀಗೆ ಹರಿದಾಡಿಸಿದ ಕ್ಷೇತ್ರಗಳಲ್ಲಿ ಕಾದಂಬರಿ ಕ್ಷೇತ್ರವೂ ಅತಿ ಪ್ರಸಿಧವಾದದ್ದು, ಆ ಪ್ರಸಿದ್ಧ ಕಾದಂಬರಿಗಳಲ್ಲಿ ಚೋಮನದುಡಿ ಕಾದಂಬರಿಯು ಅತಿ ಶ್ರೇಷ್ಟವಾದದ್ದು.

ಚೋಮನದುಡಿ ಕಾದಂಬರಿಯು ಸ್ವಾತಂತ್ರ ಪೂರ್ವದಲ್ಲಿ ರಚನೆಯಾಯಿತು. ಅಂದರೆ ಆಗ ನಮ್ಮ ಭಾರತವೂ ಬ್ರಿಟಿಷರ ಆಳ್ವಿಕೆಯಲ್ಲಿತ್ತು. ಅಲ್ಲದೇ ಅಂದಿನ ಶೂದ್ರರ ಸಮಾಜವು ಬ್ರಾಹ್ಮಣಶಾಹಿ ದೌರ್ಜನ್ಯಕ್ಕೆ ಒಳಗಾಗಿತ್ತು. ಅಂಥಹ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಶಿವರಾಮಕಾರಂತರು ದಲಿತರ ಚೋಮನ ಬಗ್ಗೆ ಬರೆಯುವುದೇ ಒಂದು ಆಧುನಿಕ ಪ್ರಕ್ರಿಯೆ. ಅಂದರೆ ಒಬ್ಬ ದಲಿತ ದಲಿತನ ಬಗ್ಗೆ ಬರೆಯುವುದು ವಿಶೇಷವಾಗುವುದಿಲ್ಲ, ಒಬ್ಬ ಬ್ರಾಹ್ಮಣ ಲೇಖಕ ದಲಿತನ ಬಗ್ಗೆ ಬರೆಯುವುದೇ ಒಂದು ಕ್ರಾಂತಿ. ಅದರಲ್ಲೂ ಆ ಕಾಲದಲ್ಲಿ ಅಂದರೆ ಬ್ರಾಹ್ಮಣರ ಆಡಳಿತ ಕಾಲದಲ್ಲಿ ಬರೆಯುವುದೇ ಒಂದು ಕ್ರಾಂತಿ ಎಂದು ಹೇಳಬಹುದು. ದಲಿತರ ನೋವುಗಳು ಕಾರಂತರಿಗೆ ಕಾಣದೇ ಇರಬಹುದು. ಕಂಡ ನೋವುಗಳನ್ನೇ ಬರೆಯುವುದು ಸುಲಭವಲ್ಲ, ಕಾರಂತರು ಈಡೀ ಬ್ರಾಹ್ಮಣ ಸಮಾಜವನ್ನು ಎದುರು ಹಾಕಿಕೊಂಡು ಕಷ್ಟವಾದದ್ದನ್ನು ಸುಲಭ ಮಾಡಿದ್ದಾರೆ.

ಈ ಸಮಾಜದಲ್ಲಿ ಜಾತಿ ಕಲ್ಪನೆ ಮೂಡುವುದಕ್ಕಿಂತ ಮೊದಲು ವರ್ಗವ್ಯವಸ್ಥೆಯನ್ನು, ವರ್ಣ ವ್ಯವಸ್ಥೆಯನ್ನು ನೋಡಬಹುದು, ಇಂತಹ ವರ್ಗವ್ಯವಸ್ಥೆಯೂ ಸಾಮಾನ್ಯವಾಗಿ ವೇದಗಳ ಕಾಲದಿಂದಲೂ ಬೆಳೆದುಕೊಂಡು

ಆಧುನಿಕ ಕಾಲದವರೆಗೂ ಇರುವುದನ್ನು ಕಾಣಬಹುದು. ಹಾಗೆಯೇ ಚೋಮನದುಡಿ ಕಾದಂಬರಿಯಲ್ಲಿಯೂ ಸಹ ಮತ್ತು ಆ ಕಾದಂಬರಿ ರಚನೆಯಾದ ಕಾಲದಲ್ಲಿಯೂ ವರ್ಗವ್ಯವಸ್ಥೆ ಇರುವುದನ್ನು ಕಾಣಬಹುದು.

ಚೋಮನದುಡಿ ಕಾದಂಬರಿಯಲ್ಲಿ ಬ್ರಾಹ್ಮಣವರ್ಗ ಹಾಗೂ ಶೂದ್ರ ವರ್ಗಗಳ ನಡುವಿನ ಶೋಷಣೆಯ ಜೊತೆಗೆ ಬ್ರಾಹ್ಮಣರ ದಬ್ಬಾಳಿಕೆಯನ್ನು ಎದ್ದು ಕಾಣಿಸುತ್ತದೆ. ಈ ಅಧ್ಯಯನ ಭಾಗದಲ್ಲಿ ನಾನು ಚೋಮನದುಡಿ ಕಾದಂಬರಿಯಲ್ಲಿ ಆಧುನಿಕ ಪ್ರಕ್ರಿಯೆ ಎಂಬ ವಿಷಯವನ್ನು ಟಿ.ಪಿ.ಅಶೋಕರವರು ಬರೆದಿರುವಂತಹ ಈ ಲೇಖನವನ್ನು ಕುರಿತು ನನ್ನ ಅಧ್ಯಯನ ನಡೆಸುತ್ತಿದ್ದೇನೆ.

ಈ ಕಾದಂಬರಿಯಲ್ಲಿ ಆಧುನೀಕರಣದ ಪ್ರಕ್ರಿಯೆಯನ್ನು ಆದಿಯಿಂದ ಅಂತ್ಯದವರೆಗೂ ನೋಡಬಹುದು. ಸಂಪ್ರದಾಯ ಕಾಲದ ಸಮಾಜದಲ್ಲಿ ಇದ್ದ ವ್ಯವಸ್ಥೆಯನ್ನು ಆಧುನಿಕತೆಗೆ ತರುವ ಪ್ರಯತ್ನವನ್ನು ಕಾರಂತರು ಮಾಡಿದ್ದಾರೆ, ಅದುವೇ ಕಾದಂಬರಿಯ ವಸ್ತು. ಸಂಪ್ರದಾಯವನ್ನು ಮೀರಿ ಹೋಗದ ಸಮಯದಲ್ಲಿ ಬ್ರಿಟಿಷರ ಆಳ್ವಿಕೆಯ ಹಾದಿಯಲ್ಲೂ ಸಹ ಕಾರಂತರು ಬರೆದಿರುವುದು ಅವರ ಅಭಿರುಚಿಯ ಜೊತೆಗೆ ಮೌಲ್ಯಗಳನ್ನು ತೋರಿಸಿದ್ದಾರೆ.

ಅಶೋಕರು ತಮ್ಮ ಲೇಖನದ ಹಾದಿಯಲ್ಲಿ ಹೀಗೆ ಪ್ರತಿಕ್ರಯಿಸಿದ್ದಾರೆ, “ಕಾದಂಬರಿಗಳಲ್ಲಿ ಒಂದು ಸಂಕೀರ್ಣ ಅನುಭವವಾಗಿ ಮೂಡಿಬರುತ್ತದೆ. ಕೆಲವು ಕಾದಂಬರಿಗಳಲ್ಲಿ ಉದಾರೀಕರಣದ ಪ್ರಕ್ರಿಯೆಯೇ ಪ್ರಧಾನ ವಸ್ತುವಾಗಿದೆ. ಇನ್ನು ಕೆಲವು ಕಾದಂಬರಿಗಳಲ್ಲಿ ಅವುಗಳ ಮುಖ್ಯವಸ್ತು ಏನೇ ಇರಲಿ ಗಂಡು-ಹೆಣ್ಣಿನ ಸಂಬಂಧ ಇರಬಹುದು. ಮನುಷ್ಯನ ಸ್ವಭಾವದ ವಿಶ್ಲೇಷಣೆ ಇರಬಹುದು. ಜೀವನದ ಅರ್ಥದ ಶೋಧನೆ ಇರಬಹುದು-ಆಧುನೀಕರಣದ ಪ್ರಕ್ರಿಯೆ ಒಂದು ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ”[1]

ಈ ಮೇಲಿನ ಮಾತನ್ನು ಗಮನಿಸಿದಾಗ ನಮ್ಮ ಅನುಭವಕ್ಕೆ ಬರುವುದೆಂದರೆ ಆ ಕಾಲಘಟ್ಟದಲ್ಲಿ ಭಾರತೀಯರು ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿದ್ದರು, ಹೋಗುತ್ತಿದ್ದರು. ಏಕೆಂದರೆ ಬ್ರಿಟಿಷರು ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಸಂಸ್ಥೆಗಳನ್ನು, ಮಿಷನರಿಗಳನ್ನು ಕಾಯ್ದೆಗಳನ್ನು ತರುವುದರ ಮೂಲಕ ಭಾರತೀಯರ

ಮನಸ್ಸನ್ನು ತನ್ನತ್ತ ಸೆಳೆಯಲಾರಂಭಿಸಿದರು. ಈ ಸಂದರ್ಭದಲ್ಲಿ ಬಂದ 'ಚೋಮನದುಡಿ'ಯು ಸಹ ಇದಕ್ಕೆ ಹೊರತಾಗಲಿಲ್ಲ, ಆದರೂ ವಸಾಹತುಶಾಹಿ ತಂದ ಹೊಸ ಪದ್ಧತಿಗಳಿಗೆ ಸಮಾಜದಲ್ಲಿ ಸಮಾನ ಪ್ರತಿಕ್ರಿಯೆ ಸಿಗಲಿಲ್ಲ, ಕೆಲವು ಪದ್ಧತಿಗಳನ್ನು ವಿರೋಧಿಸಿದರು ಅದರಲ್ಲೂ ಬಹು ಸಂಸ್ಕೃತಿಯನ್ನು ಹೊಂದಿದ್ದ ನಮ್ಮ ದೇಶದಲ್ಲಿ ವಸಾಹತುಶಾಹಿ ತಂದ ಪದ್ಧತಿಗಳನ್ನು ತಕ್ಷಣ ಒಪ್ಪಿಕೊಳ್ಳುವುದು ಸಾಧ್ಯವಾಗಲಿಲ್ಲ. ಆಸೆ-ಆಕಾಂಕ್ಷೆಗಳಿಗೆ ಬಲಿಯಾದ ಜನರು ಹೆಚ್ಚು ಅವಿದ್ಯಾವಂತರಿದ್ದರೂ ಅವರಲ್ಲೂ ಒಂದು ಮೂಲೆಯಲ್ಲಿ ನಮ್ಮ ಸಂಸ್ಕೃತಿಯನ್ನು ಬಿಡುವುದು ಸಾಧ್ಯವಿಲ್ಲವಾಗಿತ್ತು. ಇಂತಹ ಸ್ಥಿತಿಯಲ್ಲಿ ತೊಳಲಾಡುವ ಜನಗಳನ್ನು ಕಾರಂತರ ಕಾದಂಬರಿಗಳಲ್ಲಿ ನೋಡಬಹುದು. ಉದಾಹರಣೆಗೆ ಚೋಮನು ಒಂದು ಕಡೆ ಹಿಂದೂ ಧರ್ಮವನ್ನು ತ್ಯಜಿಸಿ ಕ್ರಿಶ್ಚಿಯನ್ ಧರ್ಮಕ್ಕೆ ಹೋಗುವ ನಿರ್ಧಾರ ಮಾಡುವನು, ಆದರೆ ಅವನ ಮನಸ್ಸಿನಲ್ಲಿ ಇದ್ದ ಪಂಜುರ್ಲಿ ಭೂತವು ಅವನನ್ನು ಕ್ರಿಶ್ಚಿಯನ್ ಧರ್ಮಕ್ಕೆ ಹೋಗದಂತೆ ಅವನನ್ನು ತಡೆಯಿತು.

ಇಲ್ಲಿ ಕಾರಂತರ ಚೋಮನ ಮನಸ್ಸಿನಲ್ಲಿ ಆಧುನಿಕತೆಯನ್ನು ತಂದಿದ್ದಾರೆ ಆದರೆ ಅದನ್ನು ಪೂರೈಸುವ ಕಾರ್ಯ ಕೈಗೊಂಡಿಲ್ಲ. ಏಕೆಂದರೆ ಈ ರೀತಿಯ ಆಧುನಿಕತೆ ಕಾರಂತರಿಗೆ ಇಷ್ಟವಾಗಲಿಲ್ಲವೆನಿಸುತ್ತದೆ. ಅವರು ಕಾದಂಬರಿಯಲ್ಲಿ ಓದುಗರಿಗೆ ಪ್ರತಿಬಿಂಬಿಸುವಂತೆ ಮಾಡಿದ್ದಾರೆ.

ಚೋಮನಿಗೆ ಬಂದ ಭೂಮಿಯ ಒಡೆತನದ ಆಸೆಯನ್ನು ಹೀಗೆ ನೋಡಬಹುದು-ತಾನು ನೆಲವನ್ನು ಉತ್ತು ಬಿತ್ತಬೇಕೆಂದು, ಬೇಸಾಯಗಾರನಾಗಬೇಕೆಂಬ ಬಯಕೆ ಕುತ್ತಿಗೆಯವರೆಗಿದೆ. ಆದರೆ ಅವನ ಊರಿನಲ್ಲಿ ಹೊಲೆಯ ಬೇಸಾಯಗಾರನೆಂಬ ಜಾತಿಯೇ ಇಲ್ಲ. ಹಾಗಾಗುವ ಆಸೆ ಹಿಡಿದು ಯಾರನ್ನಾದರೂ, ಅಂದರೆ ಸಂಕಪ್ಪಯ್ಯನವರನ್ನು 'ನಾಲ್ಕು ಗೇಣು ಜಾಗ ನನಗೆ ದೇಣಿಗೆ ಕೊಡಿರಿ' ಎಂದು ಕೇಳುವ ಸಾಹಸ ಬರದು. "ಆದರೂ ಒಂದಲ್ಲ ಒಂದು ದಿನ ನೇಗಿಲನ್ನು ಬಿಡಿದು ಮೆರೆದೇನೆಂಬ ಆಸೆಯಿದೆ.[2]"

"ಈ ರೀತಿಯ ಚೋಮನ ಆಸೆಯನ್ನು ನೋಡಿ ಅಶೋಕರು "ಹಿಂದೂ ಸಮಾಜ ಚೋಮನ ಮಾನವ ಸಹಜ ಅಭೀಪ್ಸೆಯೊಂದನ್ನು ಈಡೇರಿಸುವಷ್ಟು ಬದಲಾಗಿಲ್ಲ[2].."

ಯಾವ ಸಮಾಜವೂ ಸಹ ಅದಕ್ಕೆ ಅದೇ ಬದಲಾಗುವುದಿಲ್ಲ,. ಅದನ್ನು ಬದಲಾವಣೆ ಮಾಡಬೇಕಾಗುತ್ತದೆ, ಕಾರಂತರ ಕಾಲದಲ್ಲಿ ಆಗದೇ ಇರಬಹುದು, ಈಗಲೂ ಆಗದು ಎಂದು ಹೇಳಬಾರದು, ಅದನ್ನು ಬದಲಾವಣೆ ಮಾಡಿ ದಲಿತರ ಸಮಸ್ಯೆಗಳನ್ನು ಬಗೆಹರಿಸುವ ಹಾದಿಯಲ್ಲಿ ಸಾಗಬೇಕಾಗಿದೆ. ಅದರ ಜೊತೆಗೆ ಅವನಿಗೆ ಅಂದರೆ ಚೋಮನಂತಹವರಿಗೆ ಮುಕ್ತಿಯನ್ನು ದೊರಕಿಸಿಕೊಡಬೇಕು. ಆದರೂ ಕಾರಂತರ ಈ ಕಾದಂಬರಿ ಸುಮಾರು ೭೦ ವರ್ಷಗಳ ಹಿಂದೆ ರಚಿಗೊಂಡಿದೆ, ಆ ಕಾಲದಲ್ಲಿ ಈ ರೀತಿ ಆಲೋಚನೆ ಮಾಡುವುದೇ ಒಂದು ಕ್ರಾಂತಿಯನ್ನು ಮಾಡಿದ್ದಕ್ಕೆ ಸಮನಾಗುವುದು. ಅಲ್ಲದೇ ಕಾರಂತರು ಅಂತರ್ಜಾತಿ ವಿವಾಹವನ್ನು ಸಹ ಆಗಿದ್ದರು ಅಂದರೆ ಅದು ಎಂತಹ ಧೈರ್ಯ ಇರಬೇಕು, ೨೧ನೇ ಶತಮಾನದಲ್ಲಿ ಒಬ್ಬ ಬ್ರಾಹ್ಮಣ ಬೇರೆ ಜಾತಿಯವರನ್ನು ಮದುವೆ ಆಗುವುದು ಸಾಮಾನ್ಯವಲ್ಲ, ಅಂತಹುದರಲ್ಲಿ ಕಾರಂತರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಆ ಕೆಲಸ ಮಾಡಿ ಸಮಾಜಕ್ಕೆ, ಮುಂದಿನ ಜನಾಂಗಕ್ಕೆ ಮಾದರಿಯಾಗಿದ್ದಾರೆ. ಒಡಲಾಳ, ಕುಸುಮಬಾಲೆ ಕಾದಂಬರಿಗಳು ಮೂಡಿಬಂದ ಹಾಗೆ ಬರದೇ ಇದ್ದರೂ ಅದರ ಸಮಾನವಾಗಿ ಕಾಣುವಷ್ಟಾದರೂ ಅಂಶಗಳು ಚೋಮನದುಡಿಯಲ್ಲಿ ಕಾಣುತ್ತವೆ.

ವಸಾಹತುಶಾಹಿಯು ಮಿಷನರಿ ಸಂಸ್ಕೃತಿಯೊಂದಿಗೆ ದಕ್ಷಿಣ ಕನ್ನಡವನ್ನು ಈಗಾಗಲೇ ಪ್ರವೇಶಿಸಿದ್ದವು. ಈ ಮಿಷನರಿಗಳು ಮತಾಂತರ ಚಟುವಟಿಕೆಗಳಲ್ಲಿ ತೊಡಗಿದ್ದವು, ಮುಖ್ಯವಾಗಿ ದಲಿತರು ಕ್ರೈಸ್ತ ಮತಕ್ಕೆ ಸೇರಲಾರಂಭಿಸಿದ್ದರು. ಈ ಮತಾಂತರದ ಹಿಂದಿನ ಒಂದು ಮುಖ್ಯ ಪ್ರೇರಣೆಯೆಂದರೆ ಮಿಶನರಿಗಳು ನೀಡುವ ಆರ್ಥಿಕ ಪ್ರಲೋಭನೆ, ಕ್ರೈಸ್ತ ಮತಕ್ಕೆ ಮತಾಂತರಗೊಂಡ ಅಸ್ಪೃಶ್ಯರಿಗೆ ಮಿಷನರಿಗಳು ಉಳಲು ಭೂಮಿಯನ್ನು ಕೊಡುತ್ತಿದ್ದವು. ಹಿಂದೂ ಸಂಸ್ಕೃತಿಯ ಚೌಕಟ್ಟಿನಲ್ಲಿ ಸ್ವಂತ ಭೂಮಿಯ ಆಸೆಯನ್ನು ತೊರೆದೇ ಜೀವಿಸಬೇಕಾಗಿದ್ದ ಅಸ್ಪೃಶ್ಯರಿಗೆ ಇಲ್ಲಿ ಬಿಡುಗಡೆಯ ಒಂದು ಮಾರ್ಗ ಗೋಚರಿಸುತ್ತಿದೆ.

ಆದರೆ ಚೋಮನಂತಹವರಿಗೆ ಇದು ಬಿಡುಗಡೆ ಅಲ್ಲ. ಆದು ಮಾನಸಿಕ ಗೊಂದಲವಾಗಿದೆ ಏಕೆಂದರೆ, ಒಂದು ಕಡೆ ತನ್ನ ದೇವರನ್ನು ಬಿಡಲಾಗದು, ಇನ್ನೊಂದು ಕಡೆ ಮಿಶನರಿಗಳು ಕೊಡುವ ಜಮೀನನ್ನು ಬಿಡಲಾಗದು. ಆದರೂ ಕಾರಂತರು ಚೋಮನಿಗೆ ಬಿಡುಗಡೆಯ ಹಾದಿಯನ್ನು ಮಾತ್ರ ತೋರಿಸಿದ್ದಾರೆ. ಆದರೆ ಬಿಡುಗಡೆ ಮಾಡಿಸಿಲ್ಲ ಅಂದರೆ ಕಾರಂತರು ಮತಾಂತರ ವಿರೋಧಿಗಳೂ ಆಗಿದ್ದರು ಎಂದು ಊಹಿಸಬಹುದು.

ಚೋಮ ಬೇಸಾಯಗಾರನಾಗಬೇಕೆಂಬ ಕನಸನ್ನು ನನಸು ಮಾಡಿಕೊಳ್ಳದಿದ್ದರೂ ಚೋಮ ವ್ಯವಸ್ಥೆಯ ಜೊತೆಯಲ್ಲಿ ಮೌನವಾಗಿ ಹೋರಾಟ ಮಾಡುತ್ತಾನೆ. ಅವನು ಎಲ್ಲಿಯೂ ಘರ್ಷಣೆಗೆ ಇಳಿದಿರುವುದು ಕಾಣುವುದಿಲ್ಲ. ಆ ವ್ಯವಸ್ಥೆಯ ವಿರುದ್ಧ ಘರ್ಷಣೆ ಮಾಡುವ ಧೈರ್ಯ ಅವನಲ್ಲಿ ಇಲ್ಲ. ಘರ್ಷಣೆಯನ್ನು ಮಾಡುವ ಬದಲು ತನ್ನ ದೇಹದ ನೋವನ್ನು, ಮನಸ್ಸಿನ ನೋವನ್ನು ದುಡಿಯನ್ನು ಬಡಿಯುವುದರ ಮೂಲಕ ಹೊರಹಾಕುತ್ತಾನೆ. ಅದು ಎಷ್ಟು ಅಂದರೆ ಆ ದುಡಿಯು ಒಡೆದುಹೋಗುವಷ್ಟು.ಅಲ್ಲದೇ ಅವನ ಕುಟುಂಬದ ಸದಸ್ಯರಲ್ಲಿ ಯಾರೂ ಸಹಾ ಅವನಿಗೆ ಧೈರ್ಯ ಹೇಳಿ ಅವನ ಬಲಕ್ಕೆ ನಿಲ್ಲುತ್ತಿರಲಿಲ್ಲ. ಪ್ರತಿಸಾರಿಯೂ ಸಹ ಚೋಮ ಮನಸ್ಸು ಮಾಡಿದಾಗಲೂ ಬೆಳ್ಳಿಯು ಅದಕ್ಕೆ ವಿರುದ್ಧವಾಗಿಯೇ ಬರುತ್ತಿದ್ದಳು. ಚೋಮನಂತಹವರು ಘರ್ಷಣೆ ಮಾಡಿದಾಗ ಅದನ್ನು ತಡೆಯಲು ಸಂಕಪ್ಪಯ್ಯನಂತಹವರು ಪೂರಾ ತಯಾರಿ ಮಾಡಿಕೊಂಡಿರುತ್ತಾರೆ.

"ಆಧುನಿಕತೆಯ ಬಗ್ಗೆ ಚೋಮನಿಗೆ ಇರುವ ಎಲ್ಲ ಭಯ, ಆತಂಕಗಳನ್ನು ಸೂಕ್ಷ್ಮವಾಗಿ ದಾಖಲು ಮಾಡುತ್ತದೆ. ಇಲ್ಲಿ ಕಾರಂತರು ಪಂಜರ್ಲಿ ಭೂತವನ್ನು ತಂದಿರುವುದರಿಂದ ಚೋಮನ ಒಳ ಮನಸ್ಸನ್ನು, ಸುಪ್ತ ಪ್ರಜ್ಞೆಯನ್ನು ಬಗೆಯಲು ಸಾಧ್ಯವಾಗಿದೆ. ಪಂಜುರ್ಲಿ ಭೂತ ಚೋಮನ ಮನಸ್ಸಿನಲ್ಲಿರುವುದನ್ನೇ ಹೇಳುತ್ತಿದೆ.ಚೋಮನ ಹಲವು ದ್ವಂದ್ವಗಳು ಪಂಜುರ್ಲಿ ಗುಡಿಯಲ್ಲಿ ಒಂದು ಬಗೆಯ ಸ್ಪಷ್ಟತೆಯನ್ನು ಪಡೆಯುತ್ತವೆ. ಅಷ್ಟೇ ಅಲ್ಲದೆ ಆಧುನಿಕತೆಯ ಬಗ್ಗೆ ಈ ಸಂದರ್ಭದಲ್ಲಿ ಮತಾಂತರ ಮತ್ತು ಅದರ ಪರಿಣಾಮಗಳ ಬಗ್ಗೆ ಚೋಮನ ನಿಲುವು ಮಾತ್ರ ಗುರುವನ ನಿಲುವನ್ನು ಕಾದಂಬರಿ ಗಮನಿಸಿದೆ. ಇದೇ ರೀತಿ ಸಂಕಪ್ಪಯ್ಯ ಮತ್ತು ಅವನ ತಾಯಿಯ

ಧೋರಣೆಗಳಲ್ಲೂ ವ್ಯತ್ಯಾಸಗಳಿದ್ದೇ ಇವೆ. ಬೆಳ್ಳಿಯ ನಿಲುವುಗಳಲ್ಲೂ ದ್ವಂದ್ವಗಳಿವೆ.[8] " ಎಂದು ಅಶೋಕರ ಲೇಖನದಲ್ಲಿದೆ.

ಈ ಮೇಲಿನ ಅಶೋಕರ ಹೇಳಿಕೆಯನ್ನು ಗಮನಿಸಿದಾಗ ಇಲ್ಲಿ ನಾವು ಎರಡು ಅಂಶಗಳನ್ನು ಗಮನಿಸಬಹುದು. ಒಂದು ಆಧುನಿಕತೆಯೇ ಆದರೂ ಇನ್ನೊಂದು ಹಿಂದೂ ಧರ್ಮದಲ್ಲಿ ಇರುವ ಮೂಢನಂಬಿಕೆ ಹಾಗೂ ವ್ಯವಸ್ಥೆಯ ಶೋಷಣೆ. ಆಧುನಿಕತೆ ಎಂದರೆ ಇಲ್ಲಿ ಬರೀ ಮತಾಂತರ ಮಾತ್ರ. ಮಿಶನರಿಗಳ ಮುಖ್ಯ ಉದ್ದೇಶವೇ ಮತಾಂತರವಾಗಿತ್ತು, ಇದರ ಜೊತೆಗೆ ಹಿಂದೂ ಧರ್ಮದಲ್ಲಿ ಗಾಢವಾದ ಮೂಡನಂಬಿಕೆಗಳು ಸಹ ಬೇರೂರಿವೆ ಅವುಗಳಿಂದ ಅಷ್ಟು ಸುಲಭವಾಗಿ ಹೊರಬರುವುದು ಸಾಧ್ಯವಿಲ್ಲ, ಅದರಲ್ಲೂ ಚೋಮನಂತಹ ಸ್ವಾಭಿಮಾನಿಗಳಿಗೆ ಸಾಧ್ಯವೇ ಆಗದು, ಇಂತಹ ಸ್ವಾಭಿಮಾನಿಗಳು ಮತಾಂತರ ಆದರೂ ಅವರ ಮನಸ್ಸಿನಲ್ಲಿ ತಳಮಳ ಉಂಟಾಗಿ ಮಾನಸಿಕವಾಗಿ ಅಸ್ವಸ್ಥರಾಗುವ ಸಾಧ್ಯತೆಯೂ ಹೆಚ್ಚಿರುವುದು.

ಇದರ ಜೊತೆಗೆ ವ್ಯವಸ್ಥೆಯ ಶೋಷಣೆಯನ್ನು ಸಹ ಎದುರಿಸಬೇಕಾಗುತ್ತದೆ. ಇಲ್ಲಿ ಚೋಮ ಮತಾಂತರಗೊಂಡ ಮಿಷನರಿಯಿಂದ ಭೂಮಿಯನ್ನು ಪಡೆದಿದ್ದೇ ಆದರೆ ಚೋಮನ ಜೊತೆಯವರು ಅವನನ್ನು ಜಮೀನಿಗೋಸ್ಕರ ಜಾತಿಗೆಟ್ಟ ಎಂಬ ಮಾತುಗಳನ್ನು ಕೇಳಬೇಕಾಗಿತ್ತೋ ಏನೋ ಹಾಗೆಯೇ ಬ್ರಾಹ್ಮಣ ಜಮೀನುದಾರನಾದ ಸಂಕಪ್ಪಯ್ಯ ಮತ್ತು ಅವನ ತಾಯಿಯಿಂದ ಕೇಳಬಾರದಂತಹ ಮಾತುಗಳನ್ನು ಚೋಮನು ಕೇಳಬೇಕಾದೀತೋ ಏನೋ, ಇಂತಹ ಸಂದರ್ಭಗಳನ್ನು ಎದುರಿಸುವ ಶಕ್ತಿ ಇಲ್ಲದ ಚೋಮ ಈ ಮತಾಂತರದಿಂದ ಹಿಂದೆ ಸರಿದನು.

ಇಲ್ಲಿ ನಾವು ಗಮನಿಸಬೇಕಾದ ಒಂದು ಅಂಶವೆಂದರೆ ಕಾರಂತರು ಬ್ರಾಹ್ಮಣ ಜಾತಿಯಲ್ಲಿ ಜನಿಸದೇ ದಲಿತ ಜಾತಿಯಲ್ಲಿ ಜನಿಸಿದ್ದೇ ಆಗಿದ್ದರೆ ಚೋಮನನ್ನು ಕ್ರೈಸ್ತ ಮತಕ್ಕೆ ಮತಾಂತರಗೊಳಿಸಿ ಜಮೀನನ್ನು ದೊರಕಿಸಿಕೊಡುತ್ತಿದ್ದರು ಎಂದು ಊಹಿಸಿಕೊಳ್ಳಬಹುದು. ಒಬ್ಬ ಬ್ರಾಹ್ಮಣ ದಲಿತರ ಜೀವನ ಚಿತ್ರಿಸುವುದಕ್ಕೂ, ಒಬ್ಬ ದಲಿತ ದಲಿತರ ಜೀವನ ಚಿತ್ರಿಸುವುದಕ್ಕೂ ಅಜಗಜಾಂತರ ವ್ಯತ್ಯಾಸ ಗುರುತಿಸಬಹುದು.

ಇದು ಸತ್ಯಕ್ಕೆ ಹತ್ತಿರವಾಗಿದ್ದರೂ ಸಹ ಕಾರಂತರು ಒಬ್ಬ ದಲಿತನ ಜೀವನದ ಬಗ್ಗೆ ಚಿತ್ರಿಸುವುದು ಸಹಾ ಸಾಮಾನ್ಯದ ವಿಷಯವಲ್ಲ.

ಈ ಕಾದಂಬರಿಯಲ್ಲಿ ಮತಾಂತರದ ಸಮಸ್ಯೆ ಕುರಿತು ವಯೋಧರ್ಮ ಗಳ ಹಿನ್ನೆಲೆಯಲ್ಲಿ ನೋಡಬೇಕು. ಗುರುವನ ಮತಾಂತರಕ್ಕೆ ಮುಖ್ಯ ಕಾರಣ ಆತನ ಪ್ರೇಮ ಪ್ರಕರಣ. ಬೇಸಾಯಗಾರನಾಗುತ್ತೀನಿ ಎಂದು ಹೇಳುವುದು ಎರಡನೆಯ ವಿಷಯ, ಮೇರಿಯನ್ನು ಮದುವೆ ಮಾಡಿಕೊಳ್ಳಬೇಕಾಗಿರುವುದರಿಂದ ಅವಳನ್ನು ಪಡೆಯಲು ಮತಾಂತರ ಹೊಂದುತ್ತಾನೆ. ತನ್ನ ಪ್ರೇಮ ಸಮಸ್ಯೆಯನ್ನು ಮತಾಂತರ ಹೊಂದುವ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಚೋಮನ ಹೋರಾಟದ ಪ್ರಶ್ನೆ ಮತ್ತು ತಾಕಲಾಟಗಳು ಅವನಿಗಿರುವುದಿಲ್ಲ.ಇದನ್ನು ಸಹ ನಾವು ಆಧುನೀಕರಣ ಪ್ರಕ್ರಿಯೆಯಲ್ಲಿ ನೋಡಬಹುದು. ಇಲ್ಲಿ ಗುರುವನು ಪ್ರೇಮಕ್ಕೋಸ್ಕರವೊ ಅಥವಾ ಆಸ್ತಿಗೋಸ್ಕರವೊ ಒಟ್ಟಿನಲ್ಲಿ ಕ್ರೈಸ್ತ ಧರ್ಮದ ಮೇರಿಯನ್ನು ವಿವಾಹವಾಗುತ್ತಾನೆ. ಕಾರಂತರ ಗುರುವನ ಮೂಲಕ ಮಿಷನರಿಗಳ ಪ್ರಭಾವವೂ ಎಷ್ಟಿತ್ತು ಎಂಬುದನ್ನು ತಿಳಿಸಿದ್ದಾರೆ. ಇದು ಚೋಮನಿಗೆ ಏಕೆ ಸಾಧ್ಯವಾಗಲಿಲ್ಲ ಎಂಬುದು ಪ್ರಶ್ನೆಯಾಗಿದೆ. ಬೆಳ್ಳಿಗೂ ಸಹ ಒಮ್ಮೆ ಗುರುವನ ಹತ್ತಿರ ಹೋಗಿ ಮತಾಂತರ ಹೊಂದುವ ಆಸೆ ಹೊಂದುವಳು. ಆದರೆ, ಕೊನೆಗೆ ಅವಳ ಆಸೆ ಈಡೇರುವುದೇ ದೂರದ ಮಾತಾಗುವುದು.

"ವಸಾಹತುಶಾಹಿ ಆಳ್ವಿಕೆ ಕೆಲವು ಮೇಲ್ಪದರದ ಸುಧಾರಣೆಗಳನ್ನು ತಂದಿರಬಹುದು. ಕೆಲವೊಮ್ಮೆ ಸ್ಥಿರ ಸಮಾಜಗಳು ಚಲಿಸುವುದಕ್ಕೂ ಕಾರಣವಾಗಿರಬಹುದು. ಆದರೆ ಹಾಗೆಂದು ಸಾಮ್ರಾಜ್ಯಶಾಹಿ, ವಸಾಹತುಶಾಹಿ ಚಟುವಟಿಕೆಗಳನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಅಲ್ಲದೆ, ದೂರಗಾಮಿ ಸ್ವಾರ್ಥದ ಕಾರಣಗಳಿಲ್ಲದೆ ಯಾವುದೇ ವಿದೇಶಿ ಶಕ್ತಿ ಕೇವಲ ಕರುಣೆಯಿಂದ ಇತರ ಮನುಷ್ಯರ ಸಹಾಯಕ್ಕೆ ಧಾವಿಸುತ್ತವೆಂದು ತಿಳಿಯಲು ಯಾವ ಕಾರಣವೂ ಇಲ್ಲ. ಹಾಗಾಗಿ ಚೋಮನದುಡಿ ಕಾದಂಬರಿಯಲ್ಲಿ ಕಾಣುವಂತೆ ಆಧುನಿಕ ಮೌಲ್ಯಗಳು ಜಡಗೊಂಡ ಸಮಾಜವೊಂದನ್ನು ಆಘಾತಗೊಳಿಸಿದ ಪರಿ ಕುತೂಹಲಕಾರಿಯಾಗಿದೆ.[೫]".

ಈ ಮೇಲಿನ ಅಶೋಕರ ಮಾತುಗಳಲ್ಲಿ ನಿಜಾಂಶವನ್ನು ನೋಡಬಹುದು ಅಂದರೆ ವಸಾಹತುಶಾಹಿ ಆಡಳಿತ ನಮ್ಮ ಭಾರತವನ್ನು ಪ್ರವೇಶಿಸಿದಾಗ ಅವರು ಮೊದಲು ಮಾಡಿದ ಕೆಲಸವೆಂದರೆ ಶಿಕ್ಷಣ ವ್ಯವಸ್ಥೆ, ಶಿಕ್ಷಣವನ್ನು ಕೊಟ್ಟಾಗ ನಮ್ಮ ಕಡೆ ಒಲವು ತೋರಿಸಬಹುದು ಎಂಬ ಕಾರಣದಿಂದ, ಊಳಿಗಮಾನ್ಯ ಪದ್ಧತಿಯನ್ನು ರದ್ದುಗೊಳಿಸಿರಬಹುದು, ಅದರ ಜೊತೆಯಲ್ಲಿ ಅನಿಷ್ಟ ಪದ್ಧತಿಗಳಾದ ಬಾಲ್ಯವಿವಾಹ, ವಿಧವಾ ವಿವಾಹ, ಸತಿಪದ್ಧತಿ ಇವುಗಳನ್ನು ರದ್ದುಪಡಿಸಿದರು. ಇವುಗಳನ್ನು ರದ್ದು ಮಾಡಿದ ಉದ್ದೇಶವೇ ಬೇರೆಯಾಗಿತ್ತು, ಒಂದು ಅವರ ಆಡಳಿತ ಸ್ಥಾಪಿಸುವುದು, ಗುಲಾಮರಾಗಿ ಮಾಡುವುದು, ಜೊತೆಗೆ ಆಸ್ತಿಯ ಆಸೆ ತೋರಿಸಿ ಮತಾಂತರಗೊಳಿಸುವುದು. ಇದರಂತೆ ಚೋಮನಿಗೆ ಆಸ್ತಿಯನ್ನು ತೋರಿಸಿ ಮತಾಂತರಗೊಳಿಸಲು ಪ್ರಯತ್ನ ನಡೆಯಿತು. ಆದರೆ, ಅದು ವಿಫಲವಾಗಿ ಚೋಮ ಕ್ರೈಸ್ತರಿಂದ ದೂರ ಸರಿದನು.

ಕಾರಂತರ 'ಚೋಮನದುಡಿ, ಭಾರತದ ಸಮಾಜದ ಅಂದರೆ ಸ್ವಾತಂತ್ರ್ಯಪೂರ್ವದಲ್ಲಿದ್ದುದನ್ನು ಕಟ್ಟಿಕೊಡುತ್ತದೆ. ಅದು ನಮಗೆ ಇಂದು ಇತಿಹಾಸವಾಗಿರಬಹುದು. ಅಂದು ವಾಸ್ತವ ಅಂಶವಾಗಿದ್ದು, ಇಡೀ ಚೋಮನ ವರ್ಗದ ಜನದವರ ಇತಿಹಾಸವಾಗಿದೆ ಮತ್ತು ಆ ಜನರ ದುರಂತ ಕಥೆಯಾಗಿದೆ. ಅಂದು ಚೋಮನ ಸಮಸ್ಯೆ ಬಗೆಹರಿಯುವುದು ಬಹಳ ಕಷ್ಟ. ಅದು ವಸಾಹತುಶಾಹಿ ಆಡಳಿತದಿಂದ ಮಾತ್ರ ಸಾಧ್ಯ. ಇದು ಕಾರಂತರ ಆಶಯವಾಗಿರಲಿಲ್ಲ, ಚೋಮನ ಸಮಸ್ಯೆ ಬಗೆಹರಿಯಬೇಕು. ಅದು ವಸಾಹತುಶಾಹಿಯಿಂದ ಮಾತ್ರ ಅಲ್ಲ.

ಕಾರಂತರ ಚೋಮನದುಡಿ ಕಾದಂಬರಿ ಚೋಮನಂತಹ ಅನೇಕ ವ್ಯಕ್ತಿಗಳಿಗೆ ದಾರಿದೀಪವಾಗಬೇಕು.ಚೋಮನಂತೆ ಸ್ವಾಭಿಮಾನಿಗಳಾಗಬೇಕು. ಮಿಷನರಿಗಳಿಗೆ ಮಾರಿಹೋಗಬಾರದು. ಇದು ಕಾರಂತರ ಕಾದಂಬರಿಯ ಆಶಯ. ಈ ಸಮಸ್ಯೆ ನಮ್ಮ ರಾಷ್ಟ್ರೀಯ ಮಟ್ಟದಲ್ಲಿ ಬಗೆಹರಿಯಬೇಕು. ಆಗ ಮಾತ್ರ ಚೋಮನಿಗೆ, ಚೋಮನ ವರ್ಗದವರಿಗೆ ನ್ಯಾಯ ಸಿಗಲು ಸಾಧ್ಯ.

ವಸಾಹತುಶಾಹಿ ಎಂಬುದು ಭಾರತಕ್ಕೆ ಬಂದದ್ದು ಬ್ರಿಟಿಷರು ಭಾರತವನ್ನು ವಸಾಹತು ಕೇಂದ್ರ ಮಾಡಿಕೊಂಡಾಗ, ಆದ್ದರಿಂದ ವಸಾಹತುಶಾಹಿ

ಎಂಬುದು ಭಾಷೆ ಮತ್ತು ಧರ್ಮವನ್ನು ಪ್ರಸಾರ ಮಾಡುವ ಮೂಲಕ ನಮ್ಮನ್ನು ಶೋಷಣೆ ಮಾಡುವ ಪ್ರಯತ್ನ ಮಾಡಿದರು. ಮತಾಂತರ ಎಂಬುದು ಇಲ್ಲಿನ ವಸಾಹತುಶಾಹಿಯಾದರೆ, ಸಂಕಪ್ಪಯ್ಯ ಜಮೀನ್ದಾರಿ ಮತ್ತು ಯ ಜಮಾನ್ಯ ಸಂಸ್ಕೃತಿಯ ಪ್ರತೀಕವಾಗಿ ಕಂಡುಬರುತ್ತಾನೆ. ಚೋಮ ಇಂತಹ ವ್ಯವಸ್ಥೆಯನ್ನು ಏರುವ ಪ್ರಯತ್ನ ಮಾಡುತ್ತಾನೆ. ಅವನ ಕುಟುಂಬ ಒಂದು ಕಡೆ ಯಜಮಾನ್ಯ ಸಂಸ್ಕೃತಿಗೆ ಮತ್ತೊಂದು ಕಡೆ ವಸಾಹತುಶಾಹಿಯ ಸಂಸ್ಕೃತಿಯ ಹಿಡಿತಕ್ಕೆ ಒಳಗಾಗಿ ಒಂದು ಕಡೆ ಶೋಷಣೆಯನ್ನು ಇನ್ನೊಂದು ಕಡೆ ದ್ವಂದ್ವಕ್ಕೆ ಒಳಗಾಗಿದೆ.

ಈ ಲೇಖನ ಅಧ್ಯಯನದಿಂದ ಹೀಗೆ ಹೇಳಬಹುದು, ಚೋಮ ಸರ್ಕಾರಿ ಜಮೀನನ್ನು ಪಡೆದು ಭೂಮಿಯ ಒಡೆಯನಾಗಬಹುದಿತ್ತು. ಸಂಕಪ್ಪಯ್ಯ ಅಥವಾ ಕ್ರಿಶ್ಚಿಯನ್ನರಿಂದ ಭೂಮಿ ಗೇಣಿಗೆ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಏನೂ ಇರಲಿಲ್ಲ. ಆತನ ಮುಖ್ಯಧೋರಣೆ ತನ್ನ ಕುಟುಂಬದ ಇನ್ನೊಬ್ಬರ ಹಂಗಿನಲ್ಲಿ ಬದುಕಬಾರದು ಸ್ವತಂತ್ರವಾಗಿ ಜೀವನ ಸಾಗಿಸಬೇಕು ಎಂಬದು.ಚೋಮನ ಈ ಸ್ವಾತಂತ್ರವಾಗಿ ಜೀವನ ನಡೆಸಬೇಕೆಂಬ ನಿಲುವು ಸ್ವಾತಂತ್ರಪೂರ್ವದಲ್ಲಿ ಬಹಳ ಮಹತ್ವಪೂರ್ಣವಾದದ್ದು. ಈ ಧೋರಣೆಯಿಂದ ಅವನ ಕುಟುಂಬ ವಿಫಲವಾಗಿರಬಹುದು.ಆದರೆ ಅದು ವಿಫಲ ಅಲ್ಲ, ಏಕೆಂದರೆ ಇತಿಹಾಸದಲ್ಲಿ ಅನೇಕ ಜನರ ವಿಫಲವೇ ಮುಂದೆ ಸಫಲವಾಗಿದೆ. ಅಂದಿನ ಹೋರಾಟದ ದನಿಗಳಿಂದ ಇಂದು ಸ್ವತಂತ್ರ ಪಡೆದುಕೊಳ್ಳಲಾಗಿದೆ. ಹೋರಾಟ ನಡೆಸಿದ ತಕ್ಷಣ ಸ್ವತಂತ್ರ ಪಡೆಯಲಾಗದು. ಸ್ವಾತಂತ್ರ ಬಂದರೂ ಸಹ ಮುಂದೆ ಬರುವ ಜನಾಂಗವೂ ಸಂತೋಷವನ್ನು ಕಾಣುವುದು. ಅಂದು ಚೋಮ ಸೋಲು ಅನುಭವಿಸಿರಬಹುದು ಅದು ನಿಜವಾದ ಸೋಲಲ್ಲ. ಅದು ಗೆಲುವಿನ ಮೆಟ್ಟಿಲು ಇದ್ದ ಹಾಗೆ. ಅವನಲ್ಲಿದ್ದಂತಹ ಸ್ವಾತಂತ್ರ ಪಡೆಯುವ ಹಂಬಲ ಮತ್ತು ಹೋರಾಟ ಮಾಡುವ ಹಂಬಲ ವೈಯಕ್ತಿಕವಾಗಿ ಗಾಢವಾಗಿ ಅವನ್ನು ಅನುಭವದಿಂದ ಸಂಪಾದಿಸಿದ ಸತ್ಯದ ದಾರಿಗಳು.

ಸ್ವಾತಂತ್ರ್ಯ ಹೋರಾಟದ ಕಹಳೆ ಮೊಳಗುತ್ತಿದ್ದ ಕಾಲದಲ್ಲಿ ರಚನೆಯಾದ ಈ ಕೃತಿಯು ಚೋಮನಲ್ಲಿಯೂ ಸಹ ಸ್ವಾತಂತ್ರ್ಯದ ಆಸೆಯನ್ನು

ಮೂಡಿಸಿರಬಹುದು. ಈ ಆಸೆ ಆಸೆಯಾಗಿಯೇ ಉಳಿಯಿತು, ಚೋಮನ ಆಸೆ ಈಡೇರುವ ದಿಕ್ಕಿನಲ್ಲಿ ಸಾಗಲಿಲ್ಲ.

ಬೆಳ್ಳಿಯ ಮತಾಂತರದ ನಿರ್ಧಾರಗಳಲ್ಲಿ ಚೋಮನ ರೀತಿ ದ್ವಂದ್ವ ಇರಲಿಲ್ಲ, ಚೋಮನಿಗೆ ಈ ದ್ವಂದ್ವ ಹೆಚ್ಚು ಏಕೆಂದರೆ ಬೆಳ್ಳಿಯಲ್ಲಿದ್ದ ಪ್ರೇಮದ ಸಮಸ್ಯೆ ಚೋಮನಲ್ಲಿ ಇರಲಿಲ್ಲ ಅನಿಸುತ್ತದೆ.

“ಕಾರಂತರ ಸಾಮಾಜಿಕ ಸಮಸ್ಯೆಯೊಂದನ್ನು ಮಾತ್ರ ಇಲ್ಲಿ ವಿಶ್ಲೇಷಿಸುತ್ತಿಲ್ಲ. ವಸಾಹತುಶಾಹಿ ತಂತ್ರಗಾರಿಕೆ ತಮ್ಮ ಪ್ರತಿಭಟನೆಯನ್ನು ಸೂಚಿಸುತ್ತಿದ್ದಾರೆ. ‘ಚೋಮನದುಡಿ’ಕೇವಲ ಒಂದು ವಾಸ್ತವವಾದಿ ಕಾದಂಬರಿಯಾಗುವುದಿಲ್ಲ. ವಸಾಹತುಶಾಹಿ ವಿರೋಧಿ ಕಾದಂಬರಿಯೂ ಆಗುತ್ತದೆ.[೬] ”

ಅಶೋಕರು ಕಾರಂತರ ನಿಲುವುಗಳನ್ನು ಸರಿಯಾಗಿ ಅರ್ಥೈಸಿದ್ದಾರೆ ಅಂದರೆ ಕಾರಂತರು ಒಬ್ಬ ವಿದ್ಯಾವಂತ ಬರಹಗಾರರಾಗಿದ್ದರು ಅಲ್ಲದೇ ಆ ಕಾಲದಲ್ಲಿ ವಸಾಹತುಶಾಹಿ ಆಡಳಿತ ಪ್ರತಿಯೊಬ್ಬ ನಾಗರೀಕನ ಮೇಲೂ ಬೀರಿರಬಹುದು ಆದರೂ ಕಾರಂತರು ಅಂಥಹ ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡಿದ್ದರೇ ಬ್ರಾಹ್ಮಣ ಸಮಾಜದವರು ಕಾರಂತರನ್ನು ಸಮಾಜದಿಂದ ಬಹಿಷ್ಕಾರ ಮಾಡಬಹುದು ಎಂಬ ಭಯದಿಂದ ಕಾರಂತರು ಸಾಮಾಜಿಕ ಸಮಸ್ಯೆಯನ್ನು ಎತ್ತಿ ಹಿಡಿದಿಲ್ಲ.ಅದನ್ನು ವಸಾಹತುಶಾಹಿ ಆಡಳಿತದ ಮಧ್ಯೆ ಮಧ್ಯೆಯಲ್ಲಿ ಹೇಳಿದ್ದಾರೆ. ಹಾಗೆಯೇ ಆ ಕಾದಂಬರಿಯನ್ನು ನೋಡಿದಾಗ ಸಾಮಾಜಿಕ ಸಮಸ್ಯೆಯನ್ನು ಎತ್ತಿ ಹಿಡಿದಿದ್ದಾರೆ ಎನಿಸುತ್ತದೆ, ಚೋಮನ ಬಗ್ಗೆ ಬರೆದಿರುವುದೇ ಒಂದು ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ.ಚೋಮನಿಗೆ ಭೂಮಿಯನ್ನು ದೊರಕಿಸಿಕೊಟ್ಟಿದ್ದರೆ ಅಲ್ಲಿ ಸಮಸ್ಯೆಯೇ ಉದ್ಭವ ಆಗುತ್ತಿರಲಿಲ್ಲ. ಚೋಮನಿಗೆ ಭೂಮಿಯನ್ನು ದೊರಕಿಸದೇ ಇರುವುದನ್ನು ನೋಡಿದಾಗ ಕಾರಂತರು ಒಂದು ಸಮಸ್ಯೆಯನ್ನು ಹುಟ್ಟು ಹಾಕುವ ಪ್ರಯತ್ನ ಮಾಡಿದ್ದಾರೆ. ಆ ಸಮಸ್ಯೆಗೆ ಪರಿಹಾರ ಸೂಚಿಸಿಲ್ಲದಿದ್ದರೂ ಪರಿಹಾರ ಮಾರ್ಗ ಸೂಚನೆ ಕಾಣಬಹುದು.

ಈ ಮೇಲಿನ ಅಶೋಕರ ಹೇಳಿಕೆಯಿಂದ ‘ಚೋಮನ ದುಡಿ’ಕಾದಂಬರಿ ಒಂದು ವಾಸ್ತವವಾದೀ ಕಾದಂಬರಿಯಾಗುವುದಿಲ್ಲ ಎಂಬುದನ್ನು ನೋಡಿದಾಗ ಈ

ಕಾದಂಬರಿಯನ್ನು ಒಬ್ಬ ದಲಿತ ಕವಿ ರಚನೆ ಮಾಡಿದ್ದರೇ ವಾಸ್ತವವಾದೀ ಕಾದಂಬರಿ ಆಗುತ್ತಿತ್ತೇ ಆದರೆ ಕಾರಂತರು ಬ್ರಾಹ್ಮಣರು ಆದ್ದರಿಂದ ವಾಸ್ತವವಾದಿ ಕಾದಂಬರಿ ಅಲ್ಲ ಎಂದು ಹೇಳಿರಬಹುದೇ ಎಂಬ ಪ್ರಶ್ನೆಯು ಮೂಡುವುದು.

ವಾಸ್ತವ ಅಂದರೆ ಸತ್ಯ ಹಾಗೂ ಸತ್ಯಕ್ಕೆ ಹತ್ತಿರವಾದ ಅಂಶಗಳು ಎಂದರ್ಥ. ಹಾಗೆಯೇ ಚೋಮನದುಡಿ ಕಾದಂಬರಿಯಲ್ಲಿ ಪ್ರಾರಂಭದಿಂದ ಕೊನೆಯವರೆಗೂ ಸಹ ವಾಸ್ತವವಾಗಿ ಕಾಣುವುದು.ಕಾದಂಬರಿಯಲ್ಲಿ ಅವಾಸ್ತವ ಅಂಶ ಇದ್ದಿದ್ದರೇ ಅಷ್ಟು ಜನಪ್ರಿಯವೇ ಆಗುತ್ತಿರಲಿಲ್ಲ. ನಾವು ಇಲ್ಲಿ ಎರಡು ಸಮಸ್ಯೆಗಳನ್ನು ಗುರುತಿಸಬಹುದು ಒಂದು ಸಾಮಾಜಿಕ ಸಮಸ್ಯೆಯಾದರೆ ಮತ್ತೊಂದು ವಸಾಹತು ಸಮಸ್ಯೆಯಾಗಿತ್ತು. ಅಂದು ತಾಂಡವ ಆಡುತ್ತಿದ್ದ ಸಾಮಾಜಿಕ ಸಮಸ್ಯೆಗಳಾದ ವರ್ಗ ವ್ಯವಸ್ಥೆ, ವರ್ಣ ವ್ಯವಸ್ಥೆ, ಅಸ್ಪೃಶ್ಯತೆ, ಜಮೀನ್ದಾರಿ ಪದ್ಧತಿ–ಇವುಗಳ ಮಧ್ಯೆ ಬಿರುಗಾಳಿಯಂತೆ ಬಂದ ವಸಾಹತು ಸಮಸ್ಯೆ ಎಂದರೆ ಮತಾಂತರ, ಗುಲಾಮಗಿರಿ, ದೌರ್ಜನ್ಯ ಇವುಗಳು ಚೋಮನಂತಹವರಿಗೆ ಕಬ್ಬಿಣದ ಕಡಲೆಯಂತೆ ಆಯಿತು, ಮೊದಲೇ ವರ್ಗವ್ಯವಸ್ಥೆ ಜಮೀನ್ದಾರಿಯಲ್ಲಿ ಮುಳುಗಿಹೋಗಿದ್ದದ್ದಾನೆ. ಅದರ ಜೊತೆಗೆ ಮತಾಂತರದ ಚಕ್ರಕ್ಕೆ ಸಿಕ್ಕಿ ಮಾನಸಿಕವಾಗಿ ನೋವು ಅನುಭವಿಸಿದನು.

ಕಾರಂತರು ವಸಾಹತುವನ್ನು ಪ್ರತಿಭಟನೆ ಮಾಡಲು ಪ್ರಬಲವಾದ ಕಾರಣ ಅಂದರೆ ಮತಾಂತರ. ಆಸ್ತಿಯ ಆಸೆಯನ್ನು ತೋರಿಸಿ ಅಮಾಯಕ ಜನರನ್ನು ಮತಾಂತರಗೊಳಿಸಿದರು, ಆಗ ಕಾರಂತರಿಗೆ ಹಿಂದೂ ಧರ್ಮದ ಮೇಲೆ ಇದ್ದ ಅಪಾರ ಪ್ರೀತಿ, ಭಕ್ತಿಯಿಂದ ವಸಾಹತುಶಾಹಿಯನ್ನು ಪ್ರಬಲವಾಗಿ ವಿರೋಧ ವ್ಯಕ್ತ ಪಡಿಸಿದರು. ಅದು ಚೋಮನ ಮೂಲಕ ವಿರೋಧಿಸಿದರು. ಇದು ಧರ್ಮ ವಿರೋಧ ಎಂದು ಭಾವಿಸುವಂತಿಲ್ಲ, ಒಬ್ಬ ಹಿಂದುತ್ವ ಇದ್ದ ವ್ಯಕ್ತಿಯಿಂದ ಬರುವ ಸಹಜ ಪ್ರತಿಕ್ರಿಯೆ.

ಚೋಮನ ಮಗನಾದ ಗುರುವನು ತಾನು ಪ್ರೀತಿ ಮಾಡಿದ ಹುಡುಗಿಯನ್ನು ಪಡೆಯುವ ಸಲುವಾಗಿ ಮತಾಂತರವನ್ನು ಸಾಧನವನ್ನಾಗಿ ಬಳಸಿಕೊಳ್ಳುತ್ತಾನೆ. ಒಬ್ಬ ಸಾಮಾನ್ಯ ಮನುಷ್ಯ ಪ್ರೀತಿಗೋಸ್ಕರ ಏನು ಬೇಕಾದರೂ ಮಾಡುವ ಸಾಧ್ಯತೆ ಇದೆ. ಅಂತಹುದರಲ್ಲಿ ಗುರುವನನ್ನು ಮತಾಂತರ ಮಾಡಿಸಿರುವುದು ಅಷ್ಟು ದೊಡ್ಡ ವಿಷಯವಲ್ಲ ಎನಿಸುತ್ತದೆ. ಹಾಗೆಯೇ ಗಂಡು ಹೆಣ್ಣಿಗೋಸ್ಕರ ಏನು

ಬೇಕಾದರೂ ಮಾಡಲು ಸಿದ್ಧನಿರುತ್ತಾನೆ. ಒಂದು ದೃಷ್ಟಿಯಿಂದ ಗಮನಿಸುವುದಾದರೆ ಗುರುವನೇ ಸುಖಜೀವಿ, ಏಕೆಂದರೆ ತಾನು ಇಷ್ಟಪಟ್ಟ ಹುಡುಗಿ ಸಿಕ್ಕಿದಳು, ಅವಳ ಜೊತೆಗೆಯೇ ಭೂಮಿಯು ಸಹ ದೊರಕಿತು. ಅವನು ನೋಡಲು ಜನರಿಗೆ ದೂರವಾಗಬಹುದು. ಅವನ ಮನಸ್ಸಿಗೆ, ದೇಹಕ್ಕೆ ಸಂತೋಷ ಇದೆ, ಆದರೆ ಚೋಮ ಇದನ್ನು ಪಡೆಯುವಲ್ಲಿ ವಿಫಲನಾಗುತ್ತಾನೆ.

ಇದೇ ರೀತಿ ಬೆಳ್ಳಿ ಸಹ ಮತಾಂತರ ಹೊಂದಲು ನೋಡುತ್ತಾಳೆ, ಆದರೆ ಅದು ಚೋಮನಿಗೆ ಹಿಡಿಸುವುದಿಲ್ಲ, ಪ್ರೇಮ ಎಂಬುದು ಯುವಕ, ಯುವತಿಯರಲ್ಲಿ ಕ್ರಾಂತಿಯ ಮನೋಭಾವವನ್ನು ಮೂಡಿಸುವುದು. ಅಣ್ಣನಾದ ಗುರುವನು ಮೇರಿಯನ್ನು ಮದುವೆ ಆಗಬಹುದು. ಆದರೆ ನಾನು ಯಾಕೆ ಆಗಬಾರದು ಎಂಬ ಆಲೋಚನೆ ಬೆಳ್ಳಿಯಲ್ಲಿ ಕೆರಳುವುದು. ಆದರೆ ಆಲೋಚನೆ ಆಲೋಚನೆಯಾಗಿಯೇ ಉಳಿಯುವುದು ಬೆಳ್ಳಿಯ ದುರ್ದೈವ ಸಂಗತಿ.

ಪ್ರೇಮಕ್ಕೋಸ್ಕರ ಗಂಡು-ಹೆಣ್ಣು ಪ್ರಾಣ ಕೊಡಲು ಸಹ ಸಿದ್ಧರಿರುವರು. ಅಂತಹುದರಲ್ಲಿ ಗುರುವ ಮತಾಂತರ ಹೊಂದಿದ್ದು ಬೆಳ್ಳಿ ಮತಾಂತರ ಆಲೋಚನೆ ಮಾಡಿದ್ದು ಅಸಾಮಾನ್ಯ ಸಂಗತಿಯೇನಲ್ಲ, ಆದರೆ ಆ ವ್ಯವಸ್ಥೆಯಲ್ಲಿ ಅದು ಅಸಾಮಾನ್ಯವಾದ ವಿಷಯವೇ ಆಗುವುದು.

ಚೋಮನದುಡಿ ಕಾದಂಬರಿಯು ಭಾರತದಿಂದ ಬ್ರಿಟಿಷರನ್ನು ಹೊರಹಾಕಬೇಕು ಎನ್ನುವ ಕಾಲದಲ್ಲಿ ರಚನೆಯಾಗಿದೆ, ಅಂತೆಯೇ ಬ್ರಿಟಿಷರನ್ನು ಹೊರಹಾಕಲಾಯಿತು. ಬ್ರಿಟಿಷರು ಇದ್ದಿದ್ದರೇ ಕೆಲವು ವಿಷಯಗಳಿಗೆ ಉಪಯೋಗ ಆಗುತ್ತಿತ್ತು, ಅಂದರೆ ಒಳ್ಳೆಯ ವಿದ್ಯಾಭ್ಯಾಸದ ಜೊತೆಗೆ ಸುಧಾರಣೆಗಳನ್ನು ಮಾಡುತ್ತಿದ್ದರು, ಅವರುಹೋದ ಮೇಲೆ ಸಾಮಾಜಿಕ ಸಮಸ್ಯೆಗಳು ಇನ್ನೂ ಹೆಚ್ಚಾದವೇ ಹೊರತು ಕಡಿಮೆಯಾಗಲಿಲ್ಲ.

ಈ ಕಾದಂಬರಿ ಸಮಸ್ಯೆಯು ಅಡಗಿರುವುದು ಭೂಮಿಯ ಅಸಮರ್ಪಕ ಹಂಚಿಕೆಯಿಂದ ಅಂದರೆ ಸಂಕಪ್ಪಯ್ಯನಂತಹವರು ಹೆಚ್ಚು ಜಮೀನನ್ನು ಹೊಂದಿದ್ದರೇ ಚೋಮನಂತಹವರು ಭೂಮಿಯನ್ನು ಹೊಂದಿರಲಿಲ್ಲ, ಇದರಿಂದ ಪ್ರಬಲ ಮತ್ತು ದುರ್ಬಲ ವರ್ಗಗಳನ್ನು ನೋಡಬಹುದು.

ಆ ಕಾದಂಬರಿಯಲ್ಲಿ ಮೂರು ವರ್ಗದ ಜನರನ್ನು ನೋಡಬಹುದು.ಮೊದಲನೇ ವರ್ಗ ಸಂಕಪ್ಪಯ್ಯ, ಇವನಿಗೆ ಚೋಮನಿಗೆ ಉಳುಮೆ ಮಾಡಲು ಭೂಮಿಯನ್ನು ಕೊಡಬೇಕು ಎಂಬ ಮನಸ್ಸು ಇದ್ದರೂ ಸಹ ಅವರ ತಾಯಿ ಬಿಡುವುದಿಲ್ಲ, ನಂತರ ಎರಡನೆಯ ವರ್ಗದಲ್ಲಿ ಚೋಮನ ಕುಟುಂಬ ನೋಡಬಹುದು. ನಂತರ ಮೂರನೆಯ ವರ್ಗ ಕ್ರಿಶ್ಚಿಯನ್ ಲೋಕ. ಇದು ಬದಲಾವಣೆಯ ದಾರಿಯನ್ನು ತೋರಿಸುತ್ತದೆ. ಆದರೆ ಚೋಮನಂತಹ ಸಂಪ್ರದಾಯವಾದಿಗಳಿಗೆ ಸಾಧ್ಯವಾಗುವುದಿಲ್ಲ. ಈ ಮೂರು ವರ್ಷಗಳ ನಡುವೆಯೂ ಸಹ ಸಂಘರ್ಷ ನಡೆಯುವುದು. ಈ ಸಂಘರ್ಷವನ್ನು ಸಮರ್ಪಕವಾಗಿ ಕಾರಂತರು ಮಾಡಲಿಲ್ಲ ಎಂಬುದೇ ಅಪವಾದವಾಯಿತು. ಸಂಘರ್ಷ ಮಾಡುವುದಕ್ಕಿಂತ ಸಂಘರ್ಷಣ ಮನೋಭಾವವನ್ನು ಬೆಳೆಸುವುದೇ ಕಾರಂತರ ವಿಶಿಷ್ಟ ಗುಣ.

ಚೋಮನ ದುಡಿ ಕಾದಂಬರಿಯಲ್ಲಿ ಕಾರಂತರು ಚೋಮನ ಕುಟುಂಬವನ್ನು ಆಧುನಿಕತೆಯ ಕಡೆಗೆ ತೆಗೆದುಕೊಂಡು ಹೋಗಲು ಹೊರಟಿದ್ದಾರೆ.ಆದರೂ ಸಹಾ ಇಲ್ಲಿ ದ್ವಂದ್ವವನ್ನು ಕಾಣಬಹುದು. ಆಂದರೆ, ಚೋಮನ ಮಗನನ್ನು ಆಧುನಿಕತೆಗೆ ತಳ್ಳಿ ಚೋಮನನ್ನು ಆಧುನೀಕತೆಯಿಂದ ದೂರ ಉಳಿಸಿದ್ದಾರೆ. ಕಾರಂತರ ಮನೋಭಾವವನ್ನು ಅರಿಯುವುದೇ ಸುಲಭದ ವಿಷಯವಲ್ಲ. ಇಲ್ಲಿ ಚೋಮನ ಕುಟುಂಬವನ್ನು ನೋಡಬಹುದು. ಆದರೆ, ಇಂತಹ ಹಲವಾರು ಕುಟುಂಬಗಳನ್ನು ಇಂತಹ ದ್ವಂದ್ವವನ್ನು ಹೊಂದಿವೆ ಎಂದು ತಿಳಿಯಬಹುದು. ಈ ಕಾದಂಬರಿಯಲ್ಲಿ ಕಾರಂತರ ಶೋಷಣೆಯನ್ನು ವಸ್ತುವಾಗಿ ಹೊಂದಿದ್ದರೂ ಸಹಾ ಆಧುನೀಕರಣವೂ ಅದರ ಒಂದು ಭಾಗವಾಗಿದೆ.

ಚೋಮನದುಡಿ ಕಾದಂಬರಿ ಬರೆಯುವ ಮೊದಲೇ ಆಧುನೀಕರಣ ಪ್ರಕ್ರಿಯೆ ಆರಂಭವಾಗಿರುವುದು ಗೊತ್ತಿರುವ ವಿಚಾರವೇ ಆದರೆ ಪರಂಪರೆಯಿಂದ ತೊಳಲುತ್ತಿದ್ದ ಸಮಾಜವು ಆಧುನೀಕತೆಗೆ ಬೇಗ ಬಲಿಯಾಯಿತು. ಒಂದು ಕಾಲ ಹೋಗಿ ಅದರ ಹಿಂದೆಯೇ ಇನ್ನೊಂದು ಕಾಲ ಹಿಂದೆಯೇ. ಜನರು ಹೊಸದನ್ನು ಬೇಗ ಬರಮಾಡಿಕೊಳ್ಳುತ್ತಾರೆ. ಮನುಷ್ಯನು ಯಾವಾಗಲೂ ಹೊಸದರ ಕಡೆ ಸಾಗಲು ಯೋಚನೆ ಮಾಡುತ್ತಿರುತ್ತಾನೆ. ಆ ಸಮಯದಲ್ಲಿ ಹೊಸದಾರಿ ಕಂಡರೇ ಅದನ್ನು ಬೇಗ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ. ಹಾಗೆಯೇ ಆಧುನೀಕರಣಗೊಂಡ

ಜನರನ್ನು ಅತಿ ಬೇಗ ಆಕರ್ಷಣೆ ಮಾಡಿತು. ಅದೇ ರೀತಿ ಕಾರಂತರ ಚೋಮನದುಡಿಯ ಚೋಮನ ಕುಟುಂಬದಲ್ಲಿ ಆಧುನೀಕರಣ ನಿಧಾನಗತಿಯಲ್ಲಿ ಆಕ್ರಮಿಸುವುದು. ಮೊದಲು ಚೋಮನ ಮಗ ಗುರುವನು ಬಲಿಯಾಗುವನು. ಆ ನಂತರದಲ್ಲಿ ಚೋಮನು ಬಲಿಯಾಗುವ ಹಂತಕ್ಕೆ ಹೋಗಿ ಕಾರಂತರು ಹಿಂದಕ್ಕೆ ಎಳೆದಿದ್ದಾರೆ. ಅಂದರೆ ಚೋಮನ ಮನೆದೇವರಾದ ಪಂಜುರ್ಲಿ ಭೂತವು ಚೋಮನನ್ನು ಹೋಗದಂತೆ ತಡೆಯುತ್ತದೆ.

ಬ್ರಿಟಿಷರು ಭಾರತಕ್ಕೆ ಮೊದಲು ಬಂದಿದ್ದು ಸಮುದ್ರದ ಮೂಲಕ ಅಂದರೆ ಕರಾವಳಿಯ ಮೂಲಕ, ಅದರಂತೆ ಕಾರಂತರ ದಕ್ಷಿಣ ಕನ್ನಡದ ಮೂಲಕ ಬಂದರು. ಆದ್ದರಿಂದ ಮೊದಲು ಆಧುನಿಕ ಪ್ರಕ್ರಿಯೆಗೆ ಒಳಗಾದ ಪ್ರದೇಶವೇ ಕಾರಂತರ ಹುಟ್ಟುಸ್ಥಳ, ಆದ್ದರಿಂದ ಕಾರಂತರ ಕಾದಂಬರಿಗಳಲ್ಲಿ ಅದನ್ನು ಹೆಚ್ಚಾಗಿ ನೋಡಬಹುದು.

ಸಾಮಾನ್ಯವಾಗಿ ಕಾರಂತರ ಕಾದಂಬರಿಗಳಲ್ಲಿ ಶೋಷಣೆಯನ್ನು ಮಾಡುತ್ತಿರುವ ಸಮಾಜ ಆಧುನಿಕ ಪ್ರಕ್ರಿಯೆಗೆ ಅಂದರೆ ಮತಾಂತರಕ್ಕೆ ಒಳಗಾಗುವುದಿಲ್ಲ. ಶೋಷಣೆಗೆ ಒಳಗಾಗಿರುವ ಸಮಾಜವೂ ಬೇಗ ಮತಾಂತರ ಹೊಂದುತ್ತಿದೆ. ಏಕೆಂದರೆ, ಆ ಶೋಷಣೆ,ದಬ್ಬಾಳಿಕೆಯನ್ನು ತಡೆಯಲಾರದೇ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುತ್ತಿರುವುದನ್ನು ಕಾಣಬಹುದು.

ಈ ಕಾದಂಬರಿಯಲ್ಲಿ ಚೋಮ ಸ್ಥಾಪಿತ ಮೌಲ್ಯ ಮತ್ತು ಜಾತಿಯ ಗಡಿಯನ್ನು ದಾಟಬೇಕೆನ್ನುವ ಕಾತರ ತೋರುತ್ತಾನೆ. ಜಾತಿ ಇರುವುದರಿಂದಲೇ ತನಗೆ ಈ ರೀತಿ ಕಷ್ಟಗಳು ಆಗುತ್ತವೆ ಎಂದು ತಿಳಿದುಕೊಂಡು ಅವುಗಳನ್ನು ಮೀರಿ ನಿಲ್ಲಬೇಕು ಎಂದು ಹೋರಾಡುತ್ತಾನೆ. ಇದನ್ನು ನೋಡಿದಾಗ ನಮಗೆ ಇಲ್ಲಿ ಒಂದು ಘರ್ಷಣೆಯ ಧ್ವನಿ ಕೆಲಸ ಮಾಡಿರುವುದನ್ನು ನೋಡಬಹುದು. ಆದರೆ, ಎಲೆಮರೆ ಕಾಯಿಯ ಹಾಗೆ ಹಿಂದೆಯೇ ಉಳಿದುಕೊಂಡಿದೆ. ಭೂಮಿಯ ಸಮಸ್ಯೆ ಅಂದು ಬಹಳ ಭೀಕರವಾಗಿತ್ತು. ಆದರೆ ಇಂದು ಕಡಿಮೆಯಾಗಿದೆ. ದೇವರಾಜ ಅರಸು ಅವರು 'ಉಳುವವನೇ ಭೂಮಿಯ ಒಡೆಯ' ಎಂಬ ನಿಯಮದ ನಂತರ ಸಮಾಜದಲ್ಲಿ ಚೋಮನಂತಹವರಿಗೆ ಭೂಮಿಯು ದೊರಕಿತು.

ಚೋಮ ತನ್ನ ಜಾತಿಯನ್ನು ಬಿಟ್ಟು ಬೇರೆ ಅಂದರೆ ಕ್ರಿಶ್ಚಿಯನ್ ಜಾತಿಗೆ ಹೋಗಲು ಪ್ರಯತ್ನಿಸುತ್ತಾನೆ. ಹಾಗೆ ಹೋಗಲು ತನ್ನ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಅಳವಡಿಸಿಕೊಳ್ಳಬೇಕು. ಹನ್ನೆರಡನೆಯ ಶತಮಾನದ ವಚನಕಾರರು ಏನೇ ಸಮಾನತೆ ತಂದರೂ ವೃತ್ತಿಯನ್ನು ಒಡೆದು ಬೇರೆ ಜಾತಿಗೆ ಹೋಗಲು ಅವರಿಂದಲೂ ಸಾಧ್ಯವಾಗಲಿಲ್ಲ. ಧರ್ಮದ ವಿಷಯದಲ್ಲಿ ಎಲ್ಲರೂ ಒಟ್ಟಿಗೆ ಆದರೂ ಸಾಮಾಜಿಕವಾಗಿ ಸಮಾನತೆ ತರಲು ಅವರಿಂದಲೂ ಸಾಧ್ಯವಾಗಲಿಲ್ಲ. ಈ ದೃಷ್ಟಿಕೋನದಲ್ಲಿ ಕಾದಂಬರಿಯಲ್ಲಿ ಬರುವ ಚೋಮ ಬಯಸುವ ಆಸೆಗಳನ್ನು ಇವತ್ತು ನಾವು ಬಯಸಬೇಕಾಗಿಲ್ಲ. ಏಕೆಂದರೆ ಇಂದು ಸಂಪೂರ್ಣ ಬದಲಾವಣೆ ಹೊಂದಿದೆ. ಜೀತದಾಳಾಗಿ ಬೇರೆಯವರ ಜಮೀನಿನಲ್ಲಿ ಕೆಲಸ ಮಾಡುವ ಅಗತ್ಯವಿಲ್ಲ. ಆದರೆ, ಚೋಮನು ಬಯಸುವ ಆಸೆಗಳು ಒಂದೂ ಈಡೇರುವುದಿಲ್ಲ. ಆಗ ಅವನು ಮಾನಸಿಕ ಅಸ್ವಸ್ಥನ ರೀತಿ ಆಗಿ ಕುಡಿಯಲು ಆರಂಭಿಸಿರಬಹುದು ಹಾಗೂ ತನ್ನ ಮನಸ್ಸಿನ ದುಃಖಗಳನ್ನು ದುಡಿ ಬಡಿಯುವುದರ ಮೂಲಕ ಹೊರಹಾಕಿರಬಹುದು. ದುಡಿ ಅಂದರೆ ಚೋಮ, ಚೋಮ ಅಂದರೆ ದುಡಿ ಅನ್ನುವಷ್ಟರ ಮಟ್ಟಿಗೆ ದುಡಿಯನ್ನು ಚೋಮನು ಜೊತೆಯಾಗಿಸಿದ್ದನು. ಚೋಮನ ದುಃಖವನ್ನು ದುಡಿಯಲ್ಲಿ ಹೊರಹಾಕಿದ್ದಾನೆ. ದುಡಿಯನ್ನು ಜೋರಾಗಿ ಬಡಿದರೇ ಹೆಚ್ಚು ದುಃಖ ಆಗಿದೆ ಎಂದು ತಿಳಿಯಬೇಕಿತ್ತು. ಚೋಮ, ಕುಡಿತ, ದುಡಿ ಇವು ಮೂರು ಒಟ್ಟಿಗೆ ಸೇರಿದರೆ ಅಲ್ಲಿ ರೋಮಾಂಚನ ಚಿತ್ರವನ್ನು ನೋಡಬಹುದು. ಅಂತಿಮವಾಗಿ ದುಡಿಯ ಶಬ್ದ ನಿಂತಾಗಲೇ ಚೋಮನ ಜೀವನ ಶಬ್ದವೂ ನಿಲ್ಲುವುದು. ಅಷ್ಟು ಅನ್ಯೋನ್ಯ ಸಂಬಂಧ.

ಇಲ್ಲಿ ಚೋಮನ ಮೌಢ್ಯವನ್ನು ಮುಖ್ಯವಾಗಿ ನೋಡಬಹುದು. ಚೋಮ ತನ್ನ ಸ್ವತಂತ್ರ ಜೀವನದ ಬಗ್ಗೆ ಹೇಳುತ್ತಾನೆಯೇ ಹೊರತು ಆದ ಹಾಗೆ ಆಗುವುದಿಲ್ಲ. ಕುಡಿಯುವುದನ್ನು ನಿಲ್ಲಿಸಿದರೆ ತಾನು ಆರ್ಥಿಕವಾಗಿ ಪ್ರಬಲವಾಗುತ್ತೀನಿ ಎಂದು ಹೇಳುತ್ತಾನಾದರೂ ಕುಡಿಯುವುದನ್ನು ಮಾತ್ರ ಬಿಡುವುದಿಲ್ಲ. ಆದರೆ ಕುಡಿಯುವುದು ಏಕೆಂದರೆ ತನ್ನ ನೋವುಗಳನ್ನು ಮರೆಯುವುದಕ್ಕೆ ಕಥೆ ಕಟ್ಟುವನು. ಕುಡಿದಾಗ ನೋವುಗಳು ಹೆಚ್ಚು ಆಗುತ್ತವೇ ಹೊರತು ಕಡಿಮೆ ಆಗುವುದಿಲ್ಲ. ಚೋಮ ಕುಡಿಯದೇ

ಬರೀ ಕೆಲಸ ಮಾಡಿ ಹಣವನ್ನು ಸಂಗ್ರಹಿಸಿದ್ದರೇ ಅಭಿವೃದ್ಧಿ ಹೊಂದಬಹುದಿತ್ತು. ಬೆಳ್ಳಿಯನ್ನು ಮದುವೆಯನ್ನು ಮಾಡಬಹುದಿತ್ತು. ಆದರೂ ಸಹಾ ಚೋಮನು ಕುಡಿಯುವುದನ್ನು ಬಿಡದೇ ದುಡಿಯನ್ನು ಬಾರಿಸಿಕೊಂಡು ದುಃಖವನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದನು.

ಮನುಷ್ಯ ದುಃಖ ಬಂದರೂ ಕುಡಿಯುವುದು. ಸಂತೋಷ ಬಂದರೂ ಕುಡಿಯುವುದೇ ಈ ಕುಡಿತದಿಂದ ಎಷ್ಟೋ ಕುಟುಂಬಗಳು ಬೀದಿಗೆ ಬಂದಿವೆ. ಎಷ್ಟೋ ಕುಟುಂಬಗಳು ಅನಾಥವಾಗಿವೆ. ಇದು ನಮ್ಮ ದೇಶದ ಒಂದು ಪ್ರಮುಖ ಸಾಮಾಜಿಕ ಪಿಡುಗಾಗಿದೆ. ಅದನ್ನು ಸಮಾಜದಿಂದ ಕಿತ್ತೊಗೆಯುವ ಕಾರ್ಯ ನಡೆಯಬೇಕು.

ಈ ಕಾದಂಬರಿಯು ಮುಖ್ಯವಾಗಿ ದಲಿತನ ಬದುಕಿನ ಬಗ್ಗೆ ಚಿತ್ರಣ ನೀಡುತ್ತದೆ. ಇಡೀ ಕಥೆ ದಲಿತ ಕುಟುಂಬದ ಕಥೆ ಆಗಿರುವುದರಿಂದ ಮನ್ವೇಲ, ಸಂಕಪ್ಪಯ್ಯ ಅವರ ವೈಯಕ್ತಿಕ ಜೀವನದ ವಿವರಗಳಿಗೆ ಕಾರಂತರು ಹೋಗುವುದಿಲ್ಲ. ಆದ್ದರಿಂದ ಕಾದಂಬರಿಯ ಒಳನೋಟ ಬಹಳ ಚೆನ್ನಾಗಿ ಮೂಡಿ ಬಂದಿದೆ. ಈ ಕಾದಂಬರಿಯಲ್ಲಿ ಮೂಡಿ ಬಂದಿರುವ ದಲಿತ ಸಂವೇದನೆ ದಲಿತೇತರ ಲೇಖನಗಳಲ್ಲಿ ಆಶ್ಚರ್ಯಕರ ರೀತಿಯಲ್ಲಿ ಮೂಡಿ ಬಂದಿದೆ. ಕುವೆಂಪುರವರ ಕಾದಂಬರಿಯಲ್ಲೂ ಸಹ ದಲಿತ ಸಂವೇದನೆಯನ್ನು ನೋಡಬಹುದು. ದಲಿತ ಲೇಖಕ ಬರೆದಿದ್ದರೆ ಬಹಳ ಹತ್ತಿರದಿಂದ ಬರೆಯುತ್ತಿದ್ದ ಎಂಬ ನಂಬಿಕೆ ಇದೆ. ಆದರೂ ದಲಿತೇತರ ಲೇಖಕ ಒಬ್ಬ ದಲಿತ ಜೀವನವನ್ನು ಸಮರ್ಥವಾಗಿ ಕೊಡಬಲ್ಲ ಎಂದು ಕಾದಂಬರಿಗಳಿಂದ ತಿಳಿಯಬಹುದು.

ಕಾರಂತರನ್ನು ಜನರು ಬಹಳ ಇಷ್ಟ ಪಡುವುದು ಅವರು ವಾಸ್ತವವಾದಿಯಾಗಿ ಬರೆಯುತ್ತಾರೆ ಎಂಬುದಕ್ಕಲ್ಲ, ಅವರು ಮಾನವತಾವಾದಿ ನೆಲೆಯಲ್ಲಿ ನಿಂತು ಬರೆಯುತ್ತಾರೆ. ಹಾಗಾಗಿ ಓದುಗರ ಮನಸ್ಸಿನಲ್ಲಿ ಅಳಿಯದೇ ಹಾಗೇ ಉಳಿದಿದ್ದಾರೆ.

ಈ ಲೇಖನದಲ್ಲಿ ಆಧುನಿಕ ಪ್ರಕ್ರಿಯೆ ಬಗ್ಗೆ ಅಧ್ಯಯನ ನಡೆಸುತ್ತಾ ಕಾರಂತರ ಕಾದಂಬರಿಯು ಮೂಡಿ ಬಂದಿರುವ ಬಗೆಯನ್ನು ಚರ್ಚಿಸಲಾಗಿದೆ. ಬರೀ ಆಧುನೀಕರಣವನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ. ಆದರ ಜೊತೆ ಜೊತೆಯೇ ಕಾದಂಬರಿಯ ವಾಸ್ತವಾಂಶ ಹಾಗೂ ಮಾನವತೆಯ ಅಂಶಗಳನ್ನು ಸಹ ಬೆರೆಸಿಕೊಂಡಿದ್ದೇನೆ.

ಅಡಿ ಟಿಪ್ಪಣಿ

೧.ಕಾರಂತರ ಕಾದಂಬರಿಗಳಲ್ಲಿ ಆಧುನಿಕ ಪ್ರಕ್ರಿಯೆ, ಟಿ.ಪಿ.ಅಶೋಕ, ಪುಟ-೧೩

೨. ಚೋಮನದುಡಿ, ಶಿವರಾಮಕಾರಂತ, ಪುಟ-೧೨

೩. ಶಿವರಾಮಕಾರಂತರ ಕಾದಂಬರಿಗಳಲ್ಲಿ ಆಧಿನಿಕ ಪ್ರಕ್ರಿಯೆಟಿ.ಪಿ.ಅಶೋಕ--ಪುಟ-೧೦,

೪. ಅದೇ, ಪುಟ-೧೮

೫.ಅದೇ, ಪುಟ-೧೫

೬.ಅದೇ, ಪುಟ-೧೫

ಆ.ಚೋಮನದುಡಿ ಕಾದಂಬರಿಯಲ್ಲಿ ಮಹಿಳೆ:

(ಗ್ರಾಮೀಣ ಮಹಿಳೆ ಮತ್ತು ವೃದ್ಧೆಯರು) ಡಿ.ವಿಜಯ

ಈ ಅಧ್ಯಯನ ಭಾಗದಲ್ಲಿ ಕಾರಂತರು ತಮ್ಮ ಕಾದಂಬರಿಯಲ್ಲಿ ಗ್ರಾಮೀಣ ಮಹಿಳೆಯರನ್ನು ವೃದ್ದೆಯರನ್ನು ಯಾವ ರೀತಿ ಬಳಸಿಕೊಂಡಿದ್ದಾರೆ. ಅದನ್ನು ಕುರಿತು ಡಿ.ವಿಜಯರು ತಮ್ಮ ಲೇಖನವಾದ ಕಾರಂತರ ಕಾದಂಬರಿಯಲ್ಲಿ ಗ್ರಾಮೀಣ ಮಹಿಳೆಯರು ಎಂಬುದರಲ್ಲಿ ಚರ್ಚಿಸಿದ್ದಾರೆ. ಅದನ್ನು ನಾನು ನನ್ನ ಅಧ್ಯಯನಕ್ಕೆ ಒಳಮಾಡಿಕೊಂಡಿದ್ದೇನೆ.

ಕಾರಂತರಿಗೆ ಗ್ರಾಮೀಣ ಮಹಿಳೆಯರ ಮೇಲೆ ಅಪಾರ ಆಸಕ್ತಿ ಇತ್ತು. ಅವರನ್ನು ಮೇಲೆ ತರುವ ಆಸೆಯು ಇದ್ದ ಹಾಗೆ ಕಾಣಿಸುವುದು ಹಾಗೆಯೇ ಗ್ರಾಮೀಣ ಮಹಿಳೆಯರಲ್ಲಿ ಇರುವ ಮೂಢ ನಂಬಿಕೆಗಳು, ಸಂಪ್ರದಾಯಗಳು, ಸಾಮಾಜಿಕ ಕಳಕಳಿ, ಜೀವನ ನಿರ್ವಹಣೆ ಮಾಡುವ ಆಸೆ, ಇವುಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಮಹಿಳೆಯರ ದಿನನಿತ್ಯದ ಯಥಾಸ್ಥಿತಿಯ ಅನುಭವವನ್ನು ಕಾರಂತರು ಅಚ್ಚುಕಟ್ಟಾಗಿ ತಿಳಿಸಿದ್ದಾರೆ.

ಗ್ರಾಮೀಣ ಮಹಿಳೆಯರು ಮುಗ್ಧ ಸ್ವಭಾವದವರು, ಮುಂದಿನ ಜೀವನದ ಬಗ್ಗೆ ಯೋಚನೆ ಮಾಡುವರು. ಆದರೆ ಸಂದರ್ಭಕ್ಕೆ ಅನುಗುಣವಾಗಿ ಹೊಂದಿಕೊಂಡುಹೋಗುವವರು ಸಹ ಆಗಿರುತ್ತಾರೆ. 'ಚೋಮನದುಡಿ'ಯಲ್ಲಿ ಬೆಳ್ಳಿಯು ಆ ರೀತಿ ಕಂಡುಬರುತ್ತಾಳೆ, ಅಂದರೆ ಇಡೀ ಸಂಸಾರವನ್ನೇ ನಡೆಸುವವಳು ಬೆಳ್ಳಿ ಅನಿವಾರ್ಯ ಕಾರಣದಿಂದ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಅದನ್ನು ಎದುರಿಸಿ ನಿಲ್ಲುವ ಕೆಲಸವನ್ನು ಕಾರಂತರು ಮಾಡಿಸಲಿಲ್ಲ, ಮಹಿಳೆಯರು ಕುರಿಗಳು ಅಲ್ಲ, ಅವರಿಗೆ ಸ್ವಾತಂತ್ರವಾಗಿ ಯೋಚನೆ ಮಾಡುವ ಶಕ್ತಿ ಇದೆ. ಬೆಳ್ಳಿಯು ದೌರ್ಜನ್ಯಕ್ಕೆ ಒಳಗಾಗುವ ಬಗೆಯನ್ನು ನೋಡಿದರೇ ಗ್ರಾಮೀಣ ಮಹಿಳೆಯರು ವಿರೋಧಿಸಿ ನಿಲ್ಲುವುದು ಯಾವಾಗ? ಕಾರಂತರು ವಾಸ್ತವಾಂಶವನ್ನು ಚಿತ್ರಿಸಿರಬಹುದು, ವಾಸ್ತವಾಂಶವನ್ನು ಬದಲಾವಣೆ ಮಾಡಬೇಕು ಆಗ ಸುಧಾರಣೆ ಸಾಧ್ಯ.

ಡಿ.ವಿಜಯರವರು ಹೀಗೆ ಹೇಳುವರು "ಕಾರಂತರ ಕಾದಂಬರಿಗಳ ಗ್ರಾಮೀಣ ಮಹಿಳೆಯರು ಸಾಮಾನ್ಯವಾಗಿ ಔಪಚಾರಿಕ ಶಿಕ್ಷಣವನ್ನು ಪಡೆಯದಿದ್ದವರು.

ನಾಗರೀಕತೆಯ ಗಾಳಿಗೆ ನೇರ ಸಿಕ್ಕದಿದ್ದವರು ತಮ್ಮ ವೈಯಕ್ತಿಕ ಜೀವನ ಸಂತೋಷವನ್ನು ಬಲಿಕೊಟ್ಟವರು, ಸುಖಕ್ಕಿಂತ ಕರ್ತವ್ಯ ಮುಖ್ಯ ಎಂಬ ಧೋರಣೆ ತಳೆದವರು"[1]

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ವಿಜಯರವರು ಕಾರಂತರನ್ನು ಬಹಳ ಹತ್ತಿರದಿಂದ ನೋದಿದವರಾಗಿ ಕಾಣುತ್ತಾರೆ, ಕಾರಂತರ ಕಾದಂಬರಿಯಲ್ಲಿ ಬರುವ ಗ್ರಾಮೀಣ ಮಹಿಳೆಯರು ಅನಕ್ಷರಸ್ಥರಾಗಿ ಕಂಡುಬರುತ್ತಾರೆ, ಏಕೆಂದರೆ ಆ ಕಾಲದಲ್ಲಿ ಮಹಿಳೆಯರು ಅಕ್ಷರವನ್ನು ಕಲಿಯುವುದೇ ಅಪರಾಧವಾಗಿತ್ತು, ಅವರು ಬ್ರಾಹ್ಮಣ ಮಹಿಳೆಯರಾಗಲೀ, ದಲಿತ ಮಹಿಳೆಯರಾಗಲೀ ಯಾರೂ ಸಹ ಶಿಕ್ಷಣ ಕಲಿಯುವ ಹಾಗೇ ಇರಲಿಲ್ಲ. ಚೋಮನದುಡಿಯಲ್ಲಿನ ಸಂಕಪ್ಪಯ್ಯನ ತಾಯಿಯು ಸಹ ಅಕ್ಷರಸ್ಥಳಾಗಿರಲಿಲ್ಲ, ಸಂಪ್ರದಾಯಸ್ಥ ಮಹಿಳೆಯೂ ಆಗಿದ್ದಳು. ಚೋಮನಿಗೆ ಭೂಮಿಯನ್ನು ಕೊಡುವ ವಿಷಯದಲ್ಲಿ ಅನಕ್ಷರಸ್ಥ ಮಹಿಳೆಯಾಗಿ ಕಂಡುಬರುವಳು. ಸಂಕಪ್ಪಯ್ಯನ ತಾಯಿ ಅಕ್ಷರಸ್ಥಳಾಗಿದ್ದರೂ ಚೋಮನಿಗೆ ಭೂಮಿಯು ದೊರಕುತ್ತಿತ್ತೋ ಏನೋ, ಸಂಕಪ್ಪಯ್ಯನಿಗೆ ಕೊಡುವ ಮನಸ್ಸು ಇದ್ದರೂ ಸಹ ಅನಕ್ಷರಸ್ಥ ತಾಯಿ ಕೊಡದಂತೆ ತಡೆಯುವಳು. ಇದರಿಂದ ನಮಗೆ ಅವಳು ಅನಕ್ಷರಸ್ಥೆ ಎಂದು ತಿಳಿಯುವುದು, ಮತ್ತೆ ಚೋಮನ ಮಗಳಾದ ಬೆಳ್ಳಿಯು ಅನಕ್ಷರಸ್ಥಳ ರೀತಿ ಕಂಡು ಬರುವಳು. ಅನಕ್ಷರಸ್ಥಳಾದರೂ ಸಹ ಅವಳು ತನ್ನ ಕುಟುಂಬವನ್ನು ಮುಂದೆ ಕೊಂಡೊಯ್ಯುವಳು. ಕುಡುಕ ತಂದೆ ಏನೂ ತಿಳಿಯದ ತಮ್ಮಂದಿರು, ಮನೆಯ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಅಣ್ಣಂದಿರನ್ನು ಇವರೆಲ್ಲರನ್ನೂ ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಬೆಳ್ಳಿ ಹೊತ್ತಿರುವಳು. ತಂದೆಯು ಜಮೀನನ್ನು ಉಳುಮೆ ಮಾಡುವ ಬಗ್ಗೆ ಬೆಳ್ಳಿಯು 'ನಮಗೆಲ್ಲಾ ಯಾಕೆ ಆ ಕೆಲಸ ,ನಾವೇನು ಬ್ರಾಹ್ಮಣರ , ಭಂಟರ'ಎಂದು ಅಪ್ಪನಿಗೆ ಬುದ್ಧಿ ಹೇಳುವಳು. ಇದನ್ನು ಗಮನಿಸಿದಾಗ ಬೆಳ್ಳಿಯು ಅಕ್ಷರಸ್ಥಳ ಹಾಗೆ ಕಂಡುಬರುತ್ತಾಳೆ.ಅದೇ ಕಾರಂತರ ಕಾದಂಬರಿಯಲ್ಲಿ ಕಂಡು ಬರುವ ವಿಶಿಷ್ಟತೆ ಚೋಮನದುಡಿಯಲ್ಲಿ ಮಾತ್ರ ಅಲ್ಲ, ಮೈಮನಗಳ ಸುಳಿಯಲ್ಲಿ ಬರುವ ಮಂಜುಳ ಇವರನ್ನು ಬಿಟ್ಟರೇ ಉಳಿದ ಎಲ್ಲರೂ ಸಹ ದುಡಿಮೆಯೇ ಜೀವನದ ಗುರಿ ಹೊಂದಿದ್ದರು.

ಚೋಮನನ್ನು ನೋಡಿದಾಗ ಸೋಮಾರಿಯಾಗಿ, ಅವನು ಕುಡಿಯುವುದು, ಜೊತೆಗೆ ದುಡಿಯನ್ನು ಬಡಿಯುವುದು ಎರಡೇ ಕೆಲಸ. ಕುಟುಂಬದ ಪೂರ್ಣ ಜವಾಬ್ದಾರಿಯನ್ನು ಹೊರುವುದು ಬೆಳ್ಳಿ. ನಾವು ಸರ್ವೆ ಸಾಮಾನ್ಯವಾಗಿ ಈಗಿನ ಬಡಕುಟುಂಬಗಳಲ್ಲಿ ಚೋಮನ ಕುಟುಂಬದ ವ್ಯವಸ್ಥೆಯನ್ನು ನೋಡಬಹುದು, ಅಲ್ಲಿ ಚೋಮನ ಮಗಳು ಬೆಳ್ಳಿ ಕುಟುಂಬ ನಿರ್ವಹಣೆಯನ್ನು ಹೊತ್ತಿದ್ದಾಳೆ. ಇಂದಿನ ಕುಟುಂಬಗಳಲ್ಲಿ ಹೆಂಡತಿಯಾದವಳು ಕುಟುಂಬದ ನಿರ್ವಹಣೆ ಹೊತ್ತಿರುತ್ತಾಳೆ. ಚೋಮನಂತಹ ಗಂಡ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡಿ ಹೆಣ್ಣನ್ನು ಶೋಷಣೆ ಮಾಡುವುದನ್ನು ನೋಡಬಹುದು.

ಚೋಮನಂತಹ ಕುಟುಂಬಗಳು ಈಗ ಸಮಾಜದಲ್ಲಿ ಅನೇಕ ಕುಟುಂಬಗಳನ್ನು ನೋಡಬಹುದು. ಕುಟುಂಬದ ನಿರ್ವಹಣೆಯು ಮಹಿಳೆಗೆ ಸೇರಿದ್ದು, ಶೋಷಣೆಗೆ ಒಳಗಾಗುವುದು ಮಹಿಳೆಯೇ, ಎಂತಹ ದುರ್ದೈವದ ಸಂಗತಿ.

“ಸಾಮಾಜಿಕ ವಿಧಿ ನಿಷೇಧಗಳ ವಿಷಯದಲ್ಲಿ ಗಂಡಸರ ಸ್ಥಿತಿಗಿಂತ ಹೆಂಗಸರ ಸ್ಥಿತಿ ತುಂಬಾ ಬೇರೆಯಲ್ಲ. ಮುಕ್ತವಾಗಿಲ್ಲದ ಸಾಮಾಜಿಕ ಪದ್ಧತಿಯಲ್ಲಿ ಬೆಳೆದುಬಂದ ಮಹಿಳೆಯರು ಸಾಮಾಜಿಕ ಬದಲಾವಣೆಗೆ ತೆರೆದುಕೊಂಡಿಲ್ಲದಿರುವಾಗ ವಸ್ತುಸ್ಥಿತಿಯ ಮುಂದುವರಿಕೆಯನ್ನು ಅವರು ಬೆಂಬಲಿಸುವುದು ಸಹಜವಾಗಿದೆ. ಇರುವ ಸ್ಥಿತಿಯನ್ನು ಕಲಕಿ ಇನ್ನೂ ಹೆಚ್ಚಾಗಿ ವೈಯಕ್ತಿಕವಾಗಿ ತೊಂದರೆಗಳನ್ನು ತಂದುಕೊಳ್ಳಲು ಹೆದರುತ್ತಾರೆ. ಬದಲಾವಣೆಯ ಅಪೇಕ್ಷೆ ಹುಟ್ಟಿಸುವಂತಹ ಬೌದ್ಧಿಕ ಪರಿಸರವೂ ಅದಲ್ಲ. ಚೋಮ ಬೇಸಾಯಕ್ಕೆ ಭೂಮಿಯನ್ನು ಕೇಳಿದಾಗ ಅದಕ್ಕೆ ಅನುಮತಿಸದೆ “ಅಬ್ಬಾ ಈ ಹೊಲೆಯರಿಗೆ ಬಂದ ಸೊಕ್ಕೇ.[1]” ಎನ್ನುವಳು, ಸಂಕಪ್ಪಯ್ಯನ ತಾಯಿ.” ಅಪ್ಪಾ, ನಾವು ನಮ್ಮ ಯೋಗ್ಯತೆಗೂ ಮೀರಿ ಆಸೆ ಮಾಡಿದರೆ ನಡೆದೀತೇ? ಬೇಸಾಯ ಮಾಡಬೇಕಾದರೆ ಬ್ರಾಹ್ಮಣರಾಗಿಯೋ, ಬಂಟರಾಗಿಯೋ, ಗೌಡರಾಗಿಯೋ ಹುಟ್ಟಬೇಡವೇ? ಹಾಳಾದ ಹೊಲೆಯರಾಗಿ ಹುಟ್ಟಿ ಬೇಸಾಯ ಮಾಡಬೇಕು ಎಂದರೆ ಆಗುತ್ತದೆಯೇ? (ಚೋಮನ ದುಡಿ ಪುಟ-46) ಎನ್ನುತ್ತಾಳೆ ಬೆಳ್ಳಿ.[2] ”.

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಡಿ.ವಿಜಯರವರು ಹೇಳಿರುವಂತೆ ಹೆಂಗಸರ ಮನಸ್ಥಿತಿಯು ತುಂಬಾ ಸಂಕುಚಿತವಾಗಿರುವುದು. ಗಂಡಸರು ಕೆಲವೇ ಸಮಯದಲ್ಲಿ ಸಾಮಾಜಿಕ ಪದ್ಧತಿಗಳನ್ನು ದಾಟಿಯಾರು, ಹೆಂಗಸರು ಸಂಪ್ರದಾಯದ ಮಂಡೂಕದಲ್ಲಿ ಮುಳುಗಿರುತ್ತಾರೆ. ಸಾಮಾಜಿಕ ಸ್ಥಿತಿಯನ್ನು ಬದಲಾವಣೆ ಮಾಡುವ ಕಾರ್ಯಕ್ಕೆ ಹೋಗುವುದೇ ಇಲ್ಲ. ಇಲ್ಲಿ ಬೆಳ್ಳಿಯು ಚೋಮನಲ್ಲಿದ್ದ ಆಸೆಯನ್ನು ಚೂರು ಮಾಡುವಳು. ಬಹುಶಃ ಬೆಳ್ಳಿ ಚೋಮನಿಗೆ ಪ್ರೋತ್ಸಾಹವನ್ನು ನೀಡಿದ್ದರೇ ಚೋಮ ಮನಸ್ಸು ಮಾಡಿ ಜಮೀನು ಉಳುವ ಕೆಲಸಕ್ಕೆ ಹೋಗುತ್ತಿದ್ದನೋ ಏನೋ ಬೆಳ್ಳಿಯ ನಿರಾಶಾದಾಯಕ ಮಾತುಗಳಿಂದ ಚೋಮನು ಕುಗ್ಗಿ ಹೋದನು. ಗಂಡಿಗೆ ಹೆಣ್ಣಿನಿಂದ ಉತ್ತೇಜಿತ ಮಾತುಗಳು ಬರಬೇಕೇ ವಿನಃ ನಿರಾಸೆಯನ್ನು ತರುವ ಮಾತುಗಳನ್ನು ಆಡಬಾರದು, ಗಂಡಸು ಹೆಂಗಸರ ಮಾತುಗಳನ್ನು ಬೇಗ ಆಲಿಸುತ್ತಾರೆ. ಅದಕ್ಕೆ ಉದಾಹರಣೆ ಎಂದರೆ ಚೋಮ.

ಕಾರಂತರ ಕಾದಂಬರಿಯಲ್ಲಿ ಮುಖ್ಯವಾಗಿ ಕಂಡುಬರುವ ಪಾತ್ರ ವೃದ್ಧೆಯರು. ಅದರಂತೆ ಚೋಮನದುಡಿ ಕಾದಂಬರಿಯಲ್ಲಿ ಸಂಕಪ್ಪಯ್ಯನ ತಾಯಿಯನ್ನು ನೋಡಬಹುದು. ಆ ಮುದುಕಿಯನ್ನು ಸಂಪ್ರದಾಯದ ಮುದುಕಿಯಂತೆ ಚಿತ್ರಿಸಿದ್ದಾರೆ. ನಾವು ಎಷ್ಟೇ ಜ್ಞಾನ ಹೊಂದಿದ್ದರೂ ಎಲ್ಲೋ ಒಂದು ಕಡೆ ಸಂಪ್ರದಾಯಕ್ಕೆ ಒಳಗಾಗಿರುತ್ತೇವೆ. ಹಾಗೆ ಕಾರಂತರು ಆ ಮುದುಕಿಯ ಮೂಲಕ ಪರಿಣಾಮಕಾರಿ ಚಿತ್ರಣ ಕೊಡಲು ಯತ್ನಿಸಿರಬಹುದು. ಆ ಪಾತ್ರದ ಮೂಲಕ ಓದುಗರಿಗೆ ಕಾರಂತರು ಸಂಪ್ರದಾಯವನ್ನು ಬಿಡಲು ಸಾಧ್ಯವಾಗಿಲ್ಲ ಎಂದು ತಿಳಿಸುತ್ತದೆ.

ಕಾರಂತರ ಕಾದಂಬರಿಗಳಲ್ಲಿ ಬಹುಮುಖ್ಯ ಅಂಶಗಳು ಅಂದರೆ ಮನುಷ್ಯನ ಬದುಕಿನ ಜೀವನ ದ್ರವ್ಯಗಳು ಹಾಗೂ ಅನುಭವಗಳು. ಇಂತಹ ಬದುಕಿನಲ್ಲಿ ಬರುವವರು ಸ್ತ್ರೀಯರು ಮತ್ತು ಪುರುಷರು. ಇವರು ಯಾವಾಗಲೂ ಸಾಂಸ್ಕೃತಿಕ ಸಮಾಜದ ಮುಖಾಮುಖಿ ಪ್ರತಿಬಿಂಬಗಳಾಗಿರುತ್ತಾರೆ. ಕಾರಂತರ ಕಾದಂಬರಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕಾರಂತರ ನಂಬಿಕೆ, ಧೋರಣೆ, ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ರಚನೆಗೊಂಡಿವೆ. ಆದ್ದರಿಂದ ಕಾರಂತರ ಕಾದಂಬರಿ 'ಚೋಮನದುಡಿ'ಯಲ್ಲಿ ಬರುವ ಮಹಿಳೆಯರನ್ನು ಕುರಿತು ಅಭ್ಯಾಸ ಮಾಡುವುದು ಉತ್ತಮವಾಗಿರುತ್ತದೆ.

ಕಾರಂತರ ಡಿ.ವಿಜಯರವರು ತಮ್ಮ ವಿಮರ್ಶಾ ಲೇಖನವಾದ 'ಗ್ರಾಮೀಣ ಮಹಿಳೆಯರು' ಎಂಬುದರಲ್ಲಿಯೂ ಸಹ ಕೇವಲ ಮಹಿಳೆಯರ ಜೀವನವನ್ನು ಕಾರಂತರ ಯಾವ ಮಟ್ಟದಲ್ಲಿ ಚಿತ್ರಿಸಿದ್ದಾರೆ ಎಂಬುದನ್ನು ತೋರಿಸಿದ್ದಾರೆ. ಆದರೆ, ಮಹಿಳೆಯರು ಚೋಮನದುಡಿ ಕಾದಂಬರಿ ರಚನೆಯ ಕಾಲದಲ್ಲಿ ಯಾವ ಗತಿಯಲ್ಲಿದ್ದರು. ಸಮಾಜದಲ್ಲಿ ಯಾವ ಸ್ಥಾನವನ್ನು ಪಡೆದಿದ್ದರೂ ಅದರಲ್ಲೂ ಒಬ್ಬ ಕೆಳವರ್ಗದ ಸ್ತ್ರೀ ಪಡೆದಿದ್ದ ಸ್ಥಾನಮಾನ, ಮೇಲ್ ವರ್ಗದ ಸ್ತ್ರೀ ಪಡೆದಿದ್ದ ಸ್ಥಾನಮಾನ ಇವುಗಳನ್ನು ತಿಳಿದಿಲ್ಲ ಅನಿಸುತ್ತದೆ. ಅಂದು ಪುರುಷ ಪ್ರಧಾನ ಸಮಾಜ ಇದ್ದಿರಬಹುದು. ಆದ್ದರಿಂದ ಸ್ತ್ರೀಯರ ಸಮಾಜದಲ್ಲಿ ಪುರುಷರಿಂದ ತುಳಿತಕ್ಕೆ ಒಳಗಾಗಿರಬಹುದು.

ಡಿ.ವಿಜಯರವರು ತಮ್ಮ ಲೇಖನದಲ್ಲಿ "ಗ್ರಾಮೀಣ ಹಿನ್ನೆಲೆಯಲ್ಲಿ ಬರುವ ಬಹುತೇಕ ಮಹಿಳೆಯರು ಬದುಕಿನ ಆಘಾತ, ವೈಪರೀತ್ಯಗಳನ್ನು ಎದುರಿಸುತ್ತಾ ಗಟ್ಟಿಗೊಂಡವರು. ಬದುಕಿಗೆ ಹೆದರಿ ಓಡುವ, ಸಾಯುವ, ಚಿಂತೆ ಮಾಡುವ ವಿರಕ್ತಿಯ ಮುಸುಕಿನಲ್ಲಿ ಅಲೆಯುವ, ವಿಲಾಸದಲ್ಲಿ ಕರ್ತವ್ಯ ಮರೆತ ಗಂಡಸರಿಗೆ ಕಾರಂತರ ಕಾದಂಬರಿಗಳಲ್ಲಿ ಬರವಿಲ್ಲ. ಆದರೆ, ಇಲ್ಲಿನ ಮಹಿಳೆಯರು ಇದಕ್ಕೆ ವಿರುದ್ಧವಾಗಿ ಜೀವನಾಭಿಮುಖಿಗಳು, ಕರ್ತವ್ಯಶೀಲೆಯರು, ಕೆಲವು ಮಹಿಳೆಯರು ಸಾಯುವ ಪ್ರಯತ್ನ, ಯೋಚನೆ ಮಾಡಿದರೂ ಅವರ ಮಕ್ಕಳಿಗಾಗಿ ಅಥವಾ ಅವಲಂಬಿತರ ಒಳಿತಿನ ಸೆಳೆತ ಅವರನ್ನು ಹಿಂದಕ್ಕೆಳೆದಿದೆ.[೪]". ಈ ಮಾತುಗಳನ್ನು ಗಮನಿಸಿದಾಗ ಡಿ.ವಿಜಯರವರು ಸ್ತ್ರೀವಾದಿ ನೆಲೆಯಲ್ಲಿ ಹೇಳುತ್ತಿದ್ದಾರೆ ಎಂಬುದು ತಿಳಿಯುತ್ತದೆ.ಏಕೆಂದರೆ, ಚೋಮನದುಡಿ ಕಾದಂಬರಿಯಲ್ಲಿ ಬರುವ ಪುರುಷ ಪಾತ್ರಗಳು ಎಲ್ಲೂ ಹೆದರಿ ಓಡುವುದಿಲ್ಲ. ಹಾಗೇ ಮಾಡುವುದಾಗಿದ್ದರೇ ಚೋಮನು ಇರುವ ಹಾಗೇ ಇರಲಿಲ್ಲ. ಚೋಮನು ಯಾವ ಪರಿಸ್ಥಿತಿ ಬಂದರೂ ಸಹಾ ಯಾರಿಗೂ ಹೆದರದೆ, ಆತ್ಮಸ್ಥೈರ್ಯ ಕಳೆದುಕೊಳ್ಳದೇ ಜೀವನ ಸಾಗಿಸಿದ್ದಾನೆ. ಆದರೆ, ಚೋಮನ ಮಗನಾದ ಗುರುವನು ಹೆದರಿ ಹೋಗಲಿಲ್ಲ. ತನ್ನ ಪ್ರೇಮವನ್ನು ಅರಸಿಕೊಂಡು ಹೋಗಿದ್ದಾನೆ. ಹಾಗೆಯೇ ಸ್ತ್ರಿಯರು ಜೀವನವನ್ನು ಒಂದು ಸವಾಲಾಗಿ ಸ್ವೀಕರಿಸಿದ್ದಾರೆ. ಚೋಮನ ಮಗಳಾದ ಬೆಳ್ಳಿಯು ಏನೇ ಕಷ್ಟ ಬಂದರೂ ಹೆದರುವುದಿಲ್ಲ. ಅವಳು ತನ್ನ ಅಪ್ಪನ ಮಾನ ಉಳಿಸಲು ದೂರದ ಊರಾದ ಕಳಸಕ್ಕೆ ಜೀತ ಮಾಡಲು ಹೋಗುವಳು.

ಚೋಮನಿಗೆ ಕಾಲಕಾಲಕ್ಕೆ ಆತ್ಮಸ್ಥೈರ್ಯ ತುಂಬುವಳು. ಚೋಮನ ಕುಟುಂಬವನ್ನು ಸಾಗಿಸುವವಳು ಬೆಳ್ಳಿಯೇ. ಇವಳು ತನ್ನ ಅಣ್ಣನ ಹಾಗೇ ಪ್ರೇಮದ ಹಿಂದೆ ಓಡಿಹೋಗಿದ್ದರೇ ಚೋಮನ ಕುಟುಂಬವೂ ಬೀದಿಗೆ ಬರಬೇಕಾಗಿತ್ತು.

ಕಾರಂತರ ಕಾದಂಬರಿಯನ್ನು ಗಮನಿಸಿದಾಗ ಅಲ್ಲಿ ಎರಡು ವರ್ಗಕ್ಕೆ ಸೇರಿದ ಮಹಿಳೆಯನ್ನು ಕಾಣಬಹುದು. ಒಂದು ದಲಿತ ಹೆಣ್ಣು ಇನ್ನೊಂದು ಬ್ರಾಹ್ಮಣ ಹೆಣ್ಣು ಏಕೆಂದರೆ, ಅವರು ಇದ್ದಂತಹ ಸಮಾಜ ಅಂತಹುದು. ಚೋಮನದುಡಿ ಕಾದಂಬರಿಯಲ್ಲಿ ನಗರದ ಮಹಿಳೆಯರು ಬರುವುದಿಲ್ಲ. ಬದಲಾಗಿ ಗ್ರಾಮೀಣ ಮಹಿಳೆಯರು ಬರುತ್ತಾರೆ. ಮಹಿಳೆಯರೇ ಈ ಕಾದಂಬರಿ ಕೇಂದ್ರ ಭಾಗ .ಏಕೆಂದರೆ ಸಂಕಪ್ಪಯ್ಯನ ತಾಯಿಯಾದ ಮುದುಕಿಯು ಚೋಮನಿಗೆ ಭೂಮಿಯನ್ನು ಕೊಟ್ಟಿದ್ದರೇ ಚೋಮನು ನಿರಾಶಾದಾಯಕನಾಗುತ್ತಿರಲಿಲ್ಲ ಎಂಬುದನ್ನು ನೋಡಬಹುದು, ಆ ಮುದುಕಿಯ ಮೂಲಕ ಚೋಮನಿಗೆ ಭೂಮಿಯನ್ನು ಕೊಡಿಸುವ ತಂತ್ರವನ್ನು ಕಾರಂತರು ಮಾಡಿಸಬಹುದಿತ್ತು. ಆದರೆ, ಆ ಮುದುಕಿಯನ್ನು ಪರಂಪರೆ, ಸಂಪ್ರದಾಯದ ಪ್ರತೀಕಗೊಳಿಸಿ ಅದಕ್ಕೆ ವಿರುದ್ಧ ಮಾಡಿದ್ದಾರೆ.

ಇನ್ನೊಂದು ಮುಖ್ಯವಾದ ಪಾತ್ರ ಬೆಳ್ಳಿಯದು. ಬೆಳ್ಳಿ ಕೊನೆಗೂ ಚೋಮನಿಗೆ ಕೆಟ್ಟವಳು ಎನಿಸಿಕೊಂಡಳು.ಬೆಳ್ಳಿಯ ಬಗ್ಗೆ ಅಪಾರ ಆಸೆಯನ್ನು ಕಟ್ಟಿರುತ್ತಾನೆ. ಅದನ್ನು ಹುಸಿ ಮಾಡುತ್ತಾಳೆ. ಆದರೆ, ಬೆಳ್ಳಿಯಂತಹ ಹುಡುಗಿಯರಲ್ಲಿ ಅದು ಸಾಮಾನ್ಯ ಏಕೆಂದರೆ, ತಂದೆ ತಾಯಿಗಳು ತನಗೆ ಮದುವೆ ಮಾಡದೇ ಇದ್ದಾಗ ವಯಸ್ಸಿಗೆ ಸಹಜವಾದ ಕಾಮನೆಗಳು ಗರಿಗೆದರಿ, ಅವುಗಳನ್ನು ಈಡೇರಿಸಿಕೊಳ್ಳುವ ಸಂದರ್ಭಕ್ಕೋಸ್ಕರ ಕಾಯುವಂತಾಗುತ್ತದೆ. ಇಲ್ಲಿ ಬೆಳ್ಳಿಯನ್ನು ಮನ್ವೇಲನು ಮುಟ್ಟಿದಾಗ ಅದನ್ನು ತಡೆಯಲು ಆಕೆ ಮುಂದಾಗುವುದಿಲ್ಲ, ಏಕೆಂದರೆ ಅವಳು ಕಾಯುತ್ತಿದ್ದ ಸಂದರ್ಭವು ತಾನಾಗಿಯೇ ಒದಗಿ ಬಂದಿರುತ್ತದೆ, ಇನ್ನೊಮ್ಮೆ ಚೋಮನಲ್ಲಿ ಸಿಕ್ಕಿ ಬೀಳುವರು.ಅದು ಚೋಮನಿಗೆ ಆಘಾತ ಉಂಟು ಮಾಡುತ್ತದೆ.

ಗ್ರಾಮೀಣ ಮಹಿಳೆಯರಿಗೂ, ನಗರದ ಮಹಿಳೆಯರಿಗೂ ಅಜಗಜಾಂತರ ವ್ಯತ್ಯಾಸವನ್ನು ಕಾಣಬಹುದು. ಗ್ರಾಮೀಣ ಮಹಿಳೆಯರು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಿರುತ್ತಾರೆ. ಅವರಲ್ಲಿ ಆತ್ಮ ವಿಶ್ವಾಸವು ಹೆಚ್ಚಿರುವುದು. ಅದರ

ಜೊತೆಗೆ ವಿಶಾಲವಾದ ಮನೋಭಾವವನ್ನು ಸಹಾ ಹೊಂದಿದ್ದಾರೆ. ಒಂದು ಹೆಣ್ಣಿನ ಸಮಸ್ಯೆಯನ್ನು ಇನ್ನೊಂದು ಹೆಣ್ಣು ಕೂತು ಕೇಳುವಷ್ಟು ತಾಳ್ಮೆ ಹೊಂದಿರುತ್ತಾರೆ.ಆದರೆ, ನಗರದ ಮಹಿಳೆಯರು ತಮ್ಮ ಮನೆ, ಮಕ್ಕಳು, ಕುಟುಂಬ ಎಂಬ ಸಂಕುಚಿತ ಬೇಲಿಯನ್ನು ಮಾಡಿಕೊಳ್ಳುತ್ತಾರೆ. ಒಬ್ಬರ ಕಷ್ಟಗಳಿಗೆ ಇನ್ನೊಬ್ಬರು ಸ್ಪಂಧಿಸುವುದೇ ಇಲ್ಲ. ತಮ್ಮ ಪಕ್ಕದ ಮನೆಯಲ್ಲಿಯೇ ಹೆಣ್ಣಿನ ಶೋಷಣೆ ನಡೆಯುತ್ತಿದ್ದರೂ ಅದನ್ನು ನೋಡಿಕೊಂಡು ಸಹಾ ಸುಮ್ಮನೆ ಇರುವುದನ್ನು ಕಾಣಬಹುದು. ಆದರೆ, ಗ್ರಾಮೀಣ ಮಹಿಳೆಯರಲ್ಲಿ ಸಂಕುಚಿತ ಭಾವನೆ ಕಾಣುವುದಿಲ್ಲ. ಆದರೂ ಚೋಮನದುಡಿಯಲ್ಲಿ ಬೆಳ್ಳಿಯ ಸಂಕಷ್ಟಗಳನ್ನು, ನೋವುಗಳನ್ನು, ಮನದ ಆಸೆಯನ್ನು ಹೇಳಿಕೊಳ್ಳಲು ಕಾರಂತರು ಒಂದು ಹೆಣ್ಣು ಜೀವ ಸೃಷ್ಟಿ ಮಾಡಿಲ್ಲ. ಹೆಣ್ಣಿನ ನೋವು ಹೆಣ್ಣಿಗೆ ಬೇಗ ಮುಟ್ಟುತ್ತದೆ. ಕಾರಂತರ ಬೆಳ್ಳಿಯ ಮನೋವ್ಯಥೆಯನ್ನು ಕೇಳಲು ಒಂದು ಹೆಣ್ಣು ಜೀವ ಸೃಷ್ಟಿ ಮಾಡಿದ್ದರೇ ಲೋಪವೇನೂ ಕಾಣುತ್ತಿರಲಿಲ್ಲ. ಹಾಗೆಯೇ ಡಿ.ವಿಜಯರವರು ತಮ್ಮ ತಮ್ಮ ವಿಮರ್ಶಾ ಲೇಖನದಲ್ಲಿ ಎಲ್ಲಿಯೂ ತಿಳಿಸಿಲ್ಲ. ಬಹುಶಃ ಕಾದಂಬರಿಯನ್ನು ಸ್ತ್ರೀಯು ರಚನೆ ಮಾಡಿದ್ದರೇ ಬೆಳ್ಳಿಗೆ ಆದ ಅನ್ಯಾಯವನ್ನು ತಡೆಯುತ್ತಿದ್ದರೋ ಏನೋ ಏಕೆಂದರೆ ಬೆಳ್ಳಿಯಲ್ಲಿ ಕಾಮದ ಆಸೆ ಇತ್ತು ಎಂದ ಮಾತ್ರಕ್ಕೆ ಅವಳು ಆ ರಿತಿ ಕೆಟ್ಟ ದಾರಿಯನ್ನು ಹಿಡಿಯುತ್ತಿರಲಿಲ್ಲ. ಬೆಳ್ಳಿಯೇ ಅಲ್ಲ, ಯಾವ ಹೆಣ್ಣೂ ಸಹ ಆ ರೀತಿಯ ಕೆಟ್ಟ ದಾರಿಯನ್ನು ಹಿಡಿಯುತ್ತಿರಲಿಲ್ಲ. ಸ್ತ್ರೀವಾದಿ ಲೇಖಕಿಯು ಆ ಕಾದಂಬರಿಯನ್ನು ರಚನೆ ಮಾಡಿದ್ದರೇ ಬೆಳ್ಳಿಯಲ್ಲಿ ಶೋಷಣೆ ಮಾಡುವವರ ವಿರುದ್ಧ ಹೋರಾಡುವಂತಹ ಮನೋಭಾವವನ್ನು ನೋಡಬಹುದಿತ್ತು, ಕಾರಂತರಲ್ಲಿ ಆ ಮನೋಭಾವ ಕಂಡು ಬಂದಿಲ್ಲ.ಏಕೆಂದರೆ, ಆ ಸಮಾಜದ ಸ್ಥಿತಿಯಲ್ಲಿ ಒಬ್ಬಳು ಹೆಣ್ಣುಪುರುಷನ ಎದುರು ನಿಂತು ಮಾತನಾಡುವಷ್ಟು ಧೈರ್ಯ ಹೊಂದಿದವಳು ಆಗಿರಲಿಲ್ಲ. ಅವಳು ಪುರುಷನ ಕಾಮದ ಕಣ್ಣಿಗೆ ಕಾಣುವವಳಾಗಿ ಮಾತ್ರ ಗೋಚರಿಸಿದ್ದಳು.

ಈ ಗ್ರಾಮೀಣ ಮಹಿಳೆಯರು ಪರಂಪರಾಗತವಾಗಿ ಬಂದ ಸಾಮಾಜಿಕ ಮೌಲ್ಯಗಳನ್ನು ಒಪ್ಪಿದವರು, ಸ್ವಇಚ್ಛೆಯಿಂದಲ್ಲದಿದ್ದರೂ ಸಾಮಾಜಿಕ ಒತ್ತಡಗಳಿಂದ ಹಾಗೆ ಒಪ್ಪಬೇಕಾಗಿ ಬಂದಿದೆ. ಎಂದು ಡಿ.ವಿಜಯರವರು ಹೇಳಿರುವ ಮಾತು ವಾಸ್ತವಾಂಶಕ್ಕೆ ಹತ್ತಿರವಾಗಿದೆ. ಏಕೆಂದರೆ ಗ್ರಾಮೀಣ ಮಹಿಳೆಯರು ಪರಂಪರಾಗತವಾಗಿ

ಬಂದ ಕೆಲವು ಕಟ್ಟುಪಾಡುಗಳನ್ನು ಬದಲಾಯಿಸುವ ಕಾರ್ಯಕ್ಕೆ ಹೋಗುವುದಿಲ್ಲ. ಪುರುಷರು ಅವರನ್ನು ಹಾಗೆ ಮಾರ್ಪಡಿಸಿರುತ್ತಾರೆ. ಗಂಡಸರು ತಪ್ಪು ಮಾಡುವುದು, ಆಪಾದನೆ ಹೊರಿಸುವುದು ಹೆಂಗಸರ ಮೇಲೆ.ಆದ್ದರಿಂದ ಸಂಪ್ರದಾಯ, ಪರಂಪರೆ ಅಂದರೆ ಸ್ತ್ರೀಯರು ಮಾಡಿಕೊಂಡಿದ್ದಾರೆ.ಚೋಮನದುಡಿಯಲ್ಲಿ ನೋಡುವುದಾದರೆ, ಸಂಕಪ್ಪಯ್ಯನ ತಾಯಿಯನ್ನು ನೋಡಬಹುದು.ಅಂದರೆ ಅವನ ತಾಯಿಯಲ್ಲಿ ಚೋಮನಿಗೆ ವ್ಯವಸಾಯಕ್ಕೆ ಭೂಮಿಯನ್ನು ಕೊಡಬಾರದು ಎಂಬ ಭಾವನೆ ಪರಂಪರಾಗತವಾಗಿ ಬೆಳೆದುಕೊಂಡು ಬಂದಿರುವುದನ್ನು ನೋಡಬಹುದು.

ಆ ಸಮಾಜ ಅವಳನ್ನು ಚೋಮನಂತಹ ಕೆಳಜಾತಿಯವರಿಗೆ ಭೂಮಿಯನ್ನು ಕೊಡಬಾರದು ಎಂಬ ಭಾವನೆಯನ್ನು ಬೆಳೆಸಿಬಿಟ್ಟಿದೆ. ಅದನ್ನು ನಾವು ಮುರಿಯಬಾರದು ಎಂಬ ಭಾವನೆಯು ಸಹಾ ಸಂಕಪ್ಪಯ್ಯನಲ್ಲಿ ತಳವೂರಿಬಿಟ್ಟಿದೆ. ಹಾಗೆಯೇ ಬೆಳ್ಳಿಯ ಪಾತ್ರದಲ್ಲಿಯೂ ಸಹ ಪರಂಪರಾಗತವಾದ ಮನೋಭಾವ ನೋಡಬಹುದು.ಅದು ಚೋಮನು ಬೇಸಾಯ ಮಾಡಲು ಸಾಂಕಪ್ಪಯ್ಯನಲ್ಲಿ ಕೇಳಿ ಪಡೆಯುತ್ತೇನೆ ಎಂದಾಗ ಬೆಳ್ಳಿಯು "ಬೆಳ್ಳಿ ಬಾಯನ್ನು ತೆರೆದೇ ಬಿಟ್ಟಳು" ನೀನು ಧನಿಯರೊಂದಿಗೆ ಬಾಯಿ ತೆರೆದು ಮರ್ಯಾದೆಯನ್ನು ಕಳೆದುಕೊಳ್ಳಬೇಡಾ" ಎಂದಳು.ಇದುವರೆಗೆ ಚೋಮನ ಹಿರಿಯರಲ್ಲಿ ಬೇಸಾಯ ಮಾಡಿದವರಿಲ್ಲ. ಅವರ ಧನಿಯರಿಗೆ ಯಾವನೊಬ್ಬ ಹೊಲೆಯ ಒಕ್ಕಲೂ ಇಲ್ಲ. ಹೊಲೆಯರು ನೇಗಿಲನ್ನು ಹಿಡಿದರೆ ಪ್ರಳಯವೇ ಬಂದೀತು ಎಂದು ತಿಳಿಯುವವರು ಅವರು. ಎಲ್ಲೋ ಯಾವುದೋ ಊರಿನಲ್ಲಿ ಯಾವುದೋ ಹೊಲೆಯ ಸರ್ಕಾರದ ನೆಲವನ್ನು ದರಖಾಸ್ತು ಪಡೆದು ಏನೋ ನಾಲ್ಕು ಗಿಡ ಭತ್ತವನ್ನು ಬೆಳೆಸುತ್ತಾನೆಂದು ಕೇಳಿ ಚೋಮನ ಕಿವಿ ನೆಟ್ಟಗಾಗಿ ನಾಲಿಗೆ ಮುಂದೆ ಚಾಚಿದರೆ ಅವನ ಬಾಳ್ವೆ ಒಳಿತಾಗುವುದುಂಟೇನು?ಆದರಿಂದಾಗಿ ಬೆಳ್ಳಿ ಬೇಡವೆಂದಳು.ಚೋಮನ ಸಿಟ್ಟು ತಣಿಯದಾಯಿತು.[24]".

ಈ ರೀತಿಯ ಬೆಳ್ಳಿಯ ಮಾತುಗಳನ್ನು ಗಮನಿಸಿದಾಗ ಬೆಳ್ಳಿಯು ಸಹ ಪರಂಪರಾಗತವಾಗಿ ಬಂದ ಸಾಮಾಜಿಕ ಕಟ್ಟುಪಾಡುಗಳಿಗೆ ಬಲಿಯಾಗುವಂತಹ ಮನಸ್ಸು ಹೊಂದಿದ್ದಳು.ಇಂತಹ ಮನೋಭಾವವೂ ಎಂದಿಗೂ ಬದಲಾವಣೆಯನ್ನು ತರುವುದಿಲ್ಲ.

ನಾವು ಇಂದು ಬದಲಾವಣೆಯನ್ನು ತರಲು ಹೊರಟರೇ ನಾವು ಅಲ್ಲದಿದ್ದರೇ ಮುಂದಿನ ಪೀಳಿಗೆಯವರಾದರೂ ಸಹ ಸುಖವಾಗಿ ಬಾಳುವಂತೆ ಆಗುವುದು. ಈ ಮೇಲಿನ ಬೆಳ್ಳಿಯ ಈ ರೀತಿಯ ಮನೋಭಾವಕ್ಕೆ ಮುಖ್ಯ ಕಾರಣ ಅವನ ಸುತ್ತಮುತ್ತ ಇರುವ ಸಾಮಾಜಿಕ ಒತ್ತಡ. ಸಮಾಜಕ್ಕೆ ಹೆದರಿ ಬೆಳ್ಳಿ ಚೋಮನಿಗೆ ಭೂಮಿಯನ್ನು ಉಳುವುದು ಬೇಡ. ನಾವು ಸಾಯುವವರೆಗೂ ಸಹ ಶೋಷಣೆಯಲ್ಲಿ ಇರೋಣ ಎಂಬಂತೆ ನೋಡಬಹುದು.

ಡಿ.ವಿಜಯರವರು ಹೇಳುವಂತೆ "ಕಾರಂತರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳು ರೂಡಿಗಿಂತ ಲೈಂಗಿಕ ನಡವಳಿಕೆಯ ಚೌಕಟ್ಟನ್ನು ಸಾಮಾನ್ಯವಾಗಿ ಮೀರುವುದಿಲ್ಲ." ಈ ಮಾತುಗಳು ನೇರವಾಗಿ ಬೆಳ್ಳಿಯ ಪಾತ್ರಕ್ಕೆ ಹೋಲಿಕೆಯಾಗುತ್ತವೆ. ಸಾಮಾನ್ಯ ಕೆಳವರ್ಗದ ಹೆಣ್ಣು ಮಕ್ಕಳಲ್ಲಿ ಕಂಡುಬರುವುದೆಂದರೆ ನಿಧಾನ ವಿವಾಹ ಇಲ್ಲದಿದ್ದರೆ ಅದೂ ಸಹಾ ಇಲ್ಲ. ಇಂತಹ ಪರಂಪರಾಗತವಾದ ಮನೋಧರ್ಮವನ್ನು ನೋಡಬಹುದು.ಹಾಗೆಯೇ ಬೆಳ್ಳಿಯನ್ನು ಕಾಲಕ್ಕೆ ಸರಿಯಾಗಿ ವಿವಾಹ ಮಾಡದ ಕಾರಣ ಮನ್ವೇಲ ಮತ್ತು ಅವನ ಸೇವಕರಿಂದ ದೌರ್ಜನ್ಯಕ್ಕೆ ಒಳಗಾಗಿರುವುದು. ಅದನ್ನು ತಡೆಯುವ ಕೆಲಸಕ್ಕೂ ಕಾರಂತರು ಮುಂದೆ ಬಂದಿರುವುದಿಲ್ಲ. ಬೆಳ್ಳಿಯು ಕಾದಂಬರಿಯ ಪ್ರಾರಂಭದಿಂದ ಕೊನೆಯ ಘಟ್ಟದವರೆಗೂ ಚೋಮನ ಪ್ರೀತಿಯನ್ನು ಉಳಿಸಿಕೊಂಡಿದ್ದಳು.ಆದರೆ, ಕೊನೆಯ ಕ್ಷಣದಲ್ಲಿ ಬೆಳ್ಳಿಯ ಜೊತೆಯಲ್ಲಿ ಇದ್ದ ಮನ್ವೇಲನನ್ನು ಕಂಡು ಚೋಮನಿಗೆ ಬೆಳ್ಳಿಯ ಬಗ್ಗೆ ಇದ್ದ ನಂಬಿಕೆ ಒಂದೇ ಸಾರಿ ಕುಸಿದುಹೋಯಿತು.

ಕಾಮ ಎಂಬುದು ಮನುಷ್ಯನನ್ನು ಎಂತಹ ಸ್ಥಿತಿಗೆ ತರುತ್ತದೆ ಎಂದರೆ ಬೆಳ್ಳಿಯನ್ನೇ ನೋಡಬಹುದು.ಬೆಳ್ಳಿಯ ಕುಟುಂಬದಲ್ಲಿ ಅಷ್ಟು ಕಷ್ಟ ಇದ್ದು, ಚೋಮನು ಪಡಬಾರದ ಶೋಷಣೆಯನ್ನು ಅನುಭವಿಸುತ್ತಿದ್ದರೂ ಸಹಾ ಬೆಳ್ಳಿಯು ಅದನ್ನು ಯೋಚನೆ ಮಾಡದೇ ಕಾಮದ ಬಲೆಗೆ ಬೀಳುವಳು.ಇಂತಹ ಸಹಜವಾದ ಮನೋಭಾವವನ್ನು ಗ್ರಾಮೀಣ ಮಹಿಳೆಯರಲ್ಲಿ ನೋಡಬಹುದು.

ಗ್ರಾಮೀಣ ಮಹಿಳೆಯರಲ್ಲಿ ನಮ್ಮ ಜೀವನ ಅರಿಚು ಅವರಿಗಿರುವುದು. ಏಕೆಂದರೆ ಅವರಲ್ಲಿ ನಮಗೆ ಯಾವುದು ಬೇಡ, ಯಾವುದುಬೇಕು? ನಿಲುಕದ ನಕ್ಷತ್ರಕ್ಕೆ ಆಸೆ ಪಟ್ಟರೆ ಸಾಧ್ಯವೇ? ಎಂಬ ಅರಿವು ಇರುವುದು. ಅಂತಹ ಗುಣ ಬೆಳ್ಳಿಯಲ್ಲಿ

ನೋಡಬಹುದು. ಒಂದು ಕಡೆ ಬೆಳ್ಳಿ ಚೋಮನಿಗೆ ಹೀಗೆ ಹೇಳುವಳು. "ಅಪ್ಪಾ, ನಾವು ನಮ್ಮ ಯೋಗ್ಯತೆಗೂ ಮೀರಿ ಆಸೆ ಮಾಡಿದರೆ ನಡೆದೀತೇ? ಬೇಸಾಯ ಮಾಡಬೇಕಾದರೆ ಬ್ರಾಹ್ಮಣರಾಗಿಯೋ, ಭಂಟರಾಗಿಯೋ, ಗೌಡರಾಗಿಯೋ ಹುಟ್ಟಬೇಡವೇ?ಹಾಳದ ಹೊಲೆಯರಾಗಿ ಹುಟ್ಟಿ ಬೇಸಾಯ ಮಾಡಬೇಕು ಅಂದರೆ ಆಗುತ್ತದೆಯಾ[೬]" ?

ಈ ಮೇಲಿನ ಬೆಳ್ಳಿಯ ಮಾತುಗಳಿಂದ ನಮಗೆ ಗ್ರಾಮೀಣ ಮಹಿಳೆಯರಲ್ಲಿ ಇರುವ ಇದ್ದಷ್ಟಕ್ಕೆ ತೃಪ್ತಿ ಪಡುವ ಗುಣವನ್ನು ಕಾಣಬಹುದು. ಇದು ಗ್ರಾಮೀಣ ಮಹಿಳೆಯರಲ್ಲಿ ಮುಖ್ಯವಾಗಿ ಕಂಡು ಬರುವ ಗುಣವೆಂದೂ ಹೇಳಬಹುದು.

ಕಾರಂತರ ಕಾದಂಬರಿಗಳಲ್ಲಿ ಮುದುಕಿಯರ ಪಾತ್ರಗಳನ್ನು ಸಹಜವಾಗಿ ನೋಡಬಹುದು. ಆದರೆ, ಎಲ್ಲಾ ಕಾದಂಬರಿಯ ಮುದುಕಿಯರ ಪಾತ್ರಕ್ಕಿಂತ ಚೋಮನದುಡಿ ಕಾದಂಬರಿಯಲ್ಲಿ ಬರುವ ಮುದುಕಿಯರ ಪಾತ್ರವೂ ವಿಶಿಷ್ಟವಾಗಿ ಕಂಡುಬಂದಿದೆ. ಏಕೆಂದರೆ, ಇಲ್ಲಿ ಬರುವ ಸಂಕಪ್ಪಯ್ಯನ ತಾಯಿಯನ್ನು ಕಾರಂತರು ಒಳ್ಳೆಯ ತಾಯಿ ಅಂದರೆ ಚೋಮನಿಗೆ ಜಮೀನನ್ನು ಕೊಡಿಸುವಂತೆ ಮಾಡಬಹುದಿತ್ತು. ಆದರೆ, ಕಾರಂತರು ಆ ಮುದುಕಿಯ ಮೂಲಕ ಚೋಮನಿಗೆ ಭೂಮಿ ದೊರೆಯದ ಹಾಗೆ ಮಾಡಿದರು. ಜೊತೆಗೆ ಆ ತಾಯಿಯಲ್ಲಿ ಮಗನ ಮೇಲೆ ಅಪಾರವಾದ ಪ್ರೀತಿ, ಅವನ ಯಶಸ್ಸನ್ನು ಕಾಣುವ ಉದ್ದೇಶವನ್ನು ಹೊಂದಿದ್ದಳು.

ಅಡಿ ಟಿಪ್ಪಣಿ

೧.ಕಾರಂತರ ಮಂಥನ, ಸಂ.ಟಿ.ಪಿ.ಅಶೋಕ, ಪುಟ-೪೧೭
೨. ಚೋಮನದುಡಿ, ಶಿವರಾಮಕಾರಂತ, ಪುಟ-೨೨
೩. ಅದೇ ಪುಟ-೪೬,
೪. ಕಾರಂತರ ಮಂಥನ, ಸಂ.ಟಿ.ಪಿ.ಅಶೋಕ, ಪುಟ-೪೧೭
೫. ಚೋಮನದುಡಿ, ಶಿವರಾಮಕಾರಂತ, ಪುಟ-೨೨
೬.ಅದೇ ಪುಟ-೪೬

೩.ಕಾರಂತರು ಕಾಣಿಸುವ ಮಹಿಳಾ ಲೋಕ-

ಡಾ.ಬಿ.ಎನ್.ಸುಮಿತ್ರಾಬಾಯಿ

ಈ ಒಂದು ಲೇಖನವೂ ಕಾರಂತರ ಒಟ್ಟು ಕಾದಂಬರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿದೆ. ಆದರೆ ನಾನು ಅಧ್ಯಯನ ಮಾಡುವಾಗ ಚೋಮನದುಡಿಯ ಕುರಿತು ಬರೆದಿರುವ ಅಂಶಗಳನ್ನು ಸಂಗ್ರಹಿಸಿಕೊಂಡು ಅಧ್ಯಯನ ಮಾಡುತ್ತಿದ್ದೇನೆ.

ಕಾರಂತರು ತಮ್ಮ ಕಾದಂಬರಿಯಲ್ಲಿ ಹೆಣ್ಣಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಆದ್ದರಿಂದ ಈ ಲೇಖನ ವಿಮರ್ಶೆಯಲ್ಲಿ ಸುಮಿತ್ರಾಬಾಯಿಯವರ 'ಕಾರಂತರು ಕಾಣಿಸುವ ಮಹಿಳಾ ಲೋಕ' ಈ ಲೇಖನವನ್ನು ತನ್ನದೇ ಆದ ಅಂಶಗಳನ್ನು ಸೇರಿಸಿಕೊಂಡು ಅಧ್ಯಯನ ಮಾಡುತ್ತಿದ್ದೇನೆ. ಸುಮಿತ್ರಾಬಾಯಿಯವರ ಹೇಳಿಕೆಯನ್ನು ವಿರೋಧಿಸುತ್ತಿಲ್ಲ. ಅದಕ್ಕೆ ನನ್ನ ಅನಿಸಿಕೆ, ನನ್ನ ಮಾತುಗಳನ್ನು ಸೇರಿಸಿಕೊಂಡಿದ್ದೇನೆ.

"ಕಾರಂತರ ಕಾದಂಬರಿಗಳೊಳಗೆ ಮೈತಳೆಯುವ ಬದುಕಿನ ಅನುಭವದ್ರವ್ಯಗಳಾಗಲೀ ಅಂತಹ ಬದುಕಿನ ಪಾಲುದಾರರಾದ ಸ್ತ್ರೀಯರು ಮತ್ತು ಪುರುಷರಾಗಲೀ ಒಂದು ನಿರ್ಧಿಷ್ಟವಾದ ಸಾಂಸ್ಕೃತಿಕ ಪರಿಸರದ ಕೇವಲ ಯಥಾವತ್ತಾದ ಪ್ರತಿಬಿಂಬಗಳಲ್ಲ. ಬದುಕಿನ ಬಗ್ಗೆ, ಬದುಕನ್ನು ಅರ್ಥವತ್ತಾಗಿಸುವ ಬಗ್ಗೆ ಕಾರಂತರು ಹೊಂದಿರುವ ಧೃಡವಾದ ನಂಬಿಕೆಗಳು, ಧೋರಣೆಗಳು ಮತ್ತು ದೃಷ್ಟಿಕೋನಗಳ ಮೂಲಕ ವಿಶಿಷ್ಟ ಸಂಸ್ಕರಣ ಪಡೆದೇ ಕಾದಂಬರಿಗಳಲ್ಲಿನ ಅನುಭವಗಳು ಮತ್ತು ಪಾತ್ರಗಳು ಸೃಷ್ಟಿಯಾಗಿರುತ್ತವೆ. ಆದ್ದರಿಂದ ಕಾರಂತರ ಕಾದಂಬರಿಗಳಲ್ಲಿ ಕಾಣುವ ಮಹಿಳೆಯರನ್ನು ಕುರಿತು ಅಭ್ಯಾಸ ಮಾಡುವುದು ಎಂದರೆ ಅವರ ಕಾದಂಬರಿಗಳಲ್ಲಿನ ಪುರುಷರನ್ನು, ಸಮಾಜವನ್ನು, ಬದುಕಿನ ಮೌಲ್ಯಗಳನ್ನೂ ಕುರಿತ ಅಭ್ಯಾಸ ಕೂಡ ಆದಾಗಿರುತ್ತದೆ[1]".

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಕಾರಂತರ ಕಾದಂಬರಿಯಲ್ಲಿ ಬರುವ ನೈಜವಾದ ಅಂಶಗಳನ್ನು ಹೇಳಿದ್ದಾರೆ. ಏಕೆಂದರೆ, 'ಚೋಮನದುಡಿ' ಕಾದಂಬರಿಯಲ್ಲಿ ಬರುವ ಕಥಾವಸ್ತು ಅವರ ಸ್ವಂತ ಅನುಭವವಾಗಿಲ್ಲ. ಇದರ ಬಗ್ಗೆ

ಚರ್ಚೆಗಳು ನಡೆದಿವೆ ಅಂದರೆ ಕಾರಂತರ ಸ್ವಂತ ಅನುಭವ ಅದು ಅಲ್ಲ. ಅಲ್ಲದೆ ಕಾರಂತರು ಮೂಲತಃ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಆದರೆ, ಕಾರಂತರು ದಲಿತ ಕುಟುಂಬದಲ್ಲಿ ಜನಿಸಿದ್ದರೇ ಸ್ವಂತ ಅನುಭವವೇ ಆಗುತ್ತಿತ್ತು. ಚೋಮನ ನೋವುಗಳು ಕಾರಂತರ ನೋವಾಗುತ್ತಿತ್ತು. ಆದ್ದರಿಂದ ಕಾರಂತರು ಚೋಮನದುಡಿಯನ್ನು ಅನುಭವಿಸಿ ಬರೆದಷ್ಟು ಹತ್ತಿರದಿಂದ ಬರೆದಿಲ್ಲ ಎಂದು ಟೀಕಾ ಪ್ರವಾಹಗಳೇ ಹರಿದು ಬಂದವು. ಹಾಗಾದರೆ ಕಾರಂತರು ಬರೆದದ್ದೇ ತಪ್ಪಾಯಿತೇ?ಅಥವಾ ಬರೆಯಬಾರದಾಗಿತ್ತಾ? ಕಾರಂತರು ಚೋಮನ ಬಗ್ಗೆ ಆಲೋಚನೆ ಮಾಡಿರುವುದು, ಚೋಮನಿಗೆ ಭೂಮಿಯನ್ನು ದೊರಕಿಸಿಕೊಡುವ ಪ್ರಯತ್ನವೇ ಕಾರಂತರ ವಿಶಿಷ್ಟ ವ್ಯಕ್ತಿತ್ವವನ್ನು ತೋರಿಸುತ್ತದೆ, ಚೋಮನಂತಹವರ ಬಗ್ಗೆ ಇದ್ದ ಕಾಳಜಿಯನ್ನು, ಆಸಕ್ತಿಯನ್ನು ತೋರಿಸುತ್ತದೆ.

ಇದರಂತೆಯೇ ಚೋಮನದುಡಿ ಕಾದಂಬರಿಯಲ್ಲಿ ಬರೀ ಸ್ತ್ರೀಯರ ಜೀವನವನ್ನಾಗಲೀ ಅಥವಾ ಪುರುಷರ ಜೀವನವನ್ನಾಗಲೀ ಸೃಷ್ಟಿಸದೇ ಅವರು ಹೊಂದಿದ ಧೋರಣೆಗಳನ್ನು ಸೇರಿಸಿಕೊಂಡು ಅವರ ದೃಷ್ಟಿಕೋನಗಳ ಮೂಲಕ ವಿವೇಚನೆ ನಡೆಸಿ ಪಾತ್ರಗಳನ್ನು ಸೃಷ್ಟಿ ಮಾಡಿರುವುದು ಸತ್ಯದ ಸಂಗತಿ. ಸ್ತ್ರೀಯರನ್ನು ಅಧ್ಯಯನ ಮಾಡಿದಾಗ ಪುರುಷರ, ಸಮಾಜದ ಅರಿವು ಆಗುವುದು ಎಂದಿದ್ದಾರೆ ಆದರೆ ಚೋಮನದುಡಿಯಲ್ಲಿ ಚೋಮನ ಪಾತ್ರವೇ ಮುಖ್ಯವಾಗಿದೆ, ಆ ಪಾತ್ರದ ಮೂಲಕ ಇಡೀ ಕಾದಂಬರಿಯೇ ಪ್ರತಿಬಿಂಬವಾಗಿದೆ. ಸ್ತ್ರೀ ಪಾತ್ರಗಳಿವೆ ಆದರೆ ಚೋಮನ ಪಾತ್ರ ಬಂದಾಗ ಅವು ಅಷ್ಟು ಪ್ರಜ್ವಲಿಸುವುದಿಲ್ಲ.

ಆದರೂ ಚೋಮನದುಡಿ ಕಾದಂಬರಿಯಲ್ಲಿ ಎರಡೇ ಎರಡು ಮಹಿಳಾ ಪಾತ್ರಗಳು ಗೋಚರವಾಗಿವೆ. ಒಂದು ನವಪೀಳಿಗೆಯ ಮಹಿಳೆಯಾದರೆ ಇನ್ನೊಂದು ಮಹಿಳಾಪಾತ್ರ ಪುರಾತನ ಪೀಳಿಗೆಯದು. ಈ ಎರಡು ಪಾತ್ರಗಳು ಒಂದಕ್ಕೊಂದು ವಿರುದ್ಧವಾಗಿವೆ. ಒಂದು ಪಾತ್ರವೂ ಬ್ರಾಹ್ಮಣತ್ವದ ಪ್ರತೀಕವಾದರೇ ಇನ್ನೊಂದು ಪಾತ್ರವೂ ದಲಿತತ್ವದ ಪ್ರತೀಕವಾಗಿದೆ.

"ಆರ್ಥಿಕ ದಾಸ್ಯ ಅದರಿಂದ ಹುಟ್ಟಿದ ಲೈಂಗಿಕವಾಗಿ ಸುಲಭವಾಗಿ ಘಾಸಿಯಾಗಿಬಿಡಬಹುದಾದ ಹೆಣ್ಣಿನ ನೆಲೆಗಳ ದುರಂತ ಸ್ಥಿತಿಯನ್ನು ಬೆಳ್ಳಿ

ಪ್ರತಿನಿಧಿಸುತ್ತಾಳೆ. ಮನ್ವೇಲರಂತಹ ಕಚ್ಚೆಹರುಕತನಕ್ಕೆ ಸುಲಭವಾಗಿ ಬಲಿಬೀಳುವ ಸಾಧ್ಯತೆ ಈ ಕೂಲಿಯಾಳುಗಳ ಹೆಣ್ಣುಗಳ ಬದುಕನ್ನು ಸದಾ ಕಾಡುವ ಅಂಶ.[2] "

ಬಡತನ ಎಂಬುದು ಮನುಷ್ಯನನ್ನು ಕಿತ್ತು ತಿನ್ನುವ ನರಭಕ್ಷಕ. ಬೆಳ್ಳಿಗೆ ಸುತ್ತುವರಿದಿದ್ದ ಬಡತನದಿಂದ ಇಡಿ ಕುಟುಂಬವೇ ಹರಿದುಹೋಗಿತ್ತು.ಬಡತನದಿಂದ ಅವರ ಹೊಟ್ಟೆ ತುಂಬಿಸುವುದೇ ಕಷ್ಟವಾಗಿತ್ತು.ಅದರಲ್ಲಿ ಬೆಳ್ಳಿಯ ಮದುವೆ ಮಾಡುವುದು ದೂರದ ಸಂಗತಿಯಾಗಿತ್ತು. ಚೋಮನಿಗೆ ವಯಸ್ಸಿಗೆ ಬಂದಿರುವ ಮಗಳಿದ್ದಾಳೆ ಎಂಬುದು ಮರೆತ ಹಾಗಿತ್ತು. ಕಾಮ ಎಂಬುದು ಮನುಷ್ಯನ ಸಹಜ ಲಕ್ಷಣ, ಅಂತಹುದರಲ್ಲಿ ಬೆಳ್ಳಿ ಅದಕ್ಕೆ ಬಲಿಯಾದದ್ದು ಗಂಭೀರ ವಿಷಯವಲ್ಲ, ಮನ್ವೇಲನು ಅಲ್ಲಿ ಪ್ರವೇಶಿಸದೇ ಇದ್ದಿದ್ದರೇ ಬೆಳ್ಳಿ ಚೋಮನ ಪಾಲಿಗೆ ಮಗಳಾಗಿಯೇ ಇರುತ್ತಿದ್ದಳು. ಮನ್ವೇಲನು ಕೊಡುತ್ತಿದ್ದ ಒಂದಾಣೆ ಎರಡಾಣೆಗೋಸ್ಕರ ಆಸೆ ಪಟ್ಟು ತನ್ನ ಶೀಲವನ್ನೇ ಧಾರೆ ಎರೆದಳು.

ಸಾಮಾನ್ಯವಾಗಿ ತೋಟದ ನಾಡಿನಲ್ಲಿ ಇಂತಹ ಹೇಯವಾದ ಕೃತ್ಯಗಳು ಈಗಲೂ ಸಹ ಕಂಡುಬರುತ್ತಿದೆ. ಬೆಳ್ಳಿಯಂತಹ ಅಮಾಯಕ ಹೆಣ್ಣು ಮಕ್ಕಳು ಯಾರಿಗೂ ಕಾಣದ ಹಾಗೇ ಬಲಿಪಶುಗಳಾಗುತ್ತಿದ್ದಾರೆ. ಬಲಿಪಶುಗಳಾಗಲು ಮುಖ್ಯ ಕಾರಣ ಬಡತನ.

ಗಂಡು ತನ್ನ ಕಾಮದ ಬಯಕೆಯನ್ನು, ಪ್ರೇಮದ ಆಶ್ರಯವನ್ನು ಪಡೆಯುವುದು ಕಷ್ಟವಲ್ಲ. ಅದೇ ಹೆಣ್ಣು ಅದನ್ನು ಅರಸಿ ಬಂದರೇ ಸಮಾಜವೂ ಅವಳನ್ನು ಕೆಟ್ಟದೃಷ್ಟಿಯಿಂದ ನೋಡುವುದು ಸಹಜ. ಹೊರಗಿನ ಪ್ರಪಂಚ ತನ್ನ ತಂದೆ ತಾಯಿ, ಅಣ್ಣ ತಮ್ಮಂದಿರೇ ಬಹಳ ಕೀಳು ಮಟ್ಟದಲ್ಲಿ ನೋಡುವರು. ಗಂಡಾಗಲೀ ಹೆಣ್ಣಾಗಲೀ ಕಾಮ–ಪ್ರೇಮ ಇದ್ದೇ ಇರುತ್ತದೆ. ಅದನ್ನು ಸರಿಯಾದ ಮಾರ್ಗದಲ್ಲಿ ಸಿಗದೇ ಇದ್ದಾಗ ಕೆಟ್ಟದಾರಿಯನ್ನು ಹಿಡಿಯುವುದು ಸಹಜ ಪ್ರವೃತ್ತಿ. ಇಲ್ಲಿ ಚೋಮನ ಮಗನಾದ ಗುರುವನು ನನಗೆ ಇಷ್ಟವಾದ ಮೇರಿಯಿಂದ ಪ್ರೇಮದ ದಾಹವನ್ನು ತೀರಿಸಿಕೊಂಡನು. ಆ ದಾಹ ಬೆಳ್ಳಿಗೆ ಇರುವುದಿಲ್ಲವೇ? ಬೆಳ್ಳಿಗೆ ಇತ್ತು, ಅದನ್ನು ಯಾರಿಗೂ ಕಾಣದ ಹಾಗೇ ಇಟ್ಟಿದ್ದಳು, ಏಕೆಂದರೆ ಆರ್ಥಿಕ ಪರಿಸ್ಥಿತಿ ಸರಿಯಿರಲಿಲ್ಲ, ಕೊನೆಗೆ ಮನ್ವೇಲನಿಂದ ಕಾಮದ ದಾಹವನ್ನು ತೀರಿಸಿಕೊಂಡಳು,ಚೋಮನು ಬೆಳ್ಳಿಯನ್ನು

ಕೊನೆಗೆ ದ್ವೇಷಿಸಿದರೂ ಸಹ ಅದು ತಾನೇ ಮಾಡಿದ ತಪ್ಪು, ತಾನೇ ಆ ಜಾಗದಲ್ಲಿ ಇದ್ದರೇ ಹಾಗೇ ಮಾಡುತ್ತಿದೆ ಎಂದು ಸಮಾಧಾನ ಮಾಡಿಕೊಂಡು ಕೊನೆಯ ಉಸಿರು ಎಳೆಯುವನು.

ಒಂದು ಹೆಣ್ಣಿನ ಮನಸ್ಸು ಅಪಾರ ಆಸೆ-ಆಕಾಂಕ್ಷೆಗಳನ್ನು ಕಟ್ಟಿರುತ್ತದೆ. ತನ್ನದೇ ಆದ ಕುಟುಂಬ ಗಂಡ, ಮಕ್ಕಳು ನಮ್ಮದೇ ಜೀವನ. ಇದನ್ನು ಪಡೆಯಲು ಸಾಧ್ಯವಿಲ್ಲ ಎಂದು ತಿಳಿದಾಗ ಜೀವನದ ಬಗ್ಗೆ ಜಿಗುಪ್ಸೆಯನ್ನು ಹೊಂದಿ ವಿಧಿ ಇಲ್ಲದೇ ತಪ್ಪು ದಾರಿಯನ್ನು ಹಿಡಿಯುವುದು ಅನಿವಾರ್ಯ ಎಂಬ ಭಾವನೆ ಮೂಡುವುದು. ಇಂತಹ ಪರಿಸ್ಥಿತಿ ಬೆಳ್ಳಿಯ ಮನಸ್ಸಿನಲ್ಲಿ ಮೂಡಿರಬಹುದು.

"ಕಾರಂತರು ಮನುಷ್ಯರನ್ನು ತಮ್ಮ ಪರಿಸರದ ಕೂಸುಗಳೆಂದು ಕಾಣುತ್ತಾರೆ ಅಂತಹ ಮನುಷ್ಯರ ಯಾವುದೇ ಅನುಭವ ನಿರ್ಧಿಷ್ಟ ಪರಿಸರದಲ್ಲೇ ಮೈತಳೆಯುವಂಥದ್ದಾಗಿರುತ್ತದೆ. ಪರಿಸರದಲ್ಲಿನ ತುಂಬಾ ಸಂಕೀರ್ಣವಾದ, ಒಳವಿರೋಧಗಳಿಂದ ಕೂಡಿದ ಬದುಕುಗಳ ವಿವಿಧ ಪದರಗಳನ್ನು ವಿಶಿಷ್ಟ ರೀತಿಯ ವಾಸ್ತವವಾದಿ ನೆಲೆಯಲ್ಲಿ ಗ್ರಹಿಸುತ್ತಾ ತಮ್ಮ ವಿಚಾರವಾದಿ ಮನೋಧರ್ಮದ ಮೂಲಕ ಅವುಗಳನ್ನು ಚಿಕಿತ್ಸೆಗೆ ಒಳಪಡಿಸುತ್ತಾ, ಆಯಾ ಸಂದರ್ಭಗಳಲ್ಲಿ ಆಯಾ ವ್ಯಕ್ತಿಗಳಲ್ಲಿನ ವೈರುಧ್ಯಗಳನ್ನು ಬಿಡದೆ ದಾಖಲಿಸುತ್ತಾರೆ.[2] ".

ಕಾರಂತರು ಪ್ರಕೃತಿಯ ಮಗು, ಪ್ರಕೃತಿ ಎಂಬ ತಾಯಿಯ ಮಡಿಲಿನಲ್ಲಿ ಜನಿಸಿದವರು. ಕಾರಂತರ ಪ್ರಕೃತಿಯ ಸಂಬಂಧ ಬಿಡಿಸಲಾಗದ ಸಂಬಂಧ. ಅವರ ಪ್ರತಿಯೊಂದು ಕಾದಂಬರಿ, ನಾಟಕಗಳಲ್ಲಿ ಪ್ರಮುಖವಾಗಿ ಕಾಣುವುದೇ ಪ್ರಕೃತಿ ಸನ್ನಿವೇಶ. ಪಾತ್ರಗಳನ್ನು ಪ್ರಕೃತಿಯ ನಡುವೆ ನಡೆಸುವರು. ಬೆಟ್ಟಗುಡ್ಡಗಳಲ್ಲಿ ನಡೆದಾಟ, ಸುತ್ತಾಟ, ಮಳೆ, ಪ್ರಕೃತಿ ವರ್ಣನೆ ಇಲ್ಲದ ಕಾದಂಬರಿಯೇ ಇಲ್ಲ. ಹೊಸಗನ್ನಡ ಸಾಹಿತ್ಯದಲ್ಲಿ ಕುವೆಂಪು, ಶಿವರಾಮಕಾರಂತರನ್ನು ಬಿಟ್ಟರೆ ಇಷ್ಟು ಸೊಗಸಾಗಿ ಪ್ರಕೃತಿಯನ್ನು ಸಾಹಿತ್ಯದಲ್ಲಿ ಬೆರೆಸಿಕೊಂಡವರು ಬೇರೊಬ್ಬರಿಲ್ಲ.

ಪ್ರಕೃತಿಯಲ್ಲಿ ಜನಿಸಿ ಬಂದವರ ಕಥೆಗಳನ್ನು ಅನುಭವಗಳನ್ನು, ನೋವುಗಳನ್ನು, ಮಿಡಿತಗಳನ್ನು ತಮ್ಮ ಬರವಣಿಗೆಯಲ್ಲಿ ಬರೆಯುವುದು ಕಾರಂತರೊಬ್ಬರಿಂದ ಮಾತ್ರ. ಆ ಪ್ರಕೃತಿಯಲ್ಲಿಯೇ ಹಲವಾರು ಜನರ ಅಂದರೆ ಸ್ತರಗಳ

ಜನರ ಬದುಕು ಬದಲಾವಣೆಗಳನ್ನು ಅಂದರೆ ದಲಿತ ಜನರ ನೋವು-ನಲಿವು, ಬ್ರಾಹ್ಮಣರ ದೌರ್ಜನ್ಯ, ದಬ್ಬಾಳಿಕೆ, ಶೂದ್ರರ ಅಸಹಾಯಕ ಸ್ಥಿತಿಯನ್ನು ಅದರಲ್ಲೂ ಈ ಪ್ರಕೃತಿ ಒಳಭಾಗದಿಂದ ನೋಡಿದ್ದಾರೆ.

ಶಿವರಾಮಕಾರಂತರು ತಮ್ಮ ಆಲೋಚನೆಗೆ ಬಂದ ವಿಚಾರಗಳನ್ನು ಧೈರ್ಯದಿಂದ ಬರೆಯುತ್ತಿದ್ದರು. ಸ್ವತಃ ಅವರು ಬ್ರಾಹ್ಮಣ ಕುಟುಂಬಕ್ಕೆ ಜನಿಸಿದವರು. ಆದರೂ ಬ್ರಾಹ್ಮಣರ ದೌರ್ಜನ್ಯ, ದಬ್ಬಾಳಿಕೆಯನ್ನು ಖಂಡಿಸಿ ಬರೆದಿದ್ದಾರೆ. ಹಾಗೆಯೇ ತಮ್ಮ ಕಾದಂಬರಿಯಲ್ಲಿ ಸ್ತ್ರೀಯರ ಪಾತ್ರಗಳನ್ನು ಅರ್ಥಪೂರ್ಣವಾಗಿ ಸೃಷ್ಟಿಸಿದ್ದಾರೆ. ಒಬ್ಬ ಮಹಿಳಾ ಲೇಖಕಿಯೂ ಇಷ್ಟು ವೈಚಾರಿಕವಾಗಿ ಮಹಿಳೆಯ ಸಮಸ್ಯೆಯನ್ನು ಕಟ್ಟಿಕೊಡುವುದಿಲ್ಲ. ಅದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಈ ಸ್ತ್ರೀ ಪಾತ್ರಗಳಿಗೆ ಮೀಸಲಿರಿಸಿದ್ದಾರೆ.

ಈ ಕಾದಂಬರಿಯಲ್ಲಿ ದುಡಿಮೆಗಾಗಿ ಹಾಗೂ ಚೋಮ ಮಾಡಿದ ಸಾಲವನ್ನು ತೀರಿಸಲು ಬೆಳ್ಳಿ ಕರಾವಳಿಯಿಂದ ಮಲೆನಾಡಿನ ತೋಟಗಳಿಗೆ ವಲಸೆ ಹೋಗುವಳು. ಆದರೆ, ತೋಟದ ಸೆರೆಗಾರನ ಕೈಗೆ ಸಿಕ್ಕಿ ಅಸಹಾಯಕಳಾಗುತ್ತಾಳೆ. ಇಲ್ಲಿ ಗಮನಿಸಬೇಕಾದದ್ದು ಅಂದರೆ ಬೆಳ್ಳಿಯ ಮೇಲಿನ ದೌರ್ಜನ್ಯ. ಅವಳ ವನತಿ ಇದು ಬರೀ ಬೆಳ್ಳಿ ಒಬ್ಬಳ ದೌರ್ಜನ್ಯ, ಅವನತಿ ಅಲ್ಲ ಇಡೀ ದಲಿತ ಹೆಣ್ಣುಮಕ್ಕಳ ದೌರ್ಜನ್ಯ ಮತ್ತು ಅವನತಿ. ಈ ರೀತಿಯ ಸನ್ನಿವೇಶವನ್ನು ಕುವೆಂಪುರವರ ಕಾದಂಬರಿಗಳಲ್ಲಿ, ತೇಜಸ್ವಿಯವರ ಕಥೆ, ಕಾದಂಬರಿಗಳಲ್ಲಿ ನೋಡಬಹುದು. ಆದರೂ ಕಾರಂತರಿಗಾಗಿರುವ ಸ್ತ್ರೀ ಲೋಕದ ಮೇಲಿನ ಪ್ರೀತಿ ಗೌರವ ಕನ್ನಡ ಸಾಹಿತ್ಯದಲ್ಲಿಯೇ ಅನನ್ಯ ಮತ್ತು ಅಪರೂಪವಾದದ್ದು.

ಕಾರಂತರ ಮನೋಧರ್ಮ ವಾಸ್ತವತಾವಾದಕ್ಕೆ ಸಹಜವಾಗಿ ಹೊಂದಿಕೊಳ್ಳುವಂತಹುದು. ಮನುಷ್ಯನ ಮನುಷ್ಯತ್ವ ಸ್ವಭಾವದಲ್ಲೇ ವಾಸ್ತವ್ತಾವಾದದ ಅಂಶಗಳು ಅಡಗಿರುವುದರಿಂದ ಮನುಷ್ಯತ್ವಕ್ಕೂ ವಾಸ್ತವಕ್ಕೂ ಹತ್ತಿರದ ಸಂಬಂಧ ಇದೆ.

ಕೆಲವೊಮ್ಮೆ ವಾಸ್ತವತಾವಾದದ ಚೌಕಟ್ಟು ಬದುಕಿನ ಕೆಲವು ಮುಖ್ಯ ಅಂಶಗಳನ್ನು ಹೊರಗಿಡುವುದರ ಬಗ್ಗೆ ಅದು ಜೀವನವನ್ನು ಗ್ರಹಿಸುವ ಕ್ರಮದ ಬಗ್ಗೆ ಚಿತ್ರಿಸುವ ರೀತಿಯ ಬಗ್ಗೆ ಅಸಮಾಧಾನದ ಅಲೆಗಳು ಏಳಲು ಆರಂಭವಾದವು. ಭೌತಿಕ

ಬದುಕಿನ ಆಚೆ ಇರುವ ಅನುಭವದ ಲೋಕವನ್ನು ಆಧ್ಯಾತ್ಮಿಕ ಪ್ರಪಂಚವನ್ನು ಅದು ಒಳಗೊಳ್ಳಲಿಲ್ಲ. ವಾಸ್ತವತಾವಾದದ ಮಿತಿಯನ್ನು ಮೀರಿರುವ ಸನ್ನಿವೇಶವನ್ನು ಚೋಮನದುಡಿ ಕಾದಂಬರಿಯಲ್ಲಿ ನೋಡಬಹುದು-ಚೋಮನದುಡಿ ಒಂದು ಸಾಂಸ್ಕೃತಿಕ ಅಭಿವ್ಯಕ್ತಿ.ಚೋಮನ ಮನಸ್ಸಿನಲ್ಲಿ ಇರುವ ದುಗುಡ ಹತಾಶೆಗಳಿಗೆ ಸಂಕೇತವಾಗಿ ಬರುವ ದುಡಿ ಕೊನೆಯಲ್ಲಿ ದುರಂತದ ಆಯಾಮವನ್ನು ಪಡೆಯುತ್ತ್ದೆ. 'ದುಡಿ'ಯು ಚೋಮನ ನೋವಿನ ಸಂಕೇತದ ಜೊತೆಗೆ ಆ ನೋವಿನ ಒಳಗೆ ಅಡಗಿರುವ ಅಸಹಾಯಕತೆಯನ್ನು ತೋರಿಸುತ್ತದೆ.

ಕಾರಂತರ ಒಟ್ಟು ಕಾದಂಬರಿಯನ್ನಿಟ್ಟು ಹೇಳುವುದಾದರೆ ಶಕ್ತಿಶಾಲಿಗಳು ಬಲಹೀನರನ್ನು ಅಂಕೆಯಲ್ಲಿರಿಸಿಕೊಂಡು ಆಡುವ ಆಟಗಳು, ವಿವಿಧ ಚರ್ಯೆಗಳು ಅವರ ಕುತೂಹಲವನ್ನು ಬಹಳಷ್ಟು ಕೆರಳಿಸಿವೆ. ಹೆಣ್ಣು ಗಂಡು ಸೇರಿಯೇ ಆಗುವ ಮನುಕುಲದ ಚರಿತ್ರೆಯಲ್ಲಿ ಕುಟುಂಬ ವ್ಯವಸ್ಥೆ, ಲೈಂಗಿಕ ಸಂಬಂಧ, ಆರ್ಥಿಕ ಒಡೆತನದ ಹಿನ್ನೆಲೆಯಲ್ಲಿ ಯಜಮಾನ ಪದ್ಧತಿ ಇವುಗಳೇ ಅಲ್ಲದೆ ಅನೇಕ ವಿಷಯಗಳು ಅವರ ನಿರಂತರ ಅಧ್ಯಯನದ ನೆಲೆಗಳಾಗಿವೆ. ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವ ಮಾವವ ಪ್ರಾಣಿಯ ಬದುಕಿನಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧದ ನಿಜದ ನೆಲೆ ಯಾವುದು ಎಂದು ಅರಸುತ್ತ ಹೊರಟ ಕಾರಂತರಿಗೆ ಗೋಚರಿಸಿದ ಸತ್ಯಗಳನ್ನು ಮುಚ್ಚುಮರೆಯಿಲ್ಲದೆಯೇ ದಾಖಲಿಸಿದ್ದಾರೆ.

ಈ ಮಾತುಗಳನ್ನು ನೋಡಿದಾಗ ಕಾರಂತರು ಭಾರತೀಯ ನಾರಿಯ ಆದರ್ಶದ ಕಲ್ಪನೆಯನ್ನು ಇರಿಸಿಕೊಂಡು ಹೊರಡುವುದಿಲ್ಲ. ಪ್ರಾದೇಶಿಕ ಆವರಣ ಅವರ ಕಾದಂಬರಿಗಳಲ್ಲಿ ದಟ್ಟವಾಗಿ ಕಾಣಿಸಿಕೊಳ್ಳುತ್ತದೆ. ಹಾಗೆಯೇ ತ್ಯಾಗ, ಸಹಿಷ್ಣುತೆ, ಜೀವನ, ಪ್ರೀತಿಗಳ ಸಾಕಾರಮೂರ್ತಿಗಳಾಗಿ ಅವರ ಹಲವು ಸ್ತ್ರೀಪಾತ್ರಗಳು ಕಾಣಿಸಿಕೊಳ್ಳುತ್ತವೆ.

ಧರ್ಮ, ದೇವರು, ಆಧ್ಯಾತ್ಮ ಇವುಗಳ ಯಜಮಾನಿಕೆಯ ಸೂತ್ರ ಹಿಡಿದಿರುವ ಪುರೋಹಿತಶಾಹಿ ವ್ಯವಸ್ಥೆಯನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಅದನ್ನು ಸದೆ ಬಡಿಯಬೇಕಾದ ಅಗತ್ಯವನ್ನು ಕುವೆಂಪು ಪ್ರತಿಪಾದಿಸುತ್ತಾರೆ. ಧರ್ಮ, ದೇವರು, ಆಧ್ಯಾತ್ಮದ ಹೆಸರಿನಲ್ಲಿ ನಡೆಯುತ್ತಿರುವ ಅನೈತಿಕ ವ್ಯವಹಾರ, ಶೋಷಣೆ ಇವು

ಸಂಬಂಧಪಟ್ಟ ವ್ಯಕ್ತಿಗಳ ಶೀಲ ಭ್ರಷ್ಟತೆಯ ಪರಿಣಾಮ ಎಂದು ವ್ಯಾಖ್ಯಾನಿಸಿಕೊಳ್ಳುವ ಕಾರಂತರು ಅದಕ್ಕೆ ಸಾಧು ಸನ್ಯಾಸಿಗಳನ್ನು ಗುರಿಯಾಗಿಸುತ್ತಾರೆ. ಪುರೋಹಿತಶಾಹಿ ವ್ಯವಸ್ಥೆಯೇ ಈ ಶೀಲ ಭ್ರಷ್ಟತೆಯ, ಶೋಷಣೆಯ ವ್ಯವಹಾರವನ್ನು ಹುಟ್ಟು ಹಾಕುವ ಬೆಳೆಸುವ ಕೇಂದ್ರವಾಗಿದೆ ಎಂದು ಹೇಳುವ ಕುವೆಂಪು ಮತ ಧಾರ್ಮಿಕ ಮತ ಮಾನ್ಯಗಳನ್ನು ಗುರಿಯಾಗಿಸಿಕೊಳ್ಳುತ್ತಾರೆ.

ಕಾರಂತರು ಸಾಧು ಸನ್ಯಾಸಿಗಳ ಬಗ್ಗೆ ಬರೆದಿರುವಲ್ಲೆಲ್ಲ ನೀತಿ ಭ್ರಷ್ಟತೆಯ ವಿಷಯಕ್ಕೆ ಸೀಮಿತವಾಗಿರುವುದರಿಂದ ಧರ್ಮ, ದೇವರು, ಆಧ್ಯಾತ್ಮ ಕುರಿತು ತಾತ್ವಿಕ ಚಿಂತನೆಯ ನೆಲೆಯ, ಸಂಸ್ಕೃತಿಯ ಚಿಂತನೆಯ ನೆಲೆಯ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ; ಆಳವಾಗಿ ಪರಿಶೀಲಿಸುವುದಿಲ್ಲ.

ಸಾಧು ಸನ್ಯಾಸಿಗಳು, ಮಠಾಧಿಪತಿಗಳು, ಮತಧಾರ್ಮಿಕ ನಂಬಿಕೆ, ಆಚಾರ, ವಿಚಾರಗಳಿಗೆ ಸಂಬಂಧಿಸಿದಂತೆ ಶ್ರದ್ಧಾ ನಿಷ್ಠೆಗಳಿಂದ ನಡೆದುಕೊಳ್ಳುವವರಾದರೆ ಕಾರಂತರಿಗೆ ಅವರೊಂದಿಗೆ ತಾತ್ವಿಕ ಜಗಳವೇನಿಲ್ಲ. ಕಾರಂತರು ತಮ್ಮ ಕಾದಂಬರಿಗಳಲ್ಲಿ ಮೇಲಿಂದ ಮೇಲೆ ಬರುವ ಮುದುಕಿಯರನ್ನು ಮೆಚ್ಚಿ, ಒಪ್ಪಿ ಚಿತ್ರಿಸುವಂತೆ ಅವರನ್ನೂ ಚಿತ್ರಿಸಬಹುದಾದವರು, ಅವರವರ ನಂಬಿಕೆ ಅವರವರಿಗೆ ಎಂಬ ಉದಾರವಾದೀ ದೃಷ್ಟಿ ತಳೆಯಬಹುದಾದವರು.

"ಕಾರಂತರು ತಮ್ಮ ಕಾದಂಬರಿಯಲ್ಲಿ ಬ್ರಾಹ್ಮಣ ಸಮುದಾಯ ಗೃಹಿಣಿಯರ ಬದುಕುಗಳೇ ಹೆಚ್ಚು ಖಚಿತವಾಗಿ ಭಿನ್ನ ಜಾತಿ, ವರ್ಗ, ಬುಡಕಟ್ಟುಗಳಲ್ಲಿನ ಹೆಣ್ಣುಗಳ ಬದುಕುಗಳನ್ನು ಅವರು ಕಾಣಿಸುತ್ತಾರೆ. 'ಚೋಮನದುಡಿ'ಯ ಬೆಳ್ಳಿ ಹರಿಜನರಲ್ಲೇ ಅತ್ಯಂತ ನಿಕೃಷ್ಟವಾದ ಪಂಗಡವೊಂದರಲ್ಲಿ ಹುಟ್ಟಿದ ಚೋಮನ ಮಗಳಾಗಿ, ತಂದೆಯ ಜೀತದಾಳಿನ ನೆಲೆಯಿಂದ ಹುಟ್ಟಿದ ದಾಸ್ಯದ ನೆಲೆಯಲ್ಲಿ ತಂದೆಯ ತಂದೆಯ ಆಸೆಯಂತೆ ಮದುವೆಯಾಗಿ ಸಂಸಾರ ಮಾಡುವ ಸಾಧ್ಯತೆಯೇ ದಕ್ಕದಾದಾಗ ತನ್ನ ಹುಟ್ಟು ಬೆಳೆದ ನೆಲದಿಂದ ದೂರವಾಗಿ ಕಾಫಿತೋಟದ ಕೂಲಿಗಾರಳಾಗಿ ದಣಿಯದ ಮನ್ವೇಲನಿಗೆ, ಲೈಂಗಿಕ ಬಲಿಪಶುವಾಗುವುದಲ್ಲದೇ ಅವನ ಮುಷ್ಟಿಗೆ ಬಿದ್ದು, ಮೈಮಾರಿಕೊಳ್ಳುವ ನೆಲೆಗೆ ತಳ್ಳಲ್ಪಡುತ್ತಾಳೆ.[೪]".

ಕಾರಂತರು ಬ್ರಾಹ್ಮಣತ್ವವನ್ನು ಎಷ್ಟೇ ವಿರೋಧ ಮಾಡಿರಬಹುದು ಆದರೆ ಅವರಿಗೆಯೇ ಗೊತ್ತಿಲ್ಲದ ಹಾಗೆ ಬ್ರಾಹ್ಮಣತ್ವದ ಪರವಾಗಿ ಇರುವುದನ್ನು ನೋಡಬಹುದು. ಅಂದರೆ ತಮ್ಮ ಕಾದಂಬರಿಯಲ್ಲಿ ಬ್ರಾಹ್ಮಣ ಮಹಿಳೆಯರ ಮಾತುಗಳೇ ಕೊನೆಗೆ ನಡೆಯುವ ಹಾಗೆ ಮಾಡಿದ್ದಾರೆ. ಬೆಳ್ಳಿ ಹುಟ್ಟಿರುವ ಜಾತಿ ನಿಕೃಷ್ಟವಾದದ್ದೇನೂ ಅಲ್ಲ. ಸಾಮಾನ್ಯವಾದ ಕೆಳ ಜಾತಿ ಅಷ್ಟು ಅದನ್ನು ವಿಶೇಷವಾಗಿ ನಿಕೃಷ್ಟ ಪಂಗಡ ಎಂದು ಹೇಳುವ ಅವಶ್ಯಕತೆ ಇಲ್ಲ. ಬೆಳ್ಳಿಯಲ್ಲಿ ಮೂಡಿರುವ ಆಸೆಗಳು ಸಹಜ, ಸಾಮಾನ್ಯ ಹೆಣ್ಣಿನಲ್ಲಿ ಮೂಡಬಹುದಾದ ಆಸೆ-ಅಕಾಂಕ್ಷೆಯನ್ನು ಬಿಟ್ಟರೇ ಬೇರೇನೂ ಅಲ್ಲ. ಆದನ್ನು ತಪ್ಪು ತಿಳಿಯುವ ಅವಶ್ಯಕತೆ ಏನೂ ಇಲ್ಲ.

ಈಗಿನ ಸಮಾಜದಲ್ಲಿ ಪ್ರತಿಯೊಂದು ಕೆಲಸಗಳಲ್ಲಿ ದುಡಿಯುವ ಮಹಿಳೆಗೆ ಆಗುತ್ತಿರುವ ದೌರ್ಜನ್ಯವೇ ಬೆಳ್ಳಿಗೂ ಸಹ ಆಗುತ್ತಿದೆ. ಸಾಮಾನ್ಯವಾಗಿ ಸಂಘ ಸಂಸ್ಥೆಗಳಲ್ಲಿ, ಕಛೇರಿಗಳಲ್ಲಿ ಮೇಲಧಿಕಾರಿಗಳ ಕಾಮದ ಆಸೆಗೆ ಬಲಿಯಾಗುತ್ತಿದ್ದಾರೆ. ಇಂತಹ ದೌರ್ಜನ್ಯದ ವಿರುದ್ಧ ಮಹಿಳೆಯು ಸಿಡಿದೇಳಬೇಕು, ಪುರುಷರ ದಬ್ಬಾಳಿಕೆಯನ್ನು ಮಟ್ಟಹಾಕಬೇಕು. ಆಗಲೇ ಬೆಳ್ಳಿಯಂತಹ ಎಷ್ಟೋ ಬಡ ಕುಟುಂಬದಲ್ಲಿ ಜನಿಸಿರುವ ಹೆಣ್ಣು ಮಕ್ಕಳಿಗೆ ಸಹಾಯಕವಾಗುವುದು.

ಅಡಿ ಟಿಪ್ಪಣಿ

೧.ಡಾ.ಬಿ.ಎನ್.ಸುಮಿತ್ರಾಬಾಯಿ, ಅಂಗಳದೊಳಗಿನ ಕಡಲು, ಪುಟ-೧೦
೨. ಅದೇ, ಪುಟ-೨೧
೩. ಅದೇ, ಪುಟ-೨
೪. ಅದೇ, ಪುಟ-೨೧

ಈ.ಚೋಮನದುಡಿ ಕಾದಂಬರಿಯಲ್ಲಿ ಗಂಡು-ಹೆಣ್ಣು

-ಟಿ.ಪಿ.ಅಶೋಕ

ಚೋಮನದುಡಿ ಕುರಿತ ಈ ವಿಮರ್ಶಾ ಲೇಖನವೂ ಟಿ.ಪಿ.ಅಶೋಕರಿಂದ ರಚಿಸಲ್ಪಟ್ಟಿದೆ. ಇದನ್ನು ನಾನು ಪುನರ್ ಅಧ್ಯಯನಕ್ಕೆ ತೊಡಗಿಸಿಕೊಂಡಿದ್ದೇನೆ. ಶಿವರಾಮಕಾರಂತರನ್ನು ಬಹಳ ಹತ್ತಿರದಿಂದ ಕಂಡ ವ್ಯಕ್ತಿಗಳಲ್ಲಿ ಅಶೋಕರು ಒಬ್ಬರು. ಇವರು ಕಾರಂತರ ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧ ಯಾವ ರೀತಿ ಎಂಬುದಾಗಿ ಕುರಿತು ಲೇಖನ ರಚನೆ ಮಾಡಿದ್ದಾರೆ.

ಸಾಮಾನ್ಯವಾಗಿ ಒಂದು ಕಾದಂಬರಿ ಅಂದ ಮೇಲೆ ಗಂಡು-ಹೆಣ್ಣಿನ ಸಂಬಂಧ ಇದ್ದೇ ಇರುತ್ತದೆ. ಅದು ಗಂಡ-ಹೆಂಡತಿಯರ ಸಂಬಂಧ ಇರಬಹುದು.ಪ್ರೇಮದ ಸಂಬಂಧ ಇರಬಹುದು, ಒಂದು ಗಂಡಿಗೆ ಒಂದು ಹೆಣ್ಣು, ಒಂದು ಹೆಣ್ಣಿಗೆ ಒಂದು ಗಂಡು, ಇದು ಪ್ರಕೃತಿ ನಿಯಮ. ಇದನ್ನು ಕಾರಂತರು ಕಾದಂಬರಿಗಳಲ್ಲಿ ಸಮರ್ಪಕವಾಗಿ ಬಳಸಿದ್ದಾರೆ.

ಕಾದಂಬರಿಯ ನಾಯಕನಾದ ಚೋಮನ ಹೆಂಡತಿಯ ಸಂಬಂಧ ನೋಡಿದಾಗ (ಹೆಂಡತಿ ಬದುಕಿದ್ದಾಗ) ಅವರ ದಾಂಪತ್ಯವೂ ಹಸನಾಗಿತ್ತು ಎನ್ನುವ ಸೂಚನೆಗಳಿವೆ. "ಚೋಮನ ಕುಟುಂಬದವರೆಲ್ಲಾ ಒಂದು ಹೂವಿನ ಎಸಳುಗಳಲ್ಲಿರುವ ಅನ್ಯೋನ್ಯವಿತ್ತು.ಸತ್ತು ಹೋದ ಹೊಲತಿ ಇದ್ದರೆ ಇನ್ನಷ್ಟು ಚೆಂದವಿತ್ತು". ನನ್ನ ಬೇಸಾಯದ ಆಕಾಂಕ್ಷೆಗಳನ್ನು ಅವರ ಮುಂದೆ ಹೇಳಿಕೊಳ್ಳುವಾಗ ಚೋಮ ನುಡಿಯುತ್ತಾನೆ "ಹೊಲತಿ ಇರುವಾಗಲೇ ನೇಗಿಲು ಹಿಡಿಯಬೇಕೆಂದು ಆಸೆ ಮಾಡಿದ್ದೆ, ಅವಳಿಗೆ ಅದನ್ನು ಕಾಣಿಸುವ ಋಣವಿಲ್ಲದೇ ಹೋಯಿತು."

ಒಂದು ಕುಟುಂಬ ಅಂದ ಮೇಲೆ ಅಲ್ಲಿ ಗಂಡ, ಹೆಂಡತಿ, ಮಕ್ಕಳು ಕೂಡಿ ಬಾಳ್ವೆ ಮಾಡುವಂತಹುದು.ಹೆಂಡತಿಯ ಮಾತನ್ನು ಗಂಡ ಕೇಳಬೇಕು, ಗಂಡನ ಮಾತನ್ನು ಹೆಂಡತಿ ಕೇಳಬೇಕು. ಆಗಲೇ ಅನ್ಯೋನ್ಯ ಜೀವನ ಮಾಡುವುದಕ್ಕೆ ಸಾಧ್ಯ. ಹಾಗೇ ಇಲ್ಲಿ ಚೋಮನ ದಾಂಪತ್ಯ ತುಂಬಾ ಅನ್ಯೋನ್ಯವಾಗಿತ್ತು, ಆದರೆ ಚೋಮನ ದುರದೃಷ್ಟವಶಾತ್ ಅವನ ಹೆಂಡತಿ ಹೆಚ್ಚು ಕಾಲ ಬದುಕಲಿಲ್ಲ.

ಚೋಮನ ಕುಟುಂಬದಲ್ಲಿ ಅವನ ಹೆಂಡತಿ ಬದುಕಿದ್ದರೆ ಅಷ್ಟು ಹೀನಾಯ ಆಗುತ್ತಿರಲಿಲ್ಲ ಅನಿಸುತ್ತದೆ ಏಕೆಂದರೆ, ಒಂದು ಕುಟುಂಬ ಅಂದ ಮೇಲೆ ಮನೆಯ ಒಡತಿಯಿಂದಲೇ ಆ ಕುಟುಂಬ ಸಾಗುತ್ತಿರುತ್ತದೆ. ಅವಳೇ ಉಳಿದ ಎಲ್ಲರಿಗೂ ದಾರಿದೀಪವಾಗುತ್ತಾಳೆ. ಚೋಮನು ಹೆಂಡತಿ ಇದ್ದಿದ್ದರೇ ಅಷ್ಟು ನೋವು ಅನುಭವಿಸುತ್ತಿರಲಿಲ್ಲ, ಚೋಮನ ಕಷ್ಟ ಸುಖಗಳಿಗೆ ಭಾಗಿಯಾಗುತ್ತಿದ್ದಳು, ಚೋಮನ ಮಕ್ಕಳಿಗೆ ಒಳ್ಳೆಯ ತಾಯಿಯಾಗಿ ಇರುತ್ತಿದ್ದಳು. ಮಕ್ಕಳು ತಾಯಿಯ ಮಾತನ್ನು ಕೇಳಿದ ಹಾಗೇ ತಂದೆಯ ಮಾತನ್ನು ಕೇಳುವುದಿಲ್ಲ. ಮಕ್ಕಳ ಸಮಸ್ಯೆಯನ್ನು ತಂದೆಗಿಂತ ಹೆಚ್ಚು ತಾಯಿಯ ಬಳಿ ಹೇಳಿಕೊಳ್ಳುವುದು ಸಹಜ. ಆದರೆ, ಈ ಕಾದಂಬರಿಯಲ್ಲಿ ಅಂತಹ ತಾಯಿಯ ಪಾತ್ರವನ್ನು ತರಬೇಕಾಗಿತ್ತು ಅನಿಸುತ್ತದೆ.

ಇಲ್ಲಿ ತಾಯಿಯ ಪಾತ್ರವನ್ನು ಚೋಮನ ಮಗಳಾದ ಬೆಳ್ಳಿಯೇ ವಹಿಸಿಕೊಳ್ಳುತ್ತಾಳೆ. ಚೋಮನ ಕುಟುಂಬವನ್ನು ನಡೆಸಿಕೊಂಡು ಹೋಗುವಳು ಅವಳೇ, ಎಲ್ಲರ ಆಸೆ ಆಕಾಂಕ್ಷೆಗಳನ್ನು, ಆಸೆಗಳನ್ನು, ದುಃಖವನ್ನು ಈಡೇರಿಸುತ್ತಾಳೆ. ಆದರೆ, ಅವಳ ಆಸೆ ಅಕಾಂಕ್ಷೆಗಳನ್ನು, ಆಸೆಗಳನ್ನು, ದುಃಖವನ್ನು ಕೇಳುವವರು ಸಹಾ ಯಾರೂ ಇಲ್ಲ. ಚೋಮನಿನೆ ಅವನ ದುಡಿ ಆಯಿತು, ಇಲ್ಲದಿದ್ದರೇ ಕುಡಿದು ಮಲಗಿರುವನು. ಉಳಿದ ಇಬ್ಬರು ಅಣ್ಣಂದಿರು ಅವರ ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು, ಆದರೆ, ತಾಯಿ ಇದ್ದಿದ್ದರೇ ಬೆಳ್ಳಿಯ ದುಃಖಗಳನ್ನು ಆಸೆ, ಆಕಾಂಕ್ಷೆಗಳನ್ನು ಹೇಳಿಕೊಳ್ಳುತ್ತಿದ್ದಳು. ತಾಯಿ ಮಕ್ಕಳ ಸಂಬಂಧ ದೊಡ್ಡದು, ತಾಯಿ ಮಕ್ಕಳ ಮೇಲೆ ತೋರಿಸುವ ಪ್ರೀತಿ ವಾತ್ಸಲ್ಯವೇ ಬೇರೆ.ತಂದೆ ತೋರಿಸುವ ಪ್ರೀತಿ ವಾತ್ಸಲ್ಯವೇ ಬೇರೆ. ಇವೆರಡನ್ನೂ ಒಂದೇ ದೃಷ್ಟಿಯಿಂದ ನೋಡುವುದು ಸಾಧ್ಯವಿಲ್ಲ, ಅಶೋಕರು ಒಬ್ಬ ತಂದೆಯಾಗಿರುವುದರಿಂದ ಚೋಮನ ರೀತಿಯೇ ಆಲೋಚಿಸಿದ್ದಾರೆ, ಆದರೆ ತಾಯಿಗೆ ಮಕ್ಕಳ ಮದುವೆಯ ಬಗ್ಗೆ ಮೂಡುವ ಆಸಕ್ತಿ ತಂದೆಯಲ್ಲಿ ಮೂಡುವುದು ವಿರಳ.

"ಮಕ್ಕಳ ಮದುವೆಯ ಬಗ್ಗೆ ಚೋಮನ ಯೋಚನೆಗಳು ಯಾವುದೇ ತಂದೆ ತನ್ನ ಮಕ್ಕಳ ದಾಂಪತ್ಯ ಜೀವನದ ಬಗ್ಗೆ ತೆಗೆದುಕೊಳ್ಳುವ ಆರೋಗ್ಯಕಾರಿ ನಿಲುವುಗಳೇ ಆಗಿವೆ.[5] "

ಸಾಮಾನ್ಯವಾದ ಸಂಗತಿ ಅಂದರೆ ತಂದೆ ತಾಯಿಗೆ ತಮ್ಮ ಮಕ್ಕಳ ಮದುವೆ ಮಾಡುವುದು, ಇದು ಹಿಂದೂ ಸಂಪ್ರದಾಯದ ಪ್ರಕಾರ ವಯಸ್ಸಿಗೆ ಬಂದ ಮಕ್ಕಳನ್ನು ಸಂಪ್ರದಾಯದ ಪ್ರಕಾರ ಮದುವೆ ಮಾಡುವುದು, ಅದರಂತೆ ಚೋಮನಿಗೂ ಸಹಾ ತನ್ನ ಇಬ್ಬರು ಗಂಡು ಮಕ್ಕಳನ್ನು ಮದುವೆ ಮಾಡುವ ಆಸೆ, ಚೋಮನಿಗೆ ಬೆಳ್ಳಿಯ ಮದುವೆ ಮಾಡಬೇಕು ಎಂದು ಏಕೆ ಅನಿಸಲಿಲ್ಲ.ಹೆಣ್ಣು ಯಾವಾಗಲೂ ಕುಟುಂಬ ನಿಭಾಯಿಸುವುದಷ್ಟೇ ಕೆಲಸವೇ. ಬೆಳ್ಳಿಯ ಬಗ್ಗೆ, ಅವಳ ಮದುವೆಯ ಬಗ್ಗೆ ಯೋಚನೆ ಬರಲಿಲ್ಲವೇ? ಗಂಡು ಅಥವಾ ಹೆಣ್ಣು ಮಕ್ಕಳನ್ನು ಸಮಯಕ್ಕೆ ಸರಿಯಾಗಿ ಮದುವೆ ಮಾಡದೇ ಇದ್ದರೆ ಅವರ ಮನಸ್ಸು ನೂರಾರು ಕಡೆ ಹರಿದಾಡುವುದು.ಅಂತಹಾ ಹರಿದಾಡುವ ಮನಸ್ಸನ್ನು ಬೆಳ್ಳಿ ಹಿಡಿದಿಡುವಳು, ಆದರೂ ಕೊನೆಗೆ ಜಾರುವುದು. ಚೋಮನು ಅವಳಿಗೆ ಸರಿಯಾದ ಸಮಯಕ್ಕೆ ಮದುವೆ ಮಾಡಿದ್ದರೆ ಅವಳಿಗೆ ಹಾಗೆ ಆಗುತ್ತಿರಲಿಲ್ಲ ಎಂದು ಊಹಿಸಬಹುದು.

ಆದರೂ ಅವಳಿಗೆ ತನ್ನ ಮದುವೆಯ ಬಗ್ಗೆ ಯೋಚನೆ ಇಲ್ಲ, ಅಣ್ಣಂದಿರ ಮದುವೆಯ ಬಗ್ಗೆ ಯೋಚನೆ ಅವರಿಗೆ ಮದುವೆಯನ್ನು ಮಾಡಲಿಲ್ಲ, ಅಂದರೆ ಅವರು ಯಾರಾದರೂ ಹೊಲತಿಯರನ್ನು ಕಟ್ಟಿಕೊಂಡು ಬರುವರು ಎಂಬ ಭಯವೂ ಬೆಳ್ಳಿಗಿದೆ, ಅಲ್ಲಿಗೆ ಅವಳ ಬಗ್ಗೆ ಅವಳಿಗೆ ಪೂರ್ಣ ನಂಬಿಕೆ ಇದೆ.

ಈ ಕಾದಂಬರಿಯಲ್ಲಿ ಅಂತರ್ಜಾತಿ ವಿವಾಹವನ್ನು ನೋಡಬಹುದು. ಅದುವೇ ಗುರುವ-ಮೇರಿಯರ ಸಂಬಂಧ.ಗುರುವನು ಕ್ರಿಶ್ಚಿಯನ್ ಹುಡುಗಿಯನ್ನು ಮದುವೆ ಆದ ಎಂದು ತಿಳಿದ ಚೋಮನು ದ್ವೇಷವನ್ನು ಸಾಧಿಸುವನು, ಮತ್ತೊಮ್ಮೆ ಗುರುವನ ಹಾಗೇ ನಾನು ಕ್ರಿಶ್ಚಿಯನ್ ಮತಕ್ಕೆ ಮತಾಂತರ ಹೊಂದುವ ಆಸೆ ಹೊಂದುತ್ತಾನೆ. ಅವನಿಗೆ ಸಂಪ್ರದಾಯ ನಂಬಿಕೆಗಳು ಹೋಗದಂತೆ ಕಟ್ಟಿಹಾಕುತ್ತವೆ ಗುರುವನು ಮದುವೆ ಆಗಿರುವುದನ್ನು ಮೊದಮೊದಲು ಬೆಳ್ಳಿ ವಿರೋಧ ಮಾಡುವಳು.ನಂತರದಲ್ಲಿ ಅಂದರೆ ಸೇರೆಗಾರ ಸಂಗ ಬಯಸಿದ ಮೇಲೆ ನಾನು ಸಹಾ ಯಾಕೆ ಅಣ್ಣ ಗುರುವನ ಹಾಗೆ ಮನ್ವೇಲನ ಹೆಂಡತಿಯಾಗಬಾರದು ಎನ್ನುವ ಕನಸು ಕಾಣುವಳು. ಆದರೆ, ಅದು ಸತ್ಯಕ್ಕೆ ದೂರವಾದ ಮಾತಾಗಿತ್ತು. ಏಕೆಂದರೆ ಮನ್ವೇಲನು

ಬೆಳ್ಳಿಯನ್ನು ತನ್ನ ಕಾಮದ ಬಯಕೆಯನ್ನು ತೀರಿಸುವುದಕ್ಕೆ ಇಟ್ಟುಕೊಂಡಿದ್ದನೇ ಹೊರತು ಅವಳ ವಿವಾಹವಾಗಿ ಸಂಸಾರ ಹುಡುವ ಯೋಚನೆ ಇಟ್ಟುಕೊಂಡಿರಲಿಲ್ಲ.

ಈ ಕಾದಂಬರಿಯಲ್ಲಿ ಮುಖ್ಯವಾಗಿ ಬೆಳ್ಳಿ-ಸೇರೆಗಾರರ ನಡುವೆ ಗುರುವ-ಮೇರಿಯರ ನಡುವೆ ಇರುವ ಗಂಡು-ಹೆಣ್ಣಿನ ಸಂಬಂಧವನ್ನು ನೋಡಬಹುದು.ಒಂದು ಸಂಬಂಧ ದಾಂಪತ್ಯದ ಸಂಬಂಧವಾದರೆ ಇನ್ನೊಂದು ಕಾಮದ ಬಯಕೆಯನ್ನು ಮಾತ್ರ ತೀರಿಸುವ ಸಲುವಾಗಿ, ನಡುವೆ ಸಂಬಂಧ ಇದ್ದರಿಂದ ಹೆಣ್ಣಿಗೆ ಗಂದಿನ ಅವಶ್ಯಕತೆ ಎಷ್ಟಿದೆ ಎಂಬುದನ್ನು ನೋಡಬಹುದು.

ಹಿಂದೂ ಸಂಪ್ರದಾಯದ ಪ್ರಕಾರ ಮದುವೆ ಎಂಬುದು ಗಂಡು-ಹೆಣ್ಣಿನ ನಡುವಿನ ಜೀವನ ಯಾತ್ರೆ. ಗಂಡು, ಹೆಣ್ಣು ಹುಟ್ಟುವುದು ಎಲ್ಲೋ, ಬೆಳೆಯುವುದು ಎಲ್ಲೋ. ಆದರೆ ಪರಿಚಯವೇ ಇಲ್ಲದ ಗಂಡು-ಹೆಣ್ಣಿನ ನಡುವೆ ಮದುವೆ ಎಂಬ ಸಂಬಂಧವನ್ನು ನಿರ್ಮಿಸಿ ಸಾಯುವ ತನಕ ಒಟ್ಟಿಗೆ ಬಾಳುವ ಸಂಬಂಧ ಮೂಡುತ್ತದೆ. ಹಿಂದೂ ಸಂಪ್ರದಾಯದಲ್ಲಿ ಮದುವೆ ಆಗದೇ ಉಳಿಯುವ ಹಾಗೆ ಇಲ್ಲ. ಹಾಗೇ ಉಳಿದವರಿಗೆ ಸ್ವರ್ಗದಲ್ಲಿ ಅವಕಾಶ ಇಲ್ಲ ಎಂಬ ಮೂಢ ನಂಬಿಕೆಯೋ, ಆಚಾರವೋ ಇರುವಂತೆ ನೋಡಬಹುದು.

ನಮ್ಮ ಸಮಾಜದಲ್ಲಿ ಜಾತೀಯತೆ ವ್ಯವಸ್ಥೆಯೂ ಈಗಿನದಲ್ಲ, ಅದು ಪ್ರಾಚೀನ ವೇದಗಳ ಕಾಲದಿಂದಲೂ ಇರುವುದನ್ನು ನೋಡಬಹುದು.ನಮ್ಮ ಜಾತಿ ವ್ಯವಸ್ಥೆಯ ವಿಶೇಷ ಅಂದರೆ ಒಂದು ಜಾತಿಯ ವ್ಯಕ್ತಿ ಅದೇ ಜಾತಿಯವರನ್ನೇ ಮದುವೆಯಾಗಬೇಕು,ಮದುವೆಯಾಗುವುದಕ್ಕೂ ಈ ದೇಶದಲ್ಲಿ ಸ್ವಾತಂತ್ರ ಇಲ್ಲದಂತೆ ಆಗಿದೆ. ಮೇಲಿನ ಜಾತಿಯವರು ಕೆಳಜಾತಿಯವರನ್ನು ಮದುವೆ ಆದರೆ ಇಡೀ ಸಮಾಜವೇ ದೂರುವುದು. ಸ್ವಾತಂತ್ರ ಪೂರ್ವಕ್ಕೆ ಹೋಲಿಸಿಕೊಂಡರೆ ಈಗ ಅಂತರ್ಜಾತಿ ವಿವಾಹಗಳು ನಡೆಯುತ್ತಿವೆ.ಚೋಮನ ದುಡಿ ಕಾದಂಬರಿಯಲ್ಲಿ ಭೂಮಿಯನ್ನೇ ಕೊಡಿಸಲು ಸಾಧ್ಯವಾಗಲಿಲ್ಲ.ಇಂತಹ ಅಂತರ್ಜಾತಿ ವಿವಾಹವನ್ನು ಮಾಡಿಸಿದ್ದರೇ ಬಹುಶಃ ಕಾರಂತರನ್ನು ಬ್ರಾಹ್ಮಣ ಸಮಾಜದಿಂದ ಹೊರಹಾಕುತ್ತಿದ್ದರು ಅನಿಸುತ್ತಿದೆ, ಆದರೂ ಕಾರಂತರು ಗುರುವ, ಮೇರಿ ಮದುವೆ ಮಾಡಿಸಿಯೇ ಬಿಡುವರು, ಈಗ

ಅಂತರ್ಜಾತಿಯ ವಿವಾಹಗಳು ನಡೆದು, ಸಮಾಜದ ಮೇಲು,ಕೀಳು ಎಂಬ ಭಾವನೆಯನ್ನು ಹೋಗಲಾಡಿಸಬೇಕು.

ಅಡಿ ಟಿಪ್ಪಣಿ

೧.ಶಿವರಾಮಕಾರಂತ ಎರಡು ಅಧ್ಯಯನಗಳು, ಪುಟ-೪೯

೨. ಅದೇ, ಪುಟ-೪೯

ಉ) ಚೋಮನದುಡಿ ಕಾದಂಬರಿ ಕುರಿತು ವಿಮರ್ಶಕರ ಮಾತುಗಳು

ಒಂದು ಅಧ್ಯಯನ–

ಈ ಅಧ್ಯಯನ ಭಾಗದಲ್ಲಿ ನಾನು 'ಚೋಮನದುಡಿ'ಕುರಿತು ವಿಮರ್ಶಕರು ಕೆಲವು ಅನಿಸಿಕೆಗಳನ್ನು ಮತ್ತು ವಿಮರ್ಶೆಯನ್ನು ಬರೆದಿದ್ದಾರೆ.ಅದನ್ನು ನಾನು ಆಯ್ದುಕೊಂಡು ನನ್ನ ಅಭಿಪ್ರಾಯವನ್ನು ಸೇರಿಸಿಕೊಂಡು ಅಧ್ಯಯನ ಮಾಡತೊಡಗಿದ್ದೇನೆ.ಮೊದಲಿಗೆ **ಅ)ಎಸ್.ಅನಂತನಾರಾಯಣರವರ ಬರಹಗಳು:–** ಚೋಮನದುಡಿಯು ಪರಿಪೂರ್ಣತೆಯನ್ನು ಹೊಂದಿವೆ, ಒಂದು ಧೃವ ನಕ್ಷತ್ರದಂತೆ. ಇಲ್ಲಿ ತೆಗೆದುಕೊಂಡ ವಸ್ತು ಕೂಡ ಸಮಾಜದ ಒಂದು ದುಷ್ಕೃತಿಯೇ.ಹೊಲೆಯನ ಸಂಸಾರದ ಒಂದು ಚಿತ್ರಣ ಈ ಕಾದಂಬರಿಯ ವಸ್ತು.ಇಲ್ಲಿಯೂ ಸಂಯಮವಿಲ್ಲದೇ ದಾರಾಡಲು ಬಹಳ ಅವಕಾಶವಿದೆ.ಸಾಕಷ್ಟು ಸಮಾಜ ವಿದ್ವೇಷಕ್ಕೆ ಅನುವಿದೆ. ಆದರೆ ಇಲ್ಲಿ ಕಲೆ ಒಂದು ಕಲ್ಪನೆಯ ಕೈ ಹಿಡಿದಿದೆ.ಉದ್ರೇಕವನ್ನು ಸಂಯಮ ಬಿಗಿಹಿಡಿದಿದೆ. ಪ್ರಚಾರ ನೈಜತೆಗೆ ಮಣಿದಿದೆ.ಅಂತೆಯೇ ಚೋಮನದುಡಿ ಉತ್ಕೃಷ್ಟ ಕಲಾಕೃತಿಯಾಗಿದೆ.[1] !

ಈ ಮೇಲಿನ ಹೇಳಿಕೆಯಲ್ಲಿ ಚೋಮನ ದುಡಿ ಒಂದು ಉತ್ತಮ ಕೃತಿ ಎಂಬುದನ್ನು ತಿಳಿಯಬಹುದು.ಈ ಕಾದಂಬರಿಯಲ್ಲಿ ಚೋಮನ ಅಂತ್ಯದೊಂದಿಗೆ ಮುಕ್ತಾಯ ಆದರೂ ಆ ಕತೆಯನ್ನು ಮುಂದು. ಚೋಮ ಸತ್ತರೂ ಚೋಮನಂತಹ ವ್ಯಕ್ತಿಗಳು ಜೀವಂತರಾಗಿದ್ದಾರೆ. ಆದ್ದರಿಂದ ಇದನ್ನು ಪರಿಪೂರ್ಣತೆಯನ್ನು ಹೋಂದಿದೆ ಎಂದಿರಬಹುದು. ಹಾಗೆಯೇ ಸಮಾಜದಲ್ಲಿ ನಡೆಯುವಂತಹ ಕೆಟ್ಟ ಅಂದರೆ ದೌರ್ಜನ್ಯದ ಸಂಗತಿಯನ್ನು ತಂದಿದ್ದಾರೆ. ಇಂತಹ ಅನೇಕ ಕಥೆಗಳನ್ನು ಸಮಾಜದಲ್ಲಿ ನೋಡಬಹುದು.

ಚೋಮನ ಉದ್ರೇಕ ಸ್ಥಿತಿಯನ್ನು ಕಾರಂತರು ಎಲ್ಲಿಯೂ ಉದ್ರೇಕಿಸಿಲ್ಲ. ಉದ್ರೇಕಗೊಂಡ ಚೋಮನನ್ನು ದುಡಿಯನ್ನು ಬಡಿಯುವುದರ ಮೂಲಕ ಉದ್ರೇಕ ಮುಗಿಯುವಂತೆ ಮಾಡಿದ್ದಾರೆ. ಈ ಕಾದಂಬರಿ ಒದುಗರ ಮನಸ್ಸಿಗೆ ನೆಮ್ಮದಿಯನ್ನು ತಂದು ಕುತೂಹಲವನ್ನು ಮೂಡಿಸಿದೆ. ಪ್ರತಿಯೊಂದು ಪಾತ್ರವೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ.ಒಂದಕ್ಕೊಂದು ಪಾತ್ರಗಳು ಗೊತ್ತಿಲ್ಲದೇ ಸಂಬಂಧವನ್ನು ಹೆಣೆದುಕೊಂಡಿವೆ;ಮಾನವನಿಗೂ ಮಿಗಿಲಾದ ಶಕ್ತಿ ಅಂದರೆ ದೈವೀಶಕ್ತಿ.ಚೋಮನನ್ನು

ತಡೆಯುವ ಶಕ್ತಿ ಅಂದರೆ ಪಂಜುರ್ಲಿ ಭೂತ. ಅದು ಕಾದಂಬರಿಯಲ್ಲಿ ಯಾರಿಗೂ ಕಾಣದ ಹಾಗೆ ಚೋಮನಲ್ಲಿ ಕಾರ್ಯ ನಿರ್ವಹಿಸುವುದು, ಕಾಣದ ಒಂದು ಕೈ ಕೆಲಸ ಮಾಡಿದೆ ಬಹುಶಃ ಚೋಮನ ಮನಸ್ಸಿನಲ್ಲಿ ಈ ಪಂಜುರ್ಲಿ ಭೂತ ಬಾರದಿದ್ದರೂ ಕ್ರಿಶ್ಚಿಯನ್ ಧರ್ಮಕ್ಕೆ ಬದಲಾಗಿ ಭೂಮಿಯನ್ನು ಪಡೆಯುತ್ತಿದ್ದನೋ ಏನೋ, ಆದರೆ, ಚೋಮನ ಮನೆ ದೇವರಾದ ಪಂಜುರ್ಲಿ ಭೂತ ಚೋಮನನ್ನು ತಡೆದಿದೆ. ಇದರಿಂದ ಚೋಮ, ಚೋಮನಾಗಿಯೇ ಸಾಯುವಂತಾಯಿತು.ಚೋಮನಲ್ಲಿ ಎರಡು ಅಭಿಪ್ರಾಯವನ್ನು ನೋಡಬಹುದು. ಒಂದು ತನ್ನ ಮಗನ ಹೃದಯನ್ನು ಓಡಿ ಎಂಬುದು ಮತ್ತೊಂದು ಪಂಜುರ್ಲಿ ಭೂತಕ್ಕೆ ಹೆದರಿ ಕೊನೆಯವರೆಗೂ ಇದ್ದ ಸ್ಥಿತಿಯಲ್ಲಿ ಉಳಿಯುವುದು. ಈ ಎರಡರ ನಡುವೆ ಚೋಮ ಸಿಲುಕಿ ಅಂತ್ಯ ಕಂಡನು. ದುರಂತ ಅಂತ್ಯವನ್ನು ಕಂಡನು.

"ಚೋಮನ ಬಗ್ಗೆ ನಮಗೆ ಸಂಪೂರ್ಣ ಸಹಾನುಭೂತಿ ಇದೆ. ಇಲ್ಲಿ ಅವನ ದುರಂತಕ್ಕೆ ನಾವು ತಪ್ಪನ್ನು ಸಮಾಜದ ಮೇಲೆ ಹೊರಿಸಬಹುದು.ಚೋಮನ ಮೇಲೆಯೇ ಹೇರಬಹುದು. ಆದರೆ, ಎರಡೂ ಸರಿಹೋಗದು.ಒಂದಾದ ಮೇಲೊಂದರಂತೆ ಅನಿರೀಕ್ಷಿತ ಪ್ರಸಂಗಗಳು ಜರುಗಿ ದುರಂತವಾಗಿ ಬಿಡುವುದು.[2] ".

ಚೋಮನ ಬಗ್ಗೆ ನಮಗೆ ಸಂಪೂರ್ಣ ಸಹಾನುಭೂತಿ ಬರುವುದು ಸಹಜ. ಏಕೆಂದರೆ ಆ ಕಾದಂಬರಿಯಲ್ಲಿ ಕಾರಂತರು ಓದುಗರಿಗೆ ಚೋಮನ ಬಗ್ಗೆ ಸಹಾನುಭೂತಿ ಬರುವಂತೆ ಮಾಡಿದ್ದಾರೆ. ಚೋಮನಂತಹ ಅನೇಕ ಜನರಿಗೆ ಸಹಾನುಭೂತಿ ಜೊತೆ ನ್ಯಾಯ ದೊರಕಿಸಿಕೊಡುವಂತೆ ಮಾಡಬೇಕು. ಚೋಮನ ಸ್ಥಿತಿಗೆ ಕಾರಣ ಸಮಾಜ ಅಲ್ಲ ಸಮಾಜದಲ್ಲಿ ಇರುವ ಜನರು, ಈ ಸಮಾಜ ನಿರ್ಮಾಣಗೊಂಡಿರುವುದು ಜನರ ಗುಂಪಿನಿಂದ, ಆದ್ದರಿಂದ ಸಮಾಜದಲ್ಲಿ ಇರುವ ಜನರೇ ಚೋಮನ ದುರಂತ ಸ್ಥಿತಿಗೆ ಕಾರಣ. ಅದರಲ್ಲೂ ಇಲ್ಲಿ ಕಂಡುಬರುವುದು ಬ್ರಾಹ್ಮಣ ಸಮಾಜ. (ಸಂಕಪ್ಪಯ್ಯ ಅವರ ತಾಯಿ) ಸಂಕಪ್ಪಯ್ಯ ತಾಯಿಯ ಮಾತನ್ನು ವಿರೋಧಿಸಿ ಚೋಮನಿಗೆ ಆಸ್ತಿಯನ್ನು ಉಳುಮೆಗೆ ಕೊಟ್ಟಿದ್ದರೇ ಅಲ್ಲಿ ಸುಧಾರಣೆ ನೋಡಬಹುದು.

ಘಟನೆಗಳು ಅನಿರೀಕ್ಷಿತವಾಗಿ ಅವಕ್ಕೆ ಅವೇ ನಡೆಯುವುದಿಲ್ಲ. ಮನುಷ್ಯನ ಕಡೆಯಿಂದ ಅವು ಅನಿರೀಕ್ಷಿತ ಅನಿಸಿಕೊಳ್ಳುತ್ತವೆ. ಚೋಮನ ದುರಂತ ಕುಟುಂಬವೂ ಶೋಷಣೆ ಮಾಡುವವರಿಂದ ಶೋಷಣೆಗೆ ಒಳಗಾಯಿತೇ ವಿನಃ ಅದನ್ನು ಅನಿರೀಕ್ಷಿತ ಎಂದು ಭಾವಿಸುವುದು, ಅಷ್ಟು ಸಮಂಜಸವಾಗಿ ಕಂಡುಬರುವುದಿಲ್ಲ. ಹಾಗೆಯೇ ಕಾರಂತರು ಈ ದುರಂತಕ್ಕೆ ಕಾರಣ ಯಾರು ಎಂಬುದನ್ನು ಓದುಗರಿಗೆಯೇ ಬಿಟ್ಟಿದ್ದಾರೆ.

ಆ) ಜಿ.ರಾಜಶೇಖರ್‌ರವರ ಮಾತುಗಳು:

ಇಲ್ಲಿ ಜಿ.ರಾಜಶೇಖರ್‌ರವರು ಚೋಮನ ದುಡಿ ಬಗ್ಗೆ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನನ್ನ ಅನಿಸಿಕೆ ಸೇರಿಸಿದ್ದೇನೆ. "ಚೋಮನ ದುಡಿ ಕಾದಂಬರಿ ಕಥೆಯನ್ನು ಸಾರಾಂಶ ರೂಪದಲ್ಲಿ ಹೇಳುವುದಿದ್ದರೆ,ಅದು ಹರಿಜನೊಬ್ಬನ ನೆಲದ ಆಶೆಯ, ಬಡ್ಡಿ ಸಾಲದ, ಒತ್ತಾಯದ ದುಡಿಯ, ಬವಣೆಯ ಕಥೆ, ಕೇವಲ ೧೦೭ ಪುಟಗಳ ಕಾದಂಬರಿಯಲ್ಲಿ ಈ ಕಥಾ ಸಾರಾಂಶಕ್ಕೆ ನೇರವಾಗಿ ಸಂಬಂಧಪಡದ, ಆದರೆ ಕಾದಂಬರಿಯ ಬದುಕಿನ ಚಿತ್ರಣದ ಜೊತೆ ಸಾವಯುವ ಸಂಬಂಧ ಪಡೆದುಕೊಂಡ, ಎಷ್ಟೋ ವಿವರಗಳಿವೆ ಎಂದು ಯೋಚಿಸಿದರೆ ಬೆರಗಾಗುತ್ತದೆ. ಚೋಮನ ಕುಟುಂಬದ ಬಡತನ ದಾಸ್ಯಗಳ ಕಥೆಯಾಗಿರುವುದರಿಂದ ಜೊತೆಗೆ, ಬಡತನ ದಾಸ್ಯಗಳಿದ್ದರೂ ಹೂವಿನ ಎಸಳುಗಳಷ್ಟು ಅನ್ಯೋನ್ಯವಾದ ಕುಟುಂಬವೊಂದು ಹೊಸ ಆರ್ಥಿಕ ಶಕ್ತಿ ಸೆಳೆತಕ್ಕೆ ಸಿಕ್ಕು ಛಿದ್ರಛಿದ್ರವಾಗಿ ನಾಶವಾಗುವುದರ ಕಥೆಯೂ ಆಗಿದೆ.[೩] ".

ಈ ಕಾದಂಬರಿ ಚೋಮನ ನೆಲದ ಆಸೆಯನ್ನು ಎತ್ತಿ ಹಿಡಿದಿದೆ. ಚೋಮ ಇಷ್ಟೆಲ್ಲ ನೋವು, ಮಾನಸಿಕ ಚಿಂತನೆಗೆ ಒಳಗಾಗುವುದು ನೆಲಕ್ಕೋಸ್ಕರ, ನೆಲಕ್ಕಾಗಿ ಎಷ್ಟೆಲ್ಲ ಬವಣೆ ಪಡುವನು ಆದರೆ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಲು ಮುಂದಾಗುವನು. ಆದರೂ, ಆಗದು, ಬೆಳ್ಳಿಯ ಮಾತನ್ನು ವಿರೋಧಿಸಿ ಸಂಕಪ್ಪಯ್ಯನ ಬಳಿ ಜಮೀನನ್ನು ಪಡೆಯಲು ಹೋಗುವನು. ಆದರೆ, ಮಧ್ಯದಲ್ಲಿ ಪಂಜುರ್ಲಿ ಭೂತದಿಂದ ಹಿಂತಿರುಗುವನು. ಈ ಕಾದಂಬರಿ ಬರೀ ನೆಲದ ಆಸೆಯನ್ನು ಹೇಳುತ್ತದೆಯೇ ಹೊರತು ನೆಲವನ್ನು ದೊರಕಿಸಿಕೊಡುವ ಕಾರ್ಯ ಮಾಡುವುದು ಕಾಣುವುದಿಲ್ಲ. ಆದ್ದರಿಂದ ಚೋಮನಂತಹವರಿಗೂ ಮುಂದೆಯೂ ಸಹಾ ಸಾಧ್ಯವಿಲ್ಲ ಎಂಬುದು ತಿಳಿಯಬಹುದು.

ಅನೇಕ ಬಡತನದ ಕುಟುಂಬಗಳು ಅನ್ಯೋನ್ಯವಾಗಿಯೇ ಇರುತ್ತವೆ. ಆದರೆ, ಅವರ ಮನಸ್ಸಿನಲ್ಲಿ ಮೂಡುವುದು, ತನ್ನದೇ ಜಮೀನು ಮಾಡುವ ಆಸೆ. ಅದಕ್ಕೋಸ್ಕರ ಪಡಬಾರದ ಕಷ್ಟ ಅನುಭವಿಸುತ್ತಾರೆ. ವಿಮರ್ಶಕರು ಹೇಳಿರುವಂತೆ ಈ ಕಾದಂಬರಿಯು ಹಾಸ್ಯದ ರೀತಿ ಕಾಣಬಹುದು. ಆಪಾತ್ರಗಳಲ್ಲಿ, ಸ್ಥಾನದಲ್ಲಿ ನಾವು ನಿಂತು ನೋಡಿದರೆ ಮೈ ಜುಂ ಎನ್ನುವುದು,ಮೈ ರೋಮಾಂಚನಗೊಳ್ಳುವುದು.

ಚೋಮನಲ್ಲಿಯೇ ಭಾವುಕತೆ, ಆವೇಶ ನೋಡಬಹುದು.ಅವಮಾನಗೊಂಡಾಗ ಚೋಮ ದುಡಿ ಬಡಿಯುವಾಗ ಅವನ ದೇಹ ಮಾತ್ರ ಇರುತ್ತಿತ್ತು, ಉಳಿದ ಅವನ ಮನಸ್ಸು, ಬುದ್ಧಿಯು ದುಡಿಯ ಒಳಗಡೆಯೇ ಅಡಗಿರುವಂತೆ ಭಾಸವಾಗುವುದು. ಕೆಲವು ಸಂಗೀತ ಉಪಕರಣಗಳನ್ನು ನುಡಿಸುವಾಗ ಅದರಲ್ಲಿಯೇ ತಲ್ಲೀನರಾಗಿರುತ್ತಾರೆ. ಹೊರಗಿನ ಪ್ರಪಂಚವೂ ಏನು ಆಗುತ್ತಿದೆ ಎಂಬ ಅರಿವೇ ಇರುವುದಿಲ್ಲ. ಆದರೆ, ಜಿ.ರಾಜಶೇಖರ್‌ರವರು ಚೋಮನದುಡಿ ಕಾದಂಬರಿಯಲ್ಲಿ ಭಾವುಕತೆ, ಆವೇಶ ಇಲ್ಲ ಎಂದು ಚೋಮ ಪಾತ್ರದಲ್ಲಿ ಬಂದಿರುವ ಭಾವುಕತೆ, ಆವೇಶ ಬೇರೆ ಎಲ್ಲರಿಗೂ ನೋಡಲು ಸಾಧ್ಯವಿಲ್ಲ ಎನಿಸುತ್ತದೆ. ಹಾಗೆಯೇ ಚೋಮ ತನ್ನ ಮಕ್ಕಳ ಬಗ್ಗೆ ಇಟ್ಟಿದ್ದ ಆಸೆ, ಅಕಾಂಕ್ಷೆಗಳನ್ನು ಚೋಮನ ಭಾವುಕತೆ ಮೂಲಕ ನೋಡಬಹುದು.

ಚೋಮನದುಡಿ ಕಾದಂಬರಿಯಲ್ಲಿ ನಾವು ಮುಖ್ಯವಾಗಿ ಕರಿನಾಯಿ ಮತ್ತು ಹಸು ಕರುಗಳನ್ನು ನೋಡಬಹುದು.ಇದರಿಂದ ಕಾರಂತರಿಗೆ ಇದ್ದ ಪ್ರಾಣಿಗಳ ಮೇಲಿನ ಪ್ರೀತಿ, ಅನುಕಂಪವನ್ನು ನೋಡಬಹುದು.ಚೋಮನ ಕುಟುಂಬದಲ್ಲಿ ಆ ಪ್ರಾಣಿಗಳಿಗೂ ಅವಕಾಶವನ್ನು ಕಾರಂತರು ದೊರಕಿಸಿಕೊಟ್ಟಿದ್ದಾರೆ.

'ಕಾರಂತರಿಗೆ ವೈಯಕ್ತಿಕ ಸಂವೇದನೆಗಳು ಮತ್ತು ಸುಖ ದುಃಖದ ಅನುಭವಗಳಷ್ಟೇ ನ್ಯಾಯ, ಅನ್ಯಾಯ, ಒಳಿತು ಕೆಡುಕು, ಧರ್ಮ, ಅಧರ್ಮಗಳ ಸಾಮಾಜಿಕ ಪ್ರಶೆಗಳೂ ಮುಖ್ಯವಾಗಿವೆ'ಎಂದು ರಾಜಶೇಖರ ಹೇಳಿದ್ದಾರೆ. ಈ ಮಾತುಗಳು ಕಾರಂತರ ಕಾದಂಬರಿಯನ್ನು ವಿಮರ್ಶಾತ್ಮಕವಾಗಿ ಓದಿದಾಗ ತಿಳಿಯಬಹುದು.ಎಲ್ಲಿ ಅನ್ಯಾಯ ಆಗಿದೆಯೋ ಹಾಗೆಯೇ ಅದನ್ನು ಹೇಳುವರು.ಅದಕ್ಕೆ ಪರಿಹಾರವನ್ನು ಓದುಗರಿಗೆ ಬಿಡುವರು.ಮನುಷ್ಯರು ಯಾರು ಒಂಟಿಯಲ್ಲ, ಅನಾಥರಲ್ಲ.ಆದರೆ ಬರುವಾಗ ಒಂಟಿಯಾಗಿ ಬರುವರು, ಹೋಗುವಾಗ ಒಂಟಿಯಾಗಿ ಹೋಗುವರು.ಚೋಮನು ದುಡಿಯನು ಬಡಿಯುವಾಗ ಯಾರಿಗೂ ಹೇಳದ ಹಾಗೆಯೇ ದುಡಿಯನ್ನು ಬಿಟ್ಟು ಸ್ವರ್ಗವನ್ನು ಸೇರಿದ.

ಕಾರಂತರ ಕಾದಂಬರಿಗಳನ್ನು ನೋಡಿದಾಗ ಅಲ್ಲಿ ಬರೀ ಕಥೆಯೂ ಬರುವುದಿಲ್ಲ,ಅದರ ಒಳಗಡೆ ಮಾನವ ಜೀವನ ನಿಜಾಂಶವನ್ನು, ಜೀವನ ಎಂದರೇನು? ಎಂಬುದನ್ನು ಕಷ್ಟಸುಖಗಳ ಅನುಭವ, ಸನ್ನಿವೇಶಗಳ ಮೂಲಕ ಸ್ಪಷ್ಟ ಪಡಿಸುತ್ತಾರೆ.

ಪ್ರಾಚೀನ ಕಾವ್ಯಗಳಲ್ಲಿ ಒಂದು ಉತ್ತಮ ಕಾವ್ಯ ಎಂದು ಕರೆಸಿಕೊಳ್ಳಬೇಕಾದರೆ ಅದು ನವರಸಗಳನ್ನು ಒಳಗೊಂಡಿರಬೇಕು ಎಂದು ಹೇಳುತ್ತಿದ್ದರು.ಅಂತಹ ನವರಸಗಳು ಕೊಡುವ ಅಭಿರುಚಿಯನ್ನು ಕಾರಂತರ ಕಾದಂಬರಿಗಳು ಕೊಡುತ್ತವೆ.

ಕಾರಂತರ ಕಾದಂಬರಿ ಚೋಮನದುಡಿಯಲ್ಲಿ ಸ್ವಾತಂತ್ರ ಪೂರ್ವದಲ್ಲಿ ರಚನೆಯಾಗಿತ್ತು. ಆದ್ದರಿಂದ ಆ ಕಾಲದ ಸಮಾಜದಲ್ಲಿ ಬಳಸುತ್ತಿದ್ದ ಭಾಷೆಯನ್ನು ಬಳಸಿದ್ದಾರೆ ಹಾಗೂ ಅವರು ಬ್ರಾಹ್ಮಣ ಭಾಷೆಯಲ್ಲಿಯೇ ಕಾದಂಬರಿಗಳನ್ನು ರಚಿಸಿದ್ದಾರೆ. ಒಬ್ಬ ದಲಿತ ಕುಟುಂಬದಲ್ಲಿ ಬಳಸುವ ಭಾಷೆಯನ್ನು, ಮಾತುಗಳನ್ನು ಬಳಸಿಲ್ಲ ಎಂದೂ ಹೇಳಬಹುದು.

ರಾಜಶೇಖರ್ 'ಚೋಮನ ಕುಟುಂಬದ ಒಟ್ಟಾರೆ ವಿನಾಶ' ಎಂದಿದ್ದಾರೆ. (ಪುಟ 22). ಇದು ಸತ್ಯ ಏಕೆಂದರೆ, ಇಲ್ಲಿಯ ಪರಿಸ್ಥಿತಿಯನ್ನು ನೋಡಿದರೇ ಅನಿವಾರ್ಯವಾದ ಒಂದು ಸಂದರ್ಭಗಳೂ ಬಂದ ಹಾಗೇ ಬರುತ್ತಿದ್ದವು. ಒಂದು ಕುಟುಂಬವೂ ವಿನಾಶದ ಹಾದಿಯನ್ನು ಹಿಡಿದಾಗ ಒಂದರ ಹಿಂದೆ ಒಂದು ದುರಂತದ ಸಮಸ್ಯೆಗಳ ಸರಪಳಿಯೇ ಬರುವುದು. ಅಂತಹಾ ಸಮಸ್ಯೆಗಳ ಸರಪಳಿ ಚೋಮನ ಕುಟುಂಬದಲ್ಲಿ ಬರುತ್ತದೆ. ಚೋಮ ಮಾಡಿದ ಸಾಲವೇ ಮೊದಲ ದುರಂತ ಎಂದು ಹೇಳಬಹುದು. ಅದರ ಜೊತೆಗೆ ಚೋಮ ದಲಿತ ಕುಟುಂಬದಲ್ಲಿ ಜನಿಸಿರುವುದೇ ಒಂದು ದುರಂತದಂತೆ ಕಾಣುವುದು. ಮಾಡಿದ ಸಾಲವನ್ನು ತೀರಿಸಲೇ ಬೇಕು.ಅದನ್ನು ತೀರಿಸಲು ತನ್ನ ಗಂಡುಮಕ್ಕಳಿಬ್ಬರನ್ನು ಕಳುಹಿಸುವನು, ಅವರ ನಂತರ ಬೆಳ್ಳಿಯನ್ನು ಕಳುಹಿಸುವನು, ಬೆಳ್ಳಿಯೂ ತನ್ನ ಶೀಲವನ್ನು ಕಳೆದುಕೊಳ್ಳುವಳು. ಹಾಗೆಯೇ ತನ್ನ ಮಗ ಗುರುವನನ್ನು ಕ್ರಿಸ್ತಿಯನ್ನರ ಹುಡುಗಿಯನ್ನು ಮದುವೆಯಾಗುವನು. ಇವುಗಳಿಗೆ ಬರೀ ಆರ್ಥಿಕ ಕಾರಣ ಮಾತ್ರ ಅಲ್ಲ. ಸಾಮಾಜಿಕ ಶೋಷಣೆಯೂ ನಿಲ್ಲುವುದು.

ಒಬ್ಬ ಮನುಷ್ಯ ಸಾಲ ಮಾಡಿದರೆ ಅವನಿಗೆ ಮುಕ್ತಿಯೇ ಇಲ್ಲವೇ? ಸಾಲ ತೀರುವ ಹಾಗೆಯೇ ಇಲ್ಲವೇ? ಸಾಯುವವರೆಗೂ ಸಾಲ ತೀರುವುದಿಲ್ಲ. ಇದು ಯಾವ ಜನ್ಮದ ಕರ್ಮ.ಚೋಮನ ಕುಟುಂಬ ಹಾಗೇ ಆಗುವುದು, ಯಾವುದೋ ಕಾಲದಲ್ಲಿ ಮಾಡಿದ ಸಾಲ ಚೋಮ ಸತ್ತರೂ ತಿರುವುದಿಲ್ಲ. ಅವನ ಮಕ್ಕಳೆಲ್ಲ ದುಡಿದರೂ ತೀರುವುದಿಲ್ಲವೇ, ಇದು ಯಾವ ನ್ಯಾಯ. ಸಾಲದ ಜೊತೆಗೆ ಚೋಮನ

ಪ್ರಾಣವೂ,ಬೆಳ್ಳಿಯ ಶೀಲವೂ ಹೋಯಿತು. ಪ್ರಾಣವೂ ಶೀಲವೂ ಒಂದೇ ಎಂದು ತಿಳಿಯಬಹುದು. ಶೀಲ ಹೋದರೇ ಪ್ರಾಣ ಹೋದಷ್ಟೇ ಆಗುವುದು.ಆಗ ಜೀವ ಇಲ್ಲದ ದೇಹದಂತೆ ಅಷ್ಟೆ.

"ಏಕಕಾಲಕ್ಕೆ ಬೆಳ್ಳಿ ತನ್ನ ವಯಸ್ಸಿಗೆ ಸಹಜವಾದ ಲೈಂಗಿಕ ಕಾಮನೆಗಳನ್ನು ಅನುಭವಿಸುವುದು. ತನ್ನ ಶೀಲ ಸಂಸ್ಕೃತಿಗಳಿಗೆ ಸಲ್ಲದ ಪರಿಸರದಲ್ಲಿ ಆ ಕಾಮನೆಗಳನ್ನು ಪೂರೈಸಿಕೊಳ್ಳುವುದು.ತನ್ನ ನೈಸರ್ಗಿಕ ಹಂಬಲಗಳ ಬಗ್ಗೆ ಮೂಕ ಪ್ರಾಣಿಯಂತಹ ಉದಾಸೀನ ಭಾವ ತಾಳಿರುವುದು ಧ್ವನಿತವಾಗಿದೆ."

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ವಿಮರ್ಶಕರು ಹೇಳಿರುವುದು ಸತ್ಯ ಏಕೆಂದರೆ, ವಯಸ್ಸಿಗೆ ತಕ್ಕ ಆಸೆಗಳು ಮೂಡುವುದು ಸಹಜ. ಚಿಕ್ಕ ವಯಸ್ಸಿನಲ್ಲಿ ಬೇರೆ ಚಿಕ್ಕ ಮಕ್ಕಳ ಹಾಗೇ ಇರಬೇಕೆಂದು ಹಂಬಲಿಸುವುದು ಸಹಜ. ಹಾಗೆಯೇ ವಯಸ್ಸಿಗೆ ಬಂದಾಗ ಇನ್ನೊಬ್ಬರು ವಯಸ್ಸಿನವರು ಅನುಭವಿಸುವ ಆಸೆಗಳನ್ನು, ಆಕಾಂಕ್ಷೆಗಳನ್ನು ನಾವು ಅನುಭವಿಸಬೇಕು ಎಂಬ ಹಂಬಲ ಮೂಡುವುದು. ಅದರಂತೇ ಬೆಳ್ಳಿಯು ಲೈಂಗಿಕ ಆಸೆಗಳನ್ನು ಈಡೇರಿಸಿಕೊಂಡಿದ್ದಳು. ನಮ್ಮ ಸಂಸ್ಕೃತಿಯ ಪ್ರಕಾರ ಶೀಲ ಹೋದರೇ ಪ್ರಾಣ ಹೋದ ಹಾಗೆ. ಶೀಲವೇ ಸಂಸ್ಕೃತಿ.ಬೆಳ್ಳಿಯು ತನ್ನ ಊರಿನಲ್ಲಿಯೂ ಸಹಾ ಕಾಮದ ಆಸೆಗೆ ಒಳಗಾಗುವಳು.ಅದನ್ನು ವಿರೋಧಿಸುವ ಹಂತಕ್ಕೂ ಹೋಗಲಿಲ್ಲ. ಏಕೆಂದರೆ, ಅವನಿಂದ ಪುಡಿಗಾಸು ಹಣ ಬೇರೆ ದೊರಕುತ್ತಿತ್ತು. ಆದ್ದರಿಂದ ಮೂಕ ಪ್ರಾಣಿಯಾಗಿದ್ದಳು.

ಬಡವರ ಹೆಣ್ಣು ಮಕ್ಕಳು ಶ್ರೀಮಂತರ ಕಾಮದ ನೋಟಕ್ಕೆ ಬಲಿಯಾಗುತ್ತಿರುವುದು ಸಾಮಾನ್ಯವಾಗಿದೆ.ಮಹಿಳಾ ಸಂಘಟನೆಗಳು ಹೋರಾಟ ನಡೆಸಿದರೂ, ಇಂತಹ ಹೇಯವಾದ ಕೃತ್ಯಗಳು ನಿಲ್ಲುತ್ತಿಲ್ಲ. ಆದರೂ ತೋಟದ ನಾಡಿನಲ್ಲಿ ಕೆಲಸಕ್ಕೆ ಬರುವ ಹೆಣ್ಣು ಮಕ್ಕಳನ್ನು ಕೆಟ್ಟ ದಾರಿಗೆ ತರುವುದು ಸರ್ವೇ ಸಾಮಾನ್ಯವಾಗಿದೆ. ಇದನ್ನು ವಿರೋಧಿಸಬೇಕು.ಅವರ ವಿರುದ್ಧ ಸಿಡಿದೇಳಬೇಕು.ಅಂತಹವರನ್ನು ಮಟ್ಟ ಹಾಕಬೇಕು. ಆಗಲೇ ಬೆಳ್ಳಿಯಂತಹ ಹೆಣ್ಣು ಮಕ್ಕಳಿಗೆ ನ್ಯಾಯ ಸಿಗುವುದು.

ಕಾದಂಬರಿಯು ರಚನೆಗೊಂಡಿರುವುದು ಸ್ವಾತಂತ್ರ ಪೂರ್ವದಲ್ಲೇ ಇರಬಹುದು, ಬೆಳ್ಳಿಯ ದೌರ್ಜನ್ಯ ಸ್ವಾತಂತ್ರ ಪೂರ್ವದ್ದು. ಈಗ ಹಾಗೇ ನಡೆಯಲಾರದು ಎಂದು ತಿಳಿಯಬಹುದು. ಆದರೆ ಈಗಲೂ ಅಂತಹ ಘಟನೆಗಳನ್ನು ನಡೆಯುತ್ತಲೇ ಇವೆ. ಇದಕ್ಕೆ ಮುಕ್ತಿ ದೊರಕಿದಾಗಲೇ ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಸಮಾನತೆ ದೊರಕಿದಂತೆ ಆಗುವುದು. ಚೋಮನಿಗೆ ಎರಡು ಅತಿ ಆಸೆಗಳನ್ನು ಹೊಂದಿದ್ದನು. ಒಂದು ಬೇಸಾಯಗಾರನಾಗುವ ಆಸೆ ಇದ್ದರೆ, ಇನ್ನೊಂದು ತನ್ನ ಮಕ್ಕಳನ್ನು ಮದುವೆ ಮಾಡುವುದು.ಅದರಲ್ಲೂ ಬೆಳ್ಳಿಯ ಮದುವೆಯ ಕನಸನ್ನು ಅಪಾರವಾಗಿ ಕಟ್ಟಿದ್ದನು. ಆದರೆ, ಗುರುವ ಮನೆ ಬಿಟ್ಟು ಹೋಗಿ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾದನು. ಇದರಿಂದ ಅವನ ಬಗ್ಗೆ ಅಪಾರ ದ್ವೇಷ ಹೊಂದಿದ್ದ.

ಒಟ್ಟಿನಲ್ಲಿ ಜಿ.ರಾಜಶೇಖರ ಈ ಲೇಖನವೂ ಸಂಪೂರ್ಣ ಚೋಮನ ಕುಟುಂಬದ ಪ್ರತಿ ಎಳೆಯನ್ನು ವಿಮರ್ಶಿಸಿ ನೋಡಿದ್ದಾರೆ.

"ನೆಲ ಮತ್ತು ಮನುಷ್ಯನ ವಿಷಮ ಸಂಬಂಧದ ಇಂತಹ ಚಿತ್ರಣ ಕಾರಂತರ ಕಾದಂಬರಿಗಳಲ್ಲೂ ಅಪರೂಪದ್ದೇ ಆಗಿದೆ.[38] ".

ಈ ಮೇಲಿನ ಹೇಳಿಕೆಯನ್ನು ಗಮನಿಸಿದಾಗ ರಾಜಶೇಖರ್‌ರು ಕಾರಂತರನ್ನು ಹತ್ತಿರದಿಂದ ಕಂಡ ವ್ಯಕ್ತಿ ಎಂಬುದನ್ನು ತಿಳಿಯಬಹುದು. ಏಕೆಂದರೆ ಈ ಮೇಲಿನ ಹೇಳಿಕೆಯನ್ನು ಹೇಳಲು ಅವರ ಕಾದಂಬರಿಯನ್ನು ಓದಿದರೇ ಸಾಲದು. ಜೊತೆಗೆ ಅವರ ಜೀವನವನ್ನು ಸಹಾ ತಿಳಿದಿರಬೇಕು. ಒಬ್ಬ ಸಾಮಾನ್ಯ ರೈತನಿಗೆ ಇರುವ ಮೊದಲ ಆಸೆ ನೆಲ.ನೆಲ ಅಂದರೆ ಹೆಣವೂ ಬಾಯಿ ಬಿಡುವುದು ಎಂಬಂತೆ ಮನುಷ್ಯ ನೆಲದ ಆಸೆ ಹೊಂದಿರುವುದು ಸರ್ವೇ ಸಾಮಾನ್ಯ, ಮೂಲತಃ ಮನುಷ್ಯ ನೆಲದಿಂದಲೇ ಬಂದವನು. ಅಂದರೆ ಆದಿಮಾನವರು ಭೂಮಿಯಲ್ಲಿ ವಾಸ ಮಾಡುತ್ತಾ ನೆಲವೇ ನಮ್ಮ ದೇವರು ಎಂದು ನಂಬಿದ್ದರು.ಅದರಲ್ಲಿ ಚೋಮನು ಭೂಮಿಗೆ ಆಸೆ ಪಡುವುದರಲ್ಲಿ ವಿಶೇಷವೇನಿಲ್ಲ. ಭೂಮಿ ಯಾರದ್ದೂ ಅಲ್ಲ, ಮನುಷ್ಯ ತನ್ನ ಹೊಟ್ಟೆ ಬಟ್ಟೆಗೆ ಭೂಮಿಯನ್ನು ಉಳುವುದು ಅವನ ಹಕ್ಕು ಅಂತಹ ಸನ್ನಿವೇಶದಲ್ಲಿ ಚೋಮನಿಗೆ ಭೂಮಿ ಇಲ್ಲ. ನೀನು ಸಾಯುವವರೆಗೂ ಸಹಾ ಜೀತದಾಳಾಗಿ ದುಡಿ, ನಿನ್ನ ಜೀವನ ಪೂರ್ತಿ ಸವೆಯುವುದು ಸಂಕಪ್ಪಯ್ಯನ ಕುಟುಂಬ ಉದ್ದಾರ ಮಾಡಲು ಅಂದರೆ ಚೋಮನ

ಕುಟುಂಬದ ಉದ್ಧಾರ ಮಾಡುವವರು ಯಾರು? ಚೋಮನ ಸಾಲ ತೀರದೇ ಜೀವನ ಪೂರ್ತಿ ದುಡಿಯಬೇಕು. ಸಂಕಪ್ಪಯ್ಯನ ಖಜಾನೆ ಮಾತ್ರ ತುಂಬಬೇಕು.ಇದು ಭಾರತದ ದಲಿತ ಜನಾಂಗದ ಶೋಷಣೆಯ ಕಥೆ.ಅಂಬೇಡ್ಕರ್ ಈ ನಾಡಿನಲ್ಲಿ ಜನಿಸದೇ ಹೋಗಿದ್ದರೆ ಚೋಮನಂತಹವರು ಚೋಮನಾಗಿ ಈಗಲೂ ಇರಬೇಕಾದ ಪರಿಸ್ಥಿತಿ ಮೂಡುತ್ತಿತ್ತೋ ಏನೋ?

ಚೋಮನ ಕುಟುಂಬ ಮತ್ತು ಮನ್ವೇಲನ ಸಂಬಂಧ ಬರೀ ಕೂಲಿ ಮತ್ತು ಮಾಲೀಕರ ಸಂಬಂಧವಾಗಿರುತ್ತಿತ್ತು. ಅದು ಕೊನೆಗೆ ಬೇರೆ ಸಂಬಂಧ ಅಂದರೆ ಕಾಮದ ಸಂಬಂಧವಾಗಿ ಪರಿವರ್ತನೆಯಾಯಿತು. ಸೇರೆಗಾರನು ಗಂಡು ಕೂಲಿಗಳನ್ನು ಬಹಳ ನಿಕೃಷ್ಟವಾಗಿ ದುಡಿಸಿಕೊಳ್ಳುತ್ತಿದ್ದನು, ಅಂದರೆ ವಿಪರೀತ ಬಡ್ಡಿಯ ಸಾಲವನ್ನು ಹೇರಿ, ದಯದಾಕ್ಷಿಣ್ಯವಿಲ್ಲದೇ ಕೂಲಿಗಾರರನ್ನು ತಮ್ಮ ಕುಟುಂಬ ಮನೆಯಿಂದ ಬೇರ್ಪಡಿಸಿ ಗಾಳಿ,ಬೆಳಕು ಇಲ್ಲದ ಗೂಡುಗಳಲ್ಲಿ ಇಟ್ಟು ದುಡಿಸಿಕೊಳ್ಳುತ್ತಿದ್ದನು. ಆದರೆ, ಸಂಕಪ್ಪಯ್ಯನ-ಚೋಮನ ಸಂಬಂಧವನ್ನು ಜಿ.ರಾಜಶೇಖರ್‌ರವರು ಸೇರೆಗಾರ ಮನ್ವೇಲರ ಜೊತೆ ಹೋಲಿಸಿ ಸಂಕಪ್ಪಯ್ಯನ ಸಂಬಂಧ ಉತ್ತಮ ಎಂದಿದ್ದಾರೆ. ಈ ಮಾತು ಸರಿಯಾಗಿದೆ.ಅದು ಉತ್ತಮ ಸಂಬಂಧ ಆಗಿದ್ದರೇ ಚೋಮನಿಗೆ ಭೂಮಿಯನ್ನು ಕೊಡುವ ವಿಷಯದಲ್ಲಿ ಯಾಕೆ ಸಂಬಂಧ ದೂರವಾಯಿತು? ಎಂದು ಪ್ರಶ್ನೆ ಮಾಡಬಹುದು.

ರಾಜಶೇಖರ್ ರವರು ಹೇಳಿರುವಂತೆ "ಕಾದಂಬರಿ ಚಿತ್ರಿಸುವ ಬದುಕಿನ ಲೇಖಕ ಹೊರಗಿನವನೇ?ಒಳಗಿನವನೇ ಎಂಬ ಪ್ರಶ್ನೆಯಿಂದ ತೊಡಗುವುದರ ಬದಲು ಕಾದಂಬರಿಯಲ್ಲಿರುವ ಬದುಕಿನ ಚಿತ್ರಣ ನಮ್ಮ ಸಂವೇದನೆಗಳನ್ನು ಜಾಗೃತಗೊಳಿಸುವಂತಹದ್ದೇ ಮತ್ತು ಕಲಾತ್ಮಕವಾಗಿ ಆ ಚಿತ್ರಣ ತೃಪ್ತಿ ಕೊಡುತ್ತದೆಯೇ ಎಂದು ಪರಿಶೀಲಿಸುವುದೇ ಹೆಚ್ಚು ಸರಿಯಾದ ರೀತಿ ಎಂದು ನನ್ನ ಭಾವನೆ.[೬]"

ಇವರ ಮಾತು ನೂರಕ್ಕೆ ನೂರು ಸರಿ ಏಕೆಂದರೆ ಲೇಖಕ ಯಾರಾದರೇ ನಮಗೇನು? ನಮಗೆ ಬೇಕಾಗಿರುವುದು ಒಳಗಿನ ತಿರುಳು, ಚೋಮನದುಡಿಯ ಅಂತರಾಳದಲ್ಲಿ ದೊರಕಿದೆ ಅಷ್ಟು ಸಾಕು, ಆದ್ದರಿಂದ ಸಮಾಜ ಚೇತರಿಕೆಯಾಗುವುದು, ಸಮಾಜದ ಲೋಪವನ್ನು ಸರಿಮಾಡುವುದು ಆದರೆ ಸಾಕು,ಅದನ್ನು ತಿರಸ್ಕಾರ

ಮಾಡಿದರೇ ಅದರಿಂದ ಏನೂ ದೊರಕದು. ಆದ್ದರಿಂದ ಕಾರಂತರ ಜನಪ್ರಿಯತೆ ಇನ್ನೂ ಹೆಚ್ಚು ಆಯಿತು.

೯) ಕಾದಂಬರಿ ಕುರಿತ ಡಿ.ಆರ್.ನಾಗರಾಜರವರ ಬರಹಗಳು:

ಈ ಭಾಗದಲ್ಲಿ ಚೋಮನದುಡಿ ಕುರಿತು ಡಿ.ಆರ್.ನಾಗರಾಜ್ ರವರು ಹೇಳಿರುವ ಮಾತುಗಳು ಜೊತೆಗೆ ನನ್ನ ಮಾತುಗಳನ್ನು ಸೇರಿಸಿದ್ದೇನೆ.

"ಚೋಮ ಒಬ್ಬ ಜೀತದಾಳು, ಜೊತೆಗೆ ಅಸ್ಪೃಶ್ಯ. ತಾನು ಬೆವರು ಸುರಿಸಿ ದುಡಿಯುತ್ತಿರುವ ನೆಲದ ಮೇಲೆಯೇ ಆತನಿಗೆ ಒಡೆತನವಿಲ್ಲ. ಇದು ನಮ್ಮ ನಾಡಿನ ಚಾರಿತ್ರ್ಯಕ ಸತ್ಯ. ತಾನು ಸ್ವಂತಕ್ಕೆ ಗೇಣು ನೆಲ ಸಂಪಾದಿಸಬೇಕು ಎಂಬ ಹಂಬಲ, ಇದಕ್ಕಾಗಿ ಹೋರಾಟ ಇದರ ವಸ್ತು.ಕೊನೆಗೆ ಆ ಪ್ರಯತ್ನದಲ್ಲಿ ಚೋಮ ವಿಫಲನಾಗುತ್ತಾನೆ. ಈ ಕಾದಂಬರಿ ಉದ್ದಕ್ಕೂ ಈ ಸಮಸ್ಯೆಯು ವ್ಯಕ್ತಿ ನಿಷ್ಠವಾಗಿಯೇ ಪ್ರತಿಪಾದಿತವಾಗಿದೆ.[೭]"

ಆಧುನಿಕ ಕನ್ನಡ ಸಾಹಿತ್ಯದ ಅತ್ಯುತ್ತಮ ವಿಮರ್ಶಕರಲ್ಲಿ ಡಿ.ಆರ್.ನಾಗರಾಜ್ ಒಬ್ಬರು. ಅವರ ವಿಮರ್ಶೆಯನ್ನು ನಾನು ವಿಮರ್ಶೆ ಮಾಡುವ ಕೆಲಸಕ್ಕೆ ಮುಂದಾಗುವುದಿಲ್ಲ. ಅದರ ಬದಲಿಗೆ ಅದರ ಜೊತೆ ನನ್ನ ಮಾತುಗಳನ್ನು ಸೇರಿಸಿಕೊಳ್ಳುತ್ತೇನೆ.

ಸ್ವಾತಂತ್ರ ಪೂರ್ವದ ಕಥೆ ಇದು. ಆಗ ದಲಿತ ಅಥವಾ ಬಡವ, ಶ್ರೀಮಂತರ ಜಮೀನಿನಲ್ಲಿ ಜೀತದಾಳಾಗಿ ದುಡಿಯಬೇಕಾಗಿತ್ತು.ಆದರೆ, ಉಳುವವನೇ ಭೂಮಿಯ ಒಡೆಯ ಎಂಬ ನೀತಿಯು ಬಂದ ಮೇಲೆ ದಲಿತರು ಬಡವ ಬಲ್ಲಿದರು ಭೂಮಿಯನ್ನು ಹೊಂದುವ ಹಾಗೆ ಆಯಿತು.ಡಿ.ಆರ್.ನಾಗರಾಜ್ ಹೇಳಿರುವಂತೆ ಇದು ಚಾರಿತ್ರಿಕ ಸತ್ಯ. ಈಗ ಸ್ವಲ್ಪ ಬದಲಾವಣೆ ಹೊಂದಿದೆ.ತನ್ನದೇ ಆದ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ದೇಶದಲ್ಲಿ ಇರುವ ಎಲ್ಲಾ ದಲಿತ ವರ್ಗದವರಿಗೆ ಭೂಮಿಯು ದೊರಕಬೇಕು, ಆಗಲೇ ದೇಶದಲ್ಲಿ ಸಮಾನತೆಯು ಮೂಡಲು ಸಾಧ್ಯ.

ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದ ರೈತರಿಗೆ ತನ್ನದೇ ಆದ ಜಮೀನು ಹೊಂದಿರಬೇಕೆಂಬ ಹಂಬಲ ಇರುತ್ತದೆ. ರೈತರಿಗೆ ಜಮೀನು ಮಾಡುವುದೇ ಒಂದು ಆಸೆ. ಅಂತಹಾ ಆಸೆಯನ್ನು ಚೋಮನು ಹೊಂದಿದ್ದ, ಆದರೆ ಆ ಆಸೆ ಈಡೇರಲಿಲ್ಲ,ಬದಲಿಗೆ ಅವನ ಸಾವು ಈಡೇರಿತು. ಎಂತಹ ದುರಂತ ಕಥೆ, ಅಂದರೆ ಆಸೆ ಪಟ್ಟದ್ದನ್ನು ಪಡೆಯಲು ಆಗದೇ ಅದೇ ವಿಷಯದಲ್ಲಿ ಪ್ರಾಣ ಬಿಟ್ಟನು,ಕೊನೆಗೂ

ಚೋಮನಿಗೆ ನೆಲ ದೊಕಲೇ ಇಲ್ಲ. ನಾಗರಾಜ್ ರು ಹೇಳುವಂತೆ ಈ ಕಾದಂಬರಿ ನೋಡಿದಾಗ ಚೋಮನಿಗೆ ಭೂಮಿ ಏಕೆ ದೊರಕಲಿಲ್ಲ ಎಂಬುದನ್ನು ಕಾರಂತರೂ ಎರಡು ಕಾರಣಗಳನ್ನು ಕೊಟ್ಟಿದ್ದಾರೆ. ಅವನು ಸಂಪಾದಿಸಿದ್ದನ್ನೆಲ್ಲಾ ಕುಡಿದು ಹಾಳು ಮಾಡಿದ ಮತ್ತು ಚೋಮನ ಮಕ್ಕಳು ಅವನ ಬಳಿ ನಿಲ್ಲಲಿಲ್ಲ. ಅದಕ್ಕೆ ಭೂಮಿ ದೊರಕಲಿಲ್ಲ, ಇದು ಎಂತಹಾ ಕಾರಣ? ಚೋಮ ಕುಡುಕ ಆದರೆ ಅವನಿಗೆ ಜಮೀನು ಕೊಡುವ ಹಾಗೆಯೇ ಇಲ್ಲವೇ? ಚೋಮನ ಮಕ್ಕಳು ಇಲ್ಲದಿದ್ದರೇ ಚೋಮನು ಇರಲಿಲ್ಲವೇ? ಕೊಡಿಸುವ ಆಸೆ ಇದ್ದರೆ ಕೊಡಿಸಬಹುದು, ಆದರೆ ಕಾರಂತರಲ್ಲಿ ಚೋಮನಿಗೆ ಜಮೀನು ಕೊಡಿಸುವ ಕನಸು ಸಹಾ ಕಾಣಲಿಲ್ಲ, ಇದನ್ನು ಅನೇಕ ವಿಮರ್ಶಕರು ಟೀಕಿಸುತ್ತಾರೆ. ಕಾರಂತರು ಜಮೀನು ಕೊಡಿಸಲಿಲ್ಲ ಎಂದು ಹೇಳುತ್ತಾರೆ, ಹೌದು ಕಾರಂತರು ಚೋಮನಿಗೆ ಜಮೀನು ಕೊಡಿಸಿ ಅವನ ಬಾಳನ್ನು ಉತ್ತಮಗೊಳಿಸಬಹುದಿತ್ತು ಎಂದು ಹೇಳಬಹುದು.

ಚೋಮ ದಲಿತ ಚರಿತ್ರೆ ಬೆಳೆದುಬಂದ ಕಾಲದಲ್ಲಿ ಬರುತ್ತಾನೆ. ದಲಿತ ಚರಿತ್ರೆ ಆರಂಭವಾಗುವುದು ಮನುವಿನ ಕಾಲದಲ್ಲಿಯೇ, ಒಬ್ಬ ದಲಿತನ ನೆರಳು ಬ್ರಾಹ್ಮಣರ ಮೇಲೆ ಬೀಳುವ ಹಾಗಿರಲಿಲ್ಲ. ಬ್ರಾಹ್ಮಣರು ನಡೆದಾಡುವ ದಾರಿಯಲ್ಲಿ ಸಾಮಾನ್ಯ ದಲಿತ ಓಡಾಡುವ ಹಾಗೇ ಇರಲಿಲ್ಲ. ಅಲ್ಲಿಂದ ಬೆಳೆದುಬಂದ ದಲಿತನ ಚರಿತ್ರೆಯು ಚೋಮನಿಂದ ಮುಂದುವರೆದಿದೆ. ಅದು ಈಗಲೂ ಮುಂದುವರೆದಿದೆ. ಆದರೆ ಆಗಿನಷ್ಟು ಶೋಷಣೆ ನಡೆಯುತ್ತಿಲ್ಲ. ಸಂವಿಧಾನದಲ್ಲಿ ಸಮಾನತೆ ಬಂದ ಮೇಲೆ ಶೋಷಣೆ ಕಡಿಮೆಯಾಗಿದೆ.

ಪಿ.ಲಂಕೇಶ್‌ರವರು ಹೀಗೆ ಹೇಳಿದ್ದಾರೆ. "ನಿಮ್ಮ ಜಾತಿ ಬಗ್ಗೆ ನೀವು ಬರೆದಾಗ ನಾರ್ಸಿಸ್ಟಿಕ್ ಆಗುತ್ತೋ ಏನೋ. ಇನ್ನೊಬ್ಬರು ಬೇರೆ ಜಾತಿಯವರು ನಿಮ್ಮ ಜಾತಿ ಬಗ್ಗೆ ಬರೆದರೆ ಒಳ್ಳೆಯದು ಎಂದು ನನಗನ್ನಿಸುತ್ತೆ. ಚೋಮನದುಡಿ ಬರೆದಾಗ ಅಷ್ಟೊಂದು ಆಳವಾಗಿ ಬರೆದಿದ್ದಾರಲ್ಲಾ. ಅದನ್ನು ಯೋಚನೆ ಮಾಡಬೇಕು.ಎಷ್ಟರ ಮಟ್ಟಿಗೆ ನಾವು ಇನ್ನೊಬ್ಬರ ಜೀವನದ ಬಗ್ಗೆ ಬರೆಯಲು ಸಾಧ್ಯ? 'ಇಲ್ಲಯ್ಯ, ನಿಮಗೇನು ಗೊತ್ತಾಗುತ್ತೆ ಬ್ರಾಹ್ಮಣರಿಗೆ, ನೀವು ಯಾಕೆ ಹರಿಜನರ ಮೇಲೆ ಚೋಮನ ಮೇಲೆ

ಬರೆದ್ರಿ ಅಂದರೆ ಯಾರಪ್ಪನ ಗಂಟೂ ಅಲ್ಲ. ಅವರು ಚೋಮನ ಮೇಲೆ ಬರೀಬೇಕು ಅಂತ ಇದ್ರು ಬರೆದರು.[೮]'

ಈ ಮೇಲಿನ ಲಂಕೇಶ್‌ರವರ ಮಾತುಗಳನ್ನು ಗಮನಿಸಿದಾಗ ಯಾರು ಜೀವನದ ಬಗ್ಗೆ ಯಾರು ಬೇಕಾದರೂ ಬರೆಯಬಹುದು. ಅದನ್ನು ಕೇಳುವ ಅಧಿಕಾರ ಯಾರಿಗೂ ಇಲ್ಲ.ಆದರೆ, ಕಾರಂತರ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು.ಚೋಮ ದಲಿತ ಕುಟುಂಬದಿಂದ ಬಂದವನು, ಆ ದಲಿತ ಕುಟುಂಬದಿಂದ ಬಂದ ವ್ಯಕ್ತಿ ಕಾದಂಬರಿಯನ್ನು ರಚನೆ ಮಾಡಿದ್ದರೇ ಅದು ದಲಿತ ಜೀವನಕ್ಕೆ ಹೆಚ್ಚು ಹತ್ತಿರವಾಗುತ್ತಿತ್ತು. ಚೋಮನ ಸಮಸ್ಯೆಗಳನ್ನು ಇನ್ನೂ ಹೃದಯಕ್ಕೆ ಹತ್ತಿರವಾಗುವಂತೆ ಬರೆಯುತ್ತಿದ್ದರೇನು? ಎಂಬ ನಂಬಿಕೆ, ಕಾರಂತರು ಬರೆದಿರುವುದನ್ನು ವಿರೋಧ ಮಾಡುತ್ತಿಲ್ಲ. ಏಕೆಂದರೆ ಬ್ರಾಹ್ಮಣ ಕುಟುಂಬದಲ್ಲಿ ಬಂದ ಸಾಮಾನ್ಯ ಮನುಷ್ಯ ಸಮಾಜವನ್ನು ಎದುರಿಸಿ ಒಬ್ಬ ಸಾಮಾನ್ಯ ದಲಿತನ ಬಗ್ಗೆ ಬರೆಯುವುದು ಅಸಾಮಾನ್ಯವಾದದ್ದು, ಆದರೂ ದಲಿತ ಬರೆದಿದ್ದರೇ ಅದು ಅವನ ಸ್ವತಃ ತನ್ನ ಜೀವನದ ಅನುಭವವಾಗುತ್ತಿತ್ತು.

ಒಬ್ಬ ದಲಿತ ವ್ಯಕ್ತಿ ದಲಿತ ವ್ಯಕ್ತಿಯ ಬಗ್ಗೆ ಬರೆಯುವುದರಲ್ಲಿ ವಿಶೇಷ ಇಲ್ಲ. ಆದರೆ, ಒಬ್ಬ ಬ್ರಾಹ್ಮಣ ಒಬ್ಬ ದಲಿತ ಕೂಲಿ ಕೆಲಸದವನ ಬಗ್ಗೆ ಅದು ಮಹತ್ ಸಾಧನೆ ಮಾಡಿದ ಹಾಗೆ. ದಲಿತರಲ್ಲದ ಶಿವರಾಮಕಾರಂತರ ಚೋಮನದುಡಿಯನ್ನು ಮೀರಿಸುವ ಮತ್ತೊಂದು ಕೃತಿಯಿಲ್ಲ.ಚೋಮನ ಆವೇಶ ಭಾವುಕತೆ ಮತ್ತು ಅವನ ಮನೋಧರ್ಮ ಬೇರೆ ಯಾವ ಕಾದಂಬರಿಯಲ್ಲೂ ಮೂಡಿಬಂದಿಲ್ಲ. ಬಹುಶಃ ಚೋಮನ ದುಡಿ ಕಾದಂಬರಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮಾಡಿದ್ದರೇ ನೊಬೆಲ್ ಪ್ರಶಸ್ತಿ ಬಂದಿದ್ದರೂ ಅನುಮಾನ ಪಡಬೇಕಾಗಿರಲಿಲ್ಲ.

ಚೋಮ ಕೇವಲ ಒಬ್ಬ ಶೋಷಿತ ದಲಿತನಾಗಿರದೆ ದುಡಿಯ ಮೂಲಕ ತನ್ನ ನೋವನ್ನು ಹೊರ ಹಾಕುವ ಜೀವಿಯೂ ಆಗಿರುತ್ತಾನೆ. ಇಲ್ಲಿ ವಾಸ್ತವವನ್ನು ಮೀರುವ ಅಂಶ ಅಂದರೆ ಚೋಮ ದುಡಿಯನ್ನು ಬಡಿಯುವುದೇ ವಾಸ್ತವವನ್ನು ಮೀರುವ ಒಂದು ಲಕ್ಷಣದಂತೆ ಕಾಣುವುದು. ಚೋಮ ತನ್ನ ನೋವನ್ನು ದುಡಿ ಬಡಿಯುವುದರ ಮೂಲಕ ಹೊರಹಾಕಬಹುದು, ಎಷ್ಟು ನೋವು ಅಂದರೆ ದುಡಿ

ಬಡಿಯುವಾಗ ಕೈ ನೋವಾದಷ್ಟೂ ಅಂತರಾಳದ ನೋವು ದೇಹಕ್ಕೆ ಎಷ್ಟೇ ನೋವು ಆದರೂ ಸಹ ತಡೆಯಬಹುದು. ಮನಸ್ಸಿಗೆ ನೋವಾದರೇ ತಡೆಯಲು ಸಾಧ್ಯವಿಲ್ಲ.

ಸಿದ್ದಲಿಂಗಯ್ಯನವರು ಚೋಮನ ದುಡಿಯಲ್ಲಿರುವ ಚೋಮನ ಮಕ್ಕಳಾದ ಕಾಳ, ನೀಲ, ಬೆಳ್ಳಿ,ಗುರುವ,ತನಿಯ ಇವರ ಬಗ್ಗೆ ಸಾವಿರಾರು ನದಿಗಳು ಕವನ ಸಂಕಲನದಲ್ಲಿ ಚೋಮನ ಮಕ್ಕಳ ಹಾಡು' ಎಂಬ ಕವನ ಬರೆಯುತ್ತಾರೆ. ಈ ಕವನ ಓದಿದಾಗ ಚೋಮನ ಬಡತನದ ಅರಿವು,ಶೋಷಣೆ,ಶ್ರಮಿಕ ವರ್ಗದ ಚೋಮನ ಮಕ್ಕಳು ಎಂಬುದು ತಿಳಿಯುತ್ತದೆ.

ಈ ಕಾದಂಬರಿಯಲ್ಲಿ ಬರುವಂತಹ ಪ್ರಮುಖವಾದ ಎರಡು ಪಾತ್ರಗಳು ಅಂದರೆ ಒಂದು ಚೋಮನ ಪಾತ್ರ ಆದರೆ ಇನ್ನೊಂದು ಪಾತ್ರ ಸಂಕಪ್ಪಯ್ಯನದು.ಕಾದಂಬರಿಯನ್ನು ಸೂಕ್ಷ್ಮವಾಗಿ ಗಮನಿಸಿದರೇ ನಮಗೆ ತಿಳಿಯುವುದೇನೆಂದರೆ, ಇಲ್ಲಿ ಕಾರಂತರ ಸಹಾನುಭೂತಿಗೆ ಚೋಮ ಮಾತ್ರ ಪಾತ್ರನಾಗಿಲ್ಲ. ಸಂಕಪ್ಪಯ್ಯನು ಸಹಾ ಒಳಗಾಗಿದ್ದಾನೆ. ಆದ್ದರಿಂದ ಇದು ವಿಮರ್ಶಕರಿಗೆ ಇಷ್ಟವಾಗದೇ ಇರಬಹುದು.ಬರೀ ಚೋಮನ ಒಬ್ಬನ ಬಗ್ಗೆ ಹೇಳಿದ್ದರೇ ವಿಮರ್ಶಕರು ಕಾರಂತರ ಬಗ್ಗೆ ಆಕ್ಷೇಪ ಎತ್ತುತ್ತಿರಲಿಲ್ಲ ಅನಿಸುತ್ತದೆ.

ಇಲ್ಲಿ ಸಂಪ್ರದಾಯವೂ ಕೆಲಸ ಮಾಡಿರುವುದನ್ನು ಕಾಣಬಹುದು, ಅಂದರೆ ಸಂಕಪ್ಪಯ್ಯನ ತಾಯಿ ಬಹಳ ಸಂಪ್ರದಾಯದ ಮಹಿಳೆ.ಅವರ ಮಾತನ್ನು ತಿರಸ್ಕರಿಸುವ ಹಾಗೇ ಸಂಕಪ್ಪಯ್ಯ ಇರಲಿಲ್ಲ. ಆ ಸಂಪ್ರದಾಯದ ಅಜ್ಜಿ ಇರದಿದ್ದರೇ ಸಂಕಪ್ಪಯ್ಯ ಚೋಮನಿಗೆ ಜಮೀನು ಕೊಡುತ್ತಿದ್ದರೇ ಎಂಬ ಪ್ರಶ್ನೆ ಮೂಡುವುದು.

ದುಡಿಯನ್ನು ಕಾರಂತರು ಎಷ್ಟು ಸಂದರ್ಭಕ್ಕೆ ಅನುಗುಣವಾಗಿ ಬಳಸಿದ್ದಾರೆ.ಅಂದರೆ ಚೋಮ ದುಡಿ ಬಡಿಯುವಾಗ ಅವನ ಮಕ್ಕಳು ತಾಳಕ್ಕೆ ತಕ್ಕಂತೆ ಕುಣಿಯಬೇಕಿತ್ತು. ಬಡಿತ,ಕುಣಿತ ಇವು ಎಂತಹಾ ದುಃಖವನ್ನು ಸಹಾ ಮರೆಸುವಷ್ಟು ಶಕ್ತಿ ಹೊಂದಿವೆ.

ಈ ಮೇಲಿನ ಮಾತುಗಳು ಡಿ.ಆರ್.ನಾಗರಾಜ್‌ರವರ ಮಾತುಗಳಿಗೆ ನನ್ನ ಮಾತುಗಳನ್ನು ಸೇರಿಸಿಕೊಂಡು ಬರೆದಿದ್ದೇನೆ.

ನಾವು ನಮ್ಮ ಜೀವನದಲ್ಲಿನಡೆದ ಕಹಿ ಘಟನೆಗಳನ್ನು ಮರೆಯುವುದಕ್ಕೆ ಸದಾ ಕಾರ್ಯ ನಿರ್ವಹಣೆಯಲ್ಲಿ ತೊಡಗಿರುತ್ತೇವೆ, ಆಗ ಮಾತ್ರ ದುಃಖವನ್ನು ಮರೆಯುವುದಕ್ಕೆ ಸಾಧ್ಯ, ಹಾಗೆಯೇ ಚೋಮನ ಕುಟುಂಬದಲ್ಲಿ ದುಃಖದ ನದಿಯೇ ಹರಿದುಹೋಗುತ್ತಿತ್ತು ಅದನ್ನು ಮರೆಯುವುದಕ್ಕೆ ಚೋಮ ದುಡಿಯನ್ನು ಬಾರಿಸುತ್ತಿದ್ದ ಜೊತೆಗೆ ಅವರ ಮಕ್ಕಳನ್ನು ಕುಣಿಯುವಂತೆ ಹೇಳಿ ಅದರಲ್ಲಿ ತಲ್ಲೀನನಾಗಿ ದುಃಖವನ್ನು ಮರೆಯುತ್ತಿದ್ದನು. ನೋವಿನಿಂದ ನೋವನ್ನು ಮರೆಯುವ ಪರಿಸ್ಥಿತಿ ಚೋಮನಿಗೆ ರೂಢಿಯಾಗಿತ್ತು. ಚೋಮನು ನುಡಿಸುವ ದುಡಿಯಲ್ಲಿ ಯಾವುದೇ ನಾದವಾಗಲಿ, ಮಾಧುರ್ಯವಾಗಲಿ, ಇಂಪಾಗಲಿ ಇರಲಿಲ್ಲ. ಚೋಮನು ಅದನ್ನು ಬಡಿಯುತ್ತಿದ್ದರೆ ಸುತಾಮುತ್ತಾ ಮನೆಗಳಲ್ಲಿ ಯಾರೂ ಸಹಾ ನಿದ್ದೆ ಮಾಡುವ ಹಾಗಿರಲಿಲ್ಲ, ಅದರ ಶಬ್ದ ಕೇಳಿದ ಸಂಕಪ್ಪಯ್ಯನು ಚೋಮನನ್ನು ಹಲವು ಬಾರಿ ಬೈದದ್ದೂ ಸಹಾ ಇದೆ. 'ದುಡಿ'ಯೂ ಸಹಾ ಚೋಮನ ಜೀವನದಂತೆಯೇ ಆಗಿದೆ ಚೋಮನ ಜೀವನ ಸತ್ವವಿಲ್ಲದ್ದು, ಆದರಂತೆ ಆ ದುಡಿಯ ಶಬ್ದವೂ ಸತ್ವವನ್ನು ಕಳೆದುಕೊಂಡ ಹಾಗೆಯೇ ಆಗಿದೆ. ಆದರೂ ಅವನ ದುಃಖವನ್ನು ಮರೆಸುವ ಸಾಧನ ಎಂಬಂತೆ ಚಿತ್ರಿತವಾಗಿದೆ. ದುಡಿಯನ್ನು ಬಡಿಯುವುದು ಒಂದು ವಿಶೇಷ ಕಲೆ ಅದು ಎಲ್ಲಾ ಜನರಿಗೆ ಕರಗತವಾಗಿರುವುದಿಲ್ಲ, ದೇವರು ಕೊಟ್ಟಿರುವ ಕಲೆ ಅದು, ಆದರೆ ಆ ಕಲೆಯ ಜೊತೆ ಒಂದು ಚಟ ಸೇರಿಕೊಂಡಿದೆ ಅದುವೇ ಕುಡಿತ, ಇವೆರಡರಿಂದಲೇ ಚೋಮನು ಬದುಕಿದ್ದಾನೆ.ಇವೆರಡರಲ್ಲಿ ಒಂದನ್ನು ಬಿಟ್ಟೂ ಸಹಾ ಬದುಕಲಾರ. ಇವೆರಡನ್ನೂ ಆಧರಿಸಿಯೇ ಕಾದಂಬರಿ ಮುಂದೆ ಸಾಗುತ್ತಾ ಹೋಗಿದೆ, ಕೊನೆಯಲ್ಲಿ ಚೋಮನ ಜೊತೆಯಲ್ಲಿಯೇ ದುಡಿ, ಕುಡಿತ ಎರಡೂ ಐಕ್ಯವಾಗುತ್ತವೆ, ಆದ್ದರಿಂದ ಇದನ್ನು ಅತ್ಯುತ್ತಮ ದುರಂತ ಕಾದಂಬರಿ ಎಂದೂ ಹೇಳಬಹುದು.

ಕನ್ನಡ ಕಾದಂಬರಿಯ ಲೋಕದಲ್ಲಿ 'ಚೋಮನ ದುಡಿ'ಗೆ ಒಂದು ಉತ್ತಮ ಸ್ಥಾನ ದೊರಕಿದೆ, ಆ ಕಾದಂಬರಿ ದಲಿತ ಜೀವನದ ಜೊತೆಜೊತೆಯೇ ಒಂದು ದುರಂತವನ್ನೂ ಬಹು ನಿಧಾನ ಗತಿಯಲ್ಲಿ ಯಾವುದೇ ಪಕ್ಷ ಬೇಧವನ್ನೂ ಮಾಡದೇ ಮುಕ್ತಾಯವಾಗುತ್ತದೆ, ಅದು ಕಾರಂತರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವುದರ ಜೊತೆಗೆ ಅವರ ಜೀವನ ಧರ್ಮವನ್ನೂ ಪ್ರತಿಬಿಂಬಿಸುತ್ತದೆ.

ಅಡಿ ಟಿಪ್ಪಣಿ:

೧.ಈ ಶತಮಾನದ ನೋಟ , ಸಂ., ಟಿ.ಪಿ. ಅಶೋಕ್,ಪುಟ–71

೨. ಅದೇ, ಪುಟ–೭೧

೩. ಅದೇ, ಪುಟ–೭೪

೪. ಅದೇ, ಪುಟ–೭೮

೫. ಅದೇ. ಪುಟ-೮೦

೬. ಅದೇ. ಪುಟ-೮೪

೭.ಅದೇ ,ಪುಟ-೮೪

೮.ಅದೇ ,ಪುಟ -೮೨

ಅಧ್ಯಾಯ–6

ಉಪಸಂಹಾರ

ಸಾಹಿತ್ಯಲೋಕ ತುಂಬಾ ವಿಶಾಲವಾದ ಸಾಗರದಷ್ಟು ಆವರಿಸಿದೆ.ಇದರ ವಿಸ್ತಾರವನ್ನು ಈಜುವುದು ತುಂಬಾ ಕಷ್ಟ. ಹಾಗೆಯೇ ಇದರ ಆಳವೂ ಕೂಡ, ಹಾಗಾಗಿ ಸಂಪೂರ್ಣವಾಗಿ ಒಬ್ಬ ವ್ಯಕ್ತಿಯೇ ಎಲ್ಲವನ್ನು ತಮ್ಮ ಮುಷ್ಟಿಯಲ್ಲಿ ಹಿಡಿಯುವುದು ಸಾಧ್ಯವಿಲ್ಲ. ಹಾಗೆಂದ ಮಾತ್ರಕ್ಕೆ ಅದನ್ನು ಮೀಯದೆ, ಸುಮ್ಮನೆ ಕುಳಿತುಕೊಳ್ಳುವುದು ನಿರಾಶಾದಾಯಕವಾದ ಸಂಗತಿ.ಆದ್ದರಿಂದ ಆಸಕ್ತಿ ಹೊಂದಿದವರೆಲ್ಲರೂ ಕೂಡ ಒಂದೊಂದು ಹಿಡಿಯನ್ನು ಒಟ್ಟುಗೂಡಿಸುತ್ತಾ ವಿಶಾಲತೆಯನ್ನು ಸಾಗಬೇಕು. ಆಳವನ್ನು ಹೊಕ್ಕಿ ಮೌಲ್ಯಗಳನ್ನು ಸಂಗ್ರಹಿಸಬೇಕು.ಸಂಗ್ರಹಿಸುವಾಗ ಯಾವುದೇ ಬಗೆಯ ಪೂರ್ವಾಗ್ರಹಕ್ಕೆ ಒಳಗಾಗದೇ ಸತ್ಯ ಶೋಧನೆಯತ್ತ ತದೇಕಚಿತ್ತದಿಂದ ಮುನ್ನಡೆಯಬೇಕು. ಪೂರ್ವಾಗ್ರಹಕ್ಕೆ ಒಳಗಾದಲ್ಲಿ ಮೌಲ್ಯಗಳನ್ನು ವಾಸ್ತವಾಂಶವನ್ನು ಹಿಡಿದಿಡುವುದು ಕಷ್ಟ. ಆ ಕಾರಣದಿಂದ ಈ ಅಧ್ಯಯನ ಭಾಗದಲ್ಲಿ ವಾಸ್ತವಾಂಶ, ನೈಜತೆಯ ಕಡೆ ಗಮನ ಹರಿಸಿದ್ದೇನೆ.

ಸಾಹಿತ್ಯದ ಅಭಿರುಚಿಯನ್ನು ಹೊಂದಿರುವ ವ್ಯಕ್ತಿಗಳು ಸದಾ ಆಶಾವಾದಿಗಳಾಗಿರಬೇಕೇ ವಿನಃ ನಿರಾಶೆಯನ್ನು ಹೊಂದಬಾರದು.ನಿರಾಶೆಯ ಸಂದರ್ಭ ಬಂದಾಗಲೂ ಸಹಾ ಕುಗ್ಗದೆ, ಹಿಂಜರಿಯದೆ ಸತತ ಪ್ರಯತ್ನದ ಕಡೆ ಸಾಗುತ್ತಿರಬೇಕು. ಆಗ ಪ್ರಗತಿಯ ಪಥದತ್ತ ಸಾಗುವುದು ಸುಲಭವಾಗುವುದು. ಸಾಹಿತ್ಯದ ಅಭಿರುಚಿಯ ಅನುಸಾರ ಮೌಲ್ಯಯುತವಾದ ವಿಷಯವಾದ 'ಚೋಮನದುಡಿಕುರಿತ ವಿಮರ್ಶೆಗಳ ಅಧ್ಯಯನ' ಎಂಬುದನ್ನು ಈ ಅಧ್ಯಯನದಲ್ಲಿ ದೀರ್ಘವಾದ ಚರ್ಚೆಯೊಂದಿಗೆ ವಾಸ್ತವಾಂಶದ ದಾರಿಯಲ್ಲಿ ಸಾಗಿದ್ದೇನೆ.

ಚೋಮನದುಡಿ ಕಾದಂಬರಿಯಲ್ಲಿ ಬರುವ ಸಾಮ್ಯ ಮತ್ತು ವೈಷಮ್ಯಗಳನ್ನು ವಿಮರ್ಶಕರ ಮಾತುಗಳೊಂದಿಗೆ ನನ್ನ ಮಾತುಗಳನ್ನು ಸೇರಿಸಿಕೊಂಡು ಕಾದಂಬರಿಯ ನೈಜ್ಯಾಂಶಗಳನ್ನು ಸವೆಸಿದ್ದೇನೆ.

ಇಂತಹ ವಸ್ತುವಿನಲ್ಲಿ ಮುಖ್ಯವಾಗಿ ಸ್ವಾತಂತ್ರ ಪೂರ್ವದ ಸಾಮಾಜಿಕ, ಧಾರ್ಮಿಕ, ರಾಜಕೀಯ ಅಂಶಗಳನ್ನು ಗಮನಿಸಬಹುದು. ಇಂತಹ ಅಂಶಗಳಲ್ಲಿ ಕಂಡು

ಬಂದ ಅಸಮಾನತೆಯನ್ನೇ ಆರಿಸಿಕೊಂಡ ಕಾರಂತರು ಚೋಮನದುಡಿಯ ಮೂಲಕ ಹೊರಹಾಕಿದ್ದಾರೆ.

ನಮ್ಮ ಸಮಾಜದ ನಡುವೆ ಇರುವ ಸಮಸ್ಯೆಯನ್ನು ಗುರುತಿಸಿಯೂ ಅದನ್ನು ವಿರೋಧಿಸುವುದು ಸಾಧ್ಯವಾಗುವುದಿಲ್ಲ. ಅದರಲ್ಲಿ ಕಾರಂತರು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ ಒಬ್ಬ ದಲಿತನ ಬಗ್ಗೆ ಅದು ಸ್ವಾತಂತ್ರ ಪೂರ್ವದಲ್ಲಿಯೇ ರಚಿಸಿರುವುದು ಸಾಧನೆ. ಆದರೂ ಸಹಾ ಹಲವು ವಿಮರ್ಶಕರು ಕಾರಂತರ ಚೋಮನದುಡಿಯ ಬಗ್ಗೆ ಅವರದೇ ಆದ ಮಾತುಗಳನ್ನು ಬಳಸಿ ವಿಮರ್ಶಾ ಲೇಖನಗಳನ್ನು ರಚನೆ ಮಾಡಿದ್ದಾರೆ. ಅದರಲ್ಲಿ ಟಿ.ಪಿ.ಅಶೋಕರು ಪ್ರಮುಖರಾಗಿ ಕಂಡುಬರುತ್ತಾರೆ. ಹಾಗೆಯೇ ಡಿ.ವಿಜಯ, ಸುಮಿತ್ರಾಬಾಯಿ, ಎಸ್.ಅನಂತನಾರಾಯಣ, ಜಿ.ರಾಜಶೇಖರ್,ಡಿ.ಆರ್.ನಾಗರಾಜ್ ಇವರುಗಳಲ್ಲದೇ ಇನ್ನೂ ಅನೇಕ ವಿಮರ್ಶಕರು ಈ ಕಾದಂಬರಿಯನ್ನು ಕುರಿತು ತಮ್ಮದೇ ಆದ ಅಭಿಪ್ರಾಯ ತಿಳಿಸಿದ್ದಾರೆ. ಅದರಲ್ಲಿ ನಾನು ಈ ಮೇಲಿನ ವಿಮರ್ಶಕರ ಲೇಖನಗಳನ್ನು ನನ್ನ ಅಧ್ಯಯನದಲ್ಲಿ ತೊಡಗಿಸಿದ್ದೇನೆ.

ಈ ಅಧ್ಯಯನ ಭಾಗದಲ್ಲಿ ಆರಿಸಿಕೊಂಡಿರುವ ವಿಷಯವೂ ವಿಶೇಷವಾಗಿ ಕಂಡುಬಂದರೂ ಅಧ್ಯಯನ ವಿಧಾನವೂ ವಿಶಿಷ್ಟವಾಗಿ ಕಂಡು ಬಂದಿದೆ. ವಿಮರ್ಶಕರು ವಿಮರ್ಶೆ ಬರೆಯುವಾಗ ಪೂರ್ವಾಗ್ರಹಕ್ಕೆ ಒಳಗಾಗಿರಬಹುದು ಅಥವಾ ಒಳಗಾಗದೇ ಇರಬಹುದು.ಆದರೆ ನಾನು ಯಾವುದೇ ಪೂರ್ವಾಗ್ರಹಕ್ಕೆ ಒಳಗಾಗದೇ ಏಕಮುಖವಾಗಿ ಅಧ್ಯಯನ ನಡೆಸದೇ ಬಹುಮುಖವಾಗಿ ಯೋಚಿಸಿ ಅಧ್ಯಯನ ನಡೆಸಿದ್ದೇನೆ.

ಮೇಲಿನ ಅಧ್ಯಯನ ಭಾಗದಲ್ಲಿ ಬರುವ ವಿಮರ್ಶಕರು ನೇರವಾಗಿ ಕಾರಂತರ ಚೋಮನದುಡಿಯನ್ನು ಅಧ್ಯಯನ ಮಾಡಿದರೇ ನಾನು ಚೋಮನದುಡಿ ಮೇಲೆ ರಚನೆಗೊಂಡಿರುವ ವಿಮರ್ಶೆಗಳನ್ನು ಅಧ್ಯಯನ ಮಾಡಿ ಚೋಮನದುಡಿಯನ್ನು ಬಹಳ ಹತ್ತಿರದಿಂದ ನೋಡಲು ಪ್ರಯತ್ನಿಸಿದ್ದೇನೆ. ಈ ಅಧ್ಯಯನದ ವಸ್ತುವನ್ನು

ನಿರ್ಧಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ, ವಿವಿಧ ವಸ್ತುವನ್ನು ಒಳಗೊಂಡ ಗುಚ್ಛದಂತೆ ಈ ಅಧ್ಯಯನ ಭಾಗವೂ ಕಂಡುಬರುವುದು.

ಕಾರಂತರ 'ಚೋಮನದುಡಿ' ಕಾದಂಬರಿಯು ಸ್ವಾತಂತ್ರಪೂರ್ವ ದಿಂದಲೇ ವಿಮರ್ಶೆಗಳನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಬಂದಿದೆ. ಅದರಲ್ಲೂ ಬ್ರಾಹ್ಮಣ ಸಮುದಾಯದಿಂದ ಬಂದ ಲೇಖಕನು ದಲಿತ ಕುಟುಂಬದ ನೈಜ ಚಿತ್ರಣವನ್ನು ಕೊಡಲು ಸಾಧ್ಯವಿಲ್ಲ ಎಂಬ ಕಾರಣದಿಂದಲೇ ಚೋಮನದುಡಿಯನ್ನು ಒಬ್ಬ ದಲಿತ ಕವಿಯೇ ರಚನೆ ಮಾಡಿದ್ದರೇ ಚೋಮನನ್ನು ಮತ್ತು ಅವನ ಕುಟುಂಬವನ್ನು ಇನ್ನೂ ಹತ್ತಿರದಿಂದ ನೋಡಬಹುದಿತ್ತು. ಕಾರಂತರು ಒಬ್ಬ ದಲಿತ ಲೇಖಕ ಬರೆದ ಹಾಗೆ ಬರೆಯಲು ಸಾಧ್ಯವಿಲ್ಲ ಎಂದು, ಇಂತಹ ವಿಮರ್ಶಾ ಮಾತುಗಳನ್ನು ಸೇರಿಸಿಕೊಂಡು ನನ್ನ ಅಧ್ಯಯನವೂ ಗಟ್ಟಿಆಗುವಂತೆ ಮಾಡಿದ್ದೇನೆ.

ಒಟ್ಟಿನಲ್ಲಿ ಕಾರಂತರ ಜೀವನದೃಷ್ಟಿ ಅವರ ಕಾದಂಬರಿಗಳ ಮೇಲೆ ನೇರವಾಗಿ ಪ್ರಭಾವ ಬೀರಿರುವುದು.ಅವರು ತಮ್ಮ ದಿನನಿತ್ಯದ ಜೀವನದಲ್ಲಿ ನಡೆದ ಘಟನೆಗಳನ್ನು ಕಾದಂಬರಿ ರೂಪದಲ್ಲಿ ತಂದಿದ್ದಾರೆ. ಒಂದು ವಸ್ತುವನ್ನು ಉಜ್ಜಿ ನೋಡಿದಾಗ ಅದರ ನಿಜಾಂಶಗಳು, ಹೊಳಹು, ಗುಣ ಎಲ್ಲಾ ತಿಳಿಯುತ್ತದೆ. ಹಾಗೆಯೇ ಕಾರಂತರ ಕಾದಂಬರಿಗಳನ್ನು ಉಜ್ಜಿ, ವಿಮರ್ಶಿಸಿ , ಟೀಕಿಸಿ, ನೋಡಿದಂದಿನಿಂದ ಅವರ ವ್ಯಕ್ತಿತ್ವವೂ ಪ್ರಕಾಶಿಸತೊಡಗಿತು. ಅಂತಹ ಕಾರ್ಯವನ್ನು ನಾನು ಈ ಅಧ್ಯಯನ ಭಾಗದಲ್ಲಿ ಮಾಡಿದ್ದೇನೆ. ಅದರ ಜೊತೆಗೆ ಮೂಲ ಕಾದಂಬರಿಗಾಗಲೀ ಮತ್ತು ಮೂಲ ವಿಮರ್ಶಾ ಕೃತಿಗಳಿಗಾಗಲೀ ಧಕ್ಕೆ ಬಾರದ ಹಾಗೆ ಅಧ್ಯಯನ ನಡೆಸಿದ್ದೇನೆ ಎಂದು ಭಾವಿಸಿದ್ದೇನೆ.

ಅನುಬಂಧ

ಆಕರ ಗ್ರಂಥಗಳು

1. ಟಿ.ಪಿ.ಅಶೋಕ: ಶಿವರಾಮಕಾರಂತರ ಕಾದಂಬರಿಗಳಲ್ಲಿ ಆಧುನಿಕ ಪ್ರಕ್ರಿಯೆ
2. ಟಿ.ಪಿ.ಅಶೋಕ್: ಸಂ: ಈ ಶತಮಾನದ ನೋಟ
3. ಟಿ.ಪಿ.ಅಶೋಕ್: ಸಂ: ಕಾರಂತರ ಮಂಥನ
4. ಶಿವರಾಮಕಾರಂತ: ಚೋಮನ ದುಡಿ
5. ಡಾ.ಸುನಿತಾ ಎಂ.ಶೆಟ್ಟಿ: ಶಿವರಾಮಕಾರಂತರ ಕಾದಂಬರಿಗಳಲ್ಲಿ ಸ್ತ್ರೀ
6. ಡಾ.ಬಿ.ಎನ್.ಸುಮಿತ್ರಾ ಬಾಯಿ:ಅಂಗಳದೊಳಗಿನ ಕಡಲು

ಪರಾಮರ್ಶನ ಗ್ರಂಥಗಳು:

1.ಪ್ರೊ. ಅರವಿಂದ ಮಾಲಗತ್ತಿ:ಸಂ. ಕನ್ನಡ ವಿಮರ್ಶೆಯ ಮಾರ್ಗ

2.ಪ್ರೊ.ಎಸ್.ಅನಂತನಾರಾಯಣ್: ಕಾರಂತರ ಕಾದಂಬರಿಗಳಲ್ಲಿ ನಿಸರ್ಗ:1991

3.ಪ್ರೊ.ಎಸ್.ಅನಂತನಾರಾಯಣ್: ಕಾರಂತರ ಕಾದಂಬರಿಗಳು:1948

4. ವಿ.ಎಂ.ಇನಾಂದಾರ್:ಶಿವರಾಮಕಾರಂತರ ಬದುಕು ಬರಹ:1978

5. ವಿ.ಎಂ.ಇನಾಂದಾರ್:ಪಾಶ್ಚಾತ್ಯ ಕಾವ್ಯ ಮೀಮಾಂಸೆ

6.ಡಾ.ಗುರುಲಿಂಗ ಕಾಪಸೆ:ಸಂ ಕರ್ನಾಟಕ ಸಾಹಿತ್ಯ ಅಕಾಡಮಿ:ಶಿವರಾಮಕಾರಂತರ ಸಾಂಸ್ಕೃತಿಕ ಅನುಸಂಧಾನ:2003

7. ಜಿ.ಎಸ್.ಭಟ್ಟ:ಕೆ.ವೈ.ಶಿವಕುಮಾರ್:ಕಾರಂತರ ಕೆಲವು ಮುಖಗಳು:1982

8. ಕರ್ನಾಟಕ ಸಾಹಿತ್ಯ ಅಕಾಡೆಮಿ: ಸಾಲು ದೀಪಗಳು

9. ಡಾ.ತಾಳ್ತಜೆ ವಸಂತಕುಮಾರ್: ಕರ್ನಾಟಕ ಸಾಹಿತ್ಯ ಅಕಾಡೆಮಿ: ಸಂ ಶಿವರಾಮಕಾರಂತ:2003

10.ಎಲ್.ಎಸ್.ಶೇಷಗಿರಿರಾವ್: ಹೊಸಗನ್ನಡ ಸಾಹಿತ್ಯ ಚರಿತ್ರೆ

11.ಜಿ.ಎಸ್.ಶಿವರುದ್ರಪ್ಪ:ವಿಮರ್ಶೆಯ ಪೂರ್ವ ಪಶ್ಚಿಮ

ಪತ್ರಿಕೆಗಳು:

1.ಪ್ರಜಾವಾಣಿ ದಿನಪತ್ರಿಕೆ

2.ಕನ್ನಡಪ್ರಭ ದಿನಪತ್ರಿಕೆ